ಗುರುವಾರ, ಫೆಬ್ರುವರಿ 26, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 57 | ಪುಟ 12

prajavani.net prajavani ● www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ರಚಿನ್ ಆಲ್‌ರೌಂಡ್ ಆಟ



ರಚಿನ್ ರವೀಂದ್ರ ಅವರ ಆಲ್‌ರೌಂಡ್ ಆಟದ (32 ರನ್ ಹಾಗೂ 27ಕ್ಕೆ4) ಬಲದಿಂದ ನ್ಯೂಜಿಲೆಂಡ್ ತಂಡವು ಟಿ20 ವಿಶ್ವಕಪ್ 'ಸೂಪರ್ 8'ರ ಪಂದ್ಯದಲ್ಲಿ ಬುಧವಾರ 61 ರನ್‌ಗಳಿಂದ ಶ್ರೀಲಂಕಾ ತಂಡವನ್ನು ಮಣಿಸಿತು

ಸೆನ್ಸೆಕ್ಸ್ 82,276 | ನಿಫ್ಟಿ 25,482 | $/₹ 90.91 | ಚಿನ್ನ (Std. 10g) ₹1,66,650 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,83,200 (ಬೆಂಗಳೂರು)

ಸೌರ ಉತ್ಪನ್ನಗಳಿಗೆ ಭಾರಿ ಸುಂಕ

ಶೇಕಡ 10ರಷ್ಟು ಸುಂಕದ ಬೆನ್ನಲ್ಲೇ ಅಮೆರಿಕದ ಆಡಳಿತದಿಂದ ಇನ್ನೊಂದು ತೀರ್ಮಾನ

ನವದೆಹಲಿ (ಪಿಟಿಐ): ಭಾರತದಿಂದ ಅಮೆರಿಕ ಪ್ರವೇಶಿಸುವ ಕೆಲವು ಬಗೆಯ ಸೌರ ಉತ್ಪನ್ನಗಳ ಮೇಲೆ ಅಲ್ಲಿನ ಆಡಳಿತವು ಶೇಕಡ 125.87ರಷ್ಟು ಸುಂಕ ವಿಧಿಸಿದೆ.



ಈ ಸೌರ ಉತ್ಪನ್ನಗಳಿಗೆ ಭಾರತದ ಸರ್ಕಾರವು 'ನ್ಯಾಯಸಮ್ಮತವಲ್ಲದ ಬಗೆಯಲ್ಲಿ ಸಬ್ಸಿಡಿಗಳನ್ನು ನೀಡುತ್ತಿರುವ ಕಾರಣಕ್ಕಾಗಿ ಹೆಚ್ಚುವರಿ ಸುಂಕ ವಿಧಿಸಲಾಗಿದೆ' ಎಂದು ಅಮೆರಿಕ ಹೇಳಿದೆ. ಇಂಡೊನೇಷ್ಯಾ ಮತ್ತು ಲಾವೋಸ್‌ನಿಂದ ಅಮೆರಿಕ ಪ್ರವೇಶಿಸುವ ನಿರ್ದಿಷ್ಟ ಸೌರ ಉತ್ಪನ್ನಗಳ ಮೇಲೆಯೂ ಅಮೆರಿಕ ಸರ್ಕಾರ ಬೇರೆ ಬೇರೆ ಪ್ರಮಾಣದಲ್ಲಿ ಸುಂಕ ವಿಧಿಸಿದೆ.

ವ್ಯಾಪಾರ ಒಪ್ಪಂದ ಕುರಿತ ಮಾತುಕತೆಯ ವಿಚಾರವಾಗಿ ಇನ್ನಷ್ಟು ಅನಿಶ್ಚಿತತೆಗೆ ಕಾರಣವಾದ ಸುಂಕ ಏರಿಕೆ

ಭಾರತದ ಸೌರ ಉತ್ಪನ್ನಗಳ ಮೇಲೆ ವಿಧಿಸಿರುವ ಸುಂಕವು ಈಗಾಗಲೇ ಜಾರಿಗೆ ಬಂದಿರುವ ಶೇ 10ರಷ್ಟು ಸುಂಕದ ಮೇಲೆ ಹೆಚ್ಚುವರಿಯಾಗಿ ಅನ್ವಯ ಆಗಲಿದೆ. ಅಮೆರಿಕ ಸರ್ಕಾರ ಹೊರಡಿಸಿರುವ ಆದೇಶದಲ್ಲಿ ನೀಡಿರುವ ವಿವರದ ಪ್ರಕಾರ, 2022ರಲ್ಲಿ ಅಮೆರಿಕವು ಭಾರತದಿಂದ ಆಮದು ಮಾಡಿಕೊಂಡ ಸೌರ ಉತ್ಪನ್ನಗಳ ಮೊತ್ತವು 83.86 ಮಿಲಿಯನ್ ಡಾಲರ್ (ಇಂದಿನ ಅಂದಾಜು ₹762 ಕೋಟಿ) ಆಗಿತ್ತು. ಇದು, 2024ರಲ್ಲಿ 792 ಮಿಲಿಯನ್ ಡಾಲರ್‌ಗೆ (ಇಂದಿನ ಅಂದಾಜು ₹7,204 ಕೋಟಿ) ತಲುಪಿದೆ.

'ನ್ಯಾಯಸಮ್ಮತವಲ್ಲದ ಬಗೆಯಲ್ಲಿ ಸಬ್ಸಿಡಿ ಪಡೆದು, ಅಮೆರಿಕದ ಮಾರುಕಟ್ಟೆ ಪ್ರವೇಶಿಸುವ' ಭಾರತದ ಸೌರ ಉತ್ಪನ್ನಗಳ ಮೇಲಿನ ಸುಂಕದ ಪ್ರಮಾಣದ ಬಗ್ಗೆ ಅಮೆರಿಕವು ಜುಲೈನಲ್ಲಿ ಅಂತಿಮ ತೀರ್ಮಾನ ಪ್ರಕಟಿಸುವ ನಿರೀಕ್ಷೆ ಇದೆ.

ಭಾರತದ ಕಂಪನಿಗಳ ಮೇಲೆ ವಿಧಿಸುವ ಸುಂಕದ ಕಾರಣದಿಂದಾಗಿ, ಅಮೆರಿಕದ ಕಂಪನಿಗಳಿಗೆ ಒಂದಿಷ್ಟು ಅನುಕೂಲ ಆಗುತ್ತದೆ.

▶8

ಪರಿಣಾಮ: ಉದ್ಯಮದಿಂದ ಮಿಶ್ರ ಅಭಿಪ್ರಾಯ

ನವದೆಹಲಿ/ಬೆಂಗಳೂರು: ಭಾರತದ ಕೆಲವು ಸೌರ ಉತ್ಪನ್ನಗಳ ಮೇಲಿನ ಸುಂಕವನ್ನು ಅಮೆರಿಕವು ಹೆಚ್ಚಿಸಿರುವುದರ ಪರಿಣಾಮವು ತಮ್ಮ ಮೇಲೆ ಸೀಮಿತವಾಗಿ ಇರಲಿದೆ ಎಂದು ಸೌರಫಲಕ ತಯಾರಿಕಾ ವಲಯದ ಪ್ರಮುಖ ಕಂಪನಿಗಳಾದ ವಿಕ್ರಮ್ ಸೋಲಾರ್, ವಾರೀಸ್ ಎನರ್ಜೀಸ್, ಪ್ರೀಮಿಯರ್ ಎನರ್ಜೀಸ್ ಹೇಳಿವೆ.

ಆದರೆ ಪರಿಣಾಮವು ಗಂಭೀರವಾಗಿ ಇರಬಹುದು ಎಂದು ಕೆಲವು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅಮೆರಿಕವು ವಿಧಿಸಿರುವ ಭಾರಿ ಪ್ರಮಾಣದ ಸುಂಕವು ಭಾರತದ ಕಂಪನಿಗಳಿಗೆ ತಮ್ಮ ಉತ್ಪನ್ನಗಳನ್ನು ಬೇರೆ ಮಾರುಕಟ್ಟೆಗಳಿಗೂ ರಫ್ತು ಮಾಡಲು ಒಂದು ಅವಕಾಶವಾಗಿ ಒದಗಿಬರಬಹುದು ಎಂದು ಇನ್ವೆಸ್ಟ್‌ಮೆಂಟ್ ಬ್ಯಾಂಕಿಂಗ್ ಸಂಸ್ಥೆ ಒಸ್ತಾರಾ ಅಡ್ವೈಸರ್ಸ್‌ನ ಸಿಇಒ ವಸುಧಾ ಮಾಧವನ್ ಹೇಳಿದ್ದಾರೆ.

'ಅಮೆರಿಕದಲ್ಲಿನ ನಮ್ಮ ವಹಿವಾಟುಗಳು ಭಾರತದಿಂದ ಸೌರಫಲಕ ತರಿಸಿಕೊಳ್ಳುವುದನ್ನು ಅವಲಂಬಿಸಿಲ್ಲ. ಆ ಮಾರುಕಟ್ಟೆಗೆ ನಾವು ಬೇರೆ ಬೇರೆ ಕಡೆಗಳಿಂದ ತರಿಸಿಕೊಳ್ಳುವ ವ್ಯವಸ್ಥೆಯನ್ನು ಈಗಾಗಲೇ ಹೊಂದಿದ್ದೇವೆ. ಹೀಗಾಗಿ ನಮ್ಮ ಮೇಲೆ ಹಣಕಾಸಿನ ದೃಷ್ಟಿಯಿಂದ ಆಗುವ ಪರಿಣಾಮ ಸೀಮಿತವಾಗಿರಲಿದೆ' ಎಂದು ವಿಕ್ರಮ್ ಸೋಲಾರ್ ಕಂಪನಿಯ ಸಿಎಂಡಿ ಗ್ಯಾನೇಶ್ ಚೌಧರಿ ಹೇಳಿದ್ದಾರೆ.

'ಈ ಹಂತದಲ್ಲಿ ಅಮೆರಿಕದಲ್ಲಿ ಆಗಬೇಕಿರುವ ಕೆಲಸಗಳನ್ನು ಮಾಡಲು ಯಾವುದೇ ಸಮಸ್ಯೆ ಇಲ್ಲ' ಎಂದು ವಾರೀಸ್ ಎನರ್ಜೀಸ್ ಕಂಪನಿಯ ಹಣಕಾಸು ವಿಭಾಗದ ಸಮೂಹ ಮುಖ್ಯಸ್ಥ ಅಭಿಷೇಕ್ ಪಾರೀಖ್ ಹೇಳಿದ್ದಾರೆ.

ಅಮೆರಿಕದ ಹೊಸ ಸುಂಕದಿಂದಾಗಿ ತಮ್ಮ ವಹಿವಾಟಿಗೆ ಕೂಡ ಯಾವುದೇ ಧಕ್ಕೆ ಇಲ್ಲ ಎಂದು ಪ್ರೀಮಿಯರ್ ಎನರ್ಜೀಸ್‌ನ ಹಿರಿಯ ಅಧಿಕಾರಿ ವಿನಯ್ ರುಸ್ತಾಗಿ ಹೇಳಿದ್ದಾರೆ.

ಭಾರತದ ಸೌರ ಉತ್ಪನ್ನಗಳ ಮೇಲೆ ವಿಧಿಸಲಾಗಿರುವ ಹೆಚ್ಚುವರಿ ಸುಂಕವು ಅವುಗಳ ರಫ್ತು ಪ್ರಮಾಣ ಕಡಿಮೆ ಮಾಡಿ, ಅವು ಭಾರತದ ಮಾರುಕಟ್ಟೆಯಲ್ಲೇ ಉಳಿಯುವಂತೆ ಮಾಡಬಹುದು. ಇದರಿಂದಾಗಿ ದೇಶಿ ಮಾರುಕಟ್ಟೆಯಲ್ಲಿ ದರ ಪೈಪೋಟಿ ಹೆಚ್ಚಬಹುದು ಎಂದು ದತ್ತಾ ಪವರ್ ಇನ್ಫ್ರಾ ಪ್ರೈ. ಲಿ. ಕಂಪನಿಯ ಹಿರಿಯ ಉಪಾಧ್ಯಕ್ಷ ತರುಣ್ ಪಧಿ ಹೇಳಿದ್ದಾರೆ.

'ಶೇ 125ರಷ್ಟು ಸುಂಕ ವಿಧಿಸಿರುವುದು ಭಾರತದ ಸೌರ ಉತ್ಪನ್ನಗಳ ರಫ್ತುದಾರರಿಗೆ ದೊಡ್ಡ ಏಟು. ಈ ಪರಿಯ ಸುಂಕದಿಂದಾಗಿ ಅಮೆರಿಕ ಮಾರುಕಟ್ಟೆಯು ವಾಣಿಜ್ಯ ಚಟುವಟಿಕೆಯ ದೃಷ್ಟಿಯಿಂದ ಅನುಕೂಲಕರ ಅಲ್ಲದ ಸ್ಥಿತಿಗೆ ತಲುಪುತ್ತದೆ' ಎಂದು ಸರಕು ಸಾಗಣೆ ವಹಿವಾಟಿನಲ್ಲಿ ತೊಡಗಿಸುವ ಜಾಸ್ಪರ್ ಶಿಪ್ಪಿಂಗ್‌ನ ಸಿಇಒ ಪುಷ್ಪಂಕ್ ಕೌಶಿಕ್ ಹೇಳಿದ್ದಾರೆ.

ಇಸ್ರೇಲ್ ಸಂಸತ್ತಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಷಣ

ಭಯೋತ್ಪಾದನೆ ನಿಗ್ರಹ ಜಾಗತಿಕ ಯತ್ನ ಅಗತ್ಯ

ಜೆರುಸಲೇಂ (ಪಿಟಿಐ): ಭಯೋತ್ಪಾದನೆಯನ್ನು ಎದುರಿಸಲು ಜಾಗತಿಕ ಮಟ್ಟದಲ್ಲಿ ನಿರಂತರ ಮತ್ತು ಸಂಘಟಿತ ಪ್ರಯತ್ನದ ಅಗತ್ಯವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದರು.

ಇಸ್ರೇಲ್ ಸಂಸತ್ತು 'ಕನೆಸೆಟ್' ಉದ್ದೇಶಿಸಿ ಬುಧವಾರ ಮಾತನಾಡಿದ ಅವರು, 'ಭಯೋತ್ಪಾದನೆಯು ವಿಶ್ವದೆಲ್ಲೆಡೆ ಶಾಂತಿಗೆ ಧಕ್ಕೆ ತರುತ್ತದೆ. ಆದ್ದರಿಂದ ಭಾರತವು ಶಾಶ್ವತ ಶಾಂತಿ ಮತ್ತು ಪ್ರಾದೇಶಿಕ ಸ್ಥಿರತೆಗೆ ಕೊಡುಗೆ ನೀಡುವ ಎಲ್ಲಾ ಪ್ರಯತ್ನಗಳನ್ನು ಬೆಂಬಲಿಸುತ್ತದೆ' ಎಂದು ಹೇಳಿದರು.

'ಮುಂಬೈ ಮೇಲಿನ ಭಯೋತ್ಪಾದಕ ದಾಳಿಯಲ್ಲಿ ಇಸ್ರೇಲ್ ನಾಗರಿಕರು ಸೇರಿದಂತೆ ಅಮಾಯಕರು ಬಲಿಯಾದ ಘಟನೆಯನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತೇನೆ. ಇಸ್ರೇಲ್‌ನಂತೆಯೇ, ಭಾರತವೂ ಭಯೋತ್ಪಾದನೆ ವಿರುದ್ಧ 'ಶೂನ್ಯ ಸಹಿಷ್ಣುತೆ' ನೀತಿಯನ್ನು ಹೊಂದಿದೆ. ಈ ವಿಷಯದಲ್ಲಿ ಇಬ್ಬಗೆ ನೀತಿಗೆ ಅವಕಾಶವಿಲ್ಲ' ಎಂದರು.



ಪ್ರಧಾನಿ ನರೇಂದ್ರ ಮೋದಿ ಅವರನ್ನು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮತ್ತು ಪತ್ನಿ ಸಾರಾ ಅವರು ಬೆನ್ ಗುರಿಯನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಂಡರು ಪಿಟಿಐ ಚಿತ್ರ

'ಕಳೆದ ಕೆಲವು ವರ್ಷಗಳಿಂದ, ಭಾರತವು ವಿಶ್ವದಲ್ಲೇ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿದೆ. ಅದೇ ಸಮಯದಲ್ಲಿ, ಇಸ್ರೇಲ್ ನಾವೀನ್ಯತೆ ಮತ್ತು ತಂತ್ರಜ್ಞಾನದ ಕ್ಷೇತ್ರದಲ್ಲಿ ಜಾಗತಿಕ ಶಕ್ತಿಯಾಗಿದೆ. ಇದು ನಮ್ಮ ಭವಿಷ್ಯದ ಪಾಲುದಾರಿಕೆಗೆ ಭದ್ರ ತಳಹದಿ ಸೃಷ್ಟಿಸುತ್ತದೆ' ಎಂದು ತಿಳಿಸಿದರು.

▶8

ಚಿನಕುರುಳಿ ಪ್ರಕಾಶ್ ಶೆಟ್ಟಿ



ವರ್ಷದಲ್ಲಿ 127 ಕೆ.ಜಿ ಚಿನ್ನದ ಕಳ್ಳ ಸಾಗಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಟಿ ರನ್ಯಾ ರಾವ್ ಹಾಗೂ ಸಹಚರರು ಒಂದು ವರ್ಷದಲ್ಲಿ ₹102.55 ಕೋಟಿ ಮೌಲ್ಯದ 127 ಕೆ.ಜಿ ಚಿನ್ನವನ್ನು ಕಳ್ಳಸಾಗಣೆ ಮಾಡಿದ್ದಾರೆ' ಎಂದು ಜಾರಿ ನಿರ್ದೇಶನಾಲಯವು (ಇ.ಡಿ) ಹೇಳಿದೆ.

ವಿಶೇಷ ನ್ಯಾಯಾಲಯಕ್ಕೆ ಇ.ಡಿ ಬುಧವಾರ ದೋಷಾರೋಪ ಪಟ್ಟಿ ಸಲ್ಲಿಸಿದೆ.



ರನ್ಯಾ ರಾವ್

ದುಬೈನಿಂದ ಚಿನ್ನ ಕಳ್ಳ ಸಾಗಣೆ ಮಾಡುತ್ತಿದ್ದ ಆರೋಪದಡಿ ನಟಿ ರನ್ಯಾ ರಾವ್ ಅವರನ್ನು ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 2025ರ ಮಾರ್ಚ್ 4ರಂದು ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಅಧಿಕಾರಿಗಳು ಬಂಧಿಸಿ ಅಪಾರ ಪ್ರಮಾಣದ ನಗದು ಹಾಗೂ ಚಿನ್ನದ ಬಿಸ್ಕತ್‌ಗಳನ್ನು ಜಪ್ತಿ ಮಾಡಿದ್ದರು.

▶8

ಹಣಕಾಸಿನ ಕೊರತೆ ಹುದ್ದೆ ಭರ್ತಿಗೆ ಅಡ್ಡಿ

● ಪ್ರತಿಮಾ ನಂದಕುಮಾರ್

ಬೆಂಗಳೂರು: ಪಂಚ 'ಗ್ಯಾರಂಟಿ'ಗಳು, ಇತರ ಕಲ್ಯಾಣ ಯೋಜನೆಗಳು, ಆರ್ಥಿಕ ನಿರ್ಬಂಧಗಳ ಕಾರಣಕ್ಕೆ ಸರ್ಕಾರಿ ಹುದ್ದೆಗಳ ಭರ್ತಿ ಪ್ರಕ್ರಿಯೆ ವಿಳಂಬವಾಗುತ್ತಿದೆ ಎನ್ನುವ ಅಭಿಪ್ರಾಯ ಅಧಿಕಾರಿಗಳ ವಲಯದಲ್ಲಿ ವ್ಯಕ್ತವಾಗಿದೆ.

ರಾಜ್ಯ ಸರ್ಕಾರದಲ್ಲಿ ಖಾಲಿ ಇರುವ 2.84 ಲಕ್ಷ ಹುದ್ದೆಗಳ ನೇಮಕಾತಿಗೆ ಆಗ್ರಹಿಸಿ ಉದ್ಯೋಗಾಕಾಂಕ್ಷಿಗಳು ನಡೆಸುತ್ತಿರುವ ಪ್ರತಿಭಟನೆ ಗಳ ಮಧ್ಯೆ, ಗ್ಯಾರಂಟಿ ಯೋಜನೆಗಳಿಗೆ ಸರ್ಕಾರ ಹಣ ವೆಚ್ಚ ಮಾಡುತ್ತಿರುವ ಸಂಗತಿ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ. ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಆಸಕ್ತಿ ತೋರಿಸದೇ ಇರಲು ಹಣಕಾಸಿನ ಕೊರತೆಯೂ ಕಾರಣ ಎನ್ನಲಾಗುತ್ತಿದೆ.

▶7

'ಬಜೆಟ್‌ನಲ್ಲೇ ಘೋಷಣೆ'

ಮೈಸೂರು: 'ಕೆಲವು ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆ ಭರ್ತಿ ಕುರಿತು ಈ ಬಾರಿಯ ಬಜೆಟ್‌ನಲ್ಲೇ ಘೋಷಣೆ ಮಾಡಲಿದ್ದೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

'ನಾವು ನೇಮಕಾತಿ ನಡೆಸುತ್ತಿದ್ದೇವೆ. ಒಳಮೀಸಲಾತಿ ಸಮಸ್ಯೆ ಇದ್ದಿದ್ದರಿಂದ ಸ್ವಲ್ಪ ವಿಳಂಬವಾಗಿದೆ. ಕೊಟ್ಟ ಮಾತಿನಂತೆ ಹುದ್ದೆ ಭರ್ತಿ ಮಾಡುತ್ತೇವೆ' ಎಂದರು.

'ಧಾರವಾಡದಲ್ಲಿ ಪ್ರತಿಭಟಿಸಿದ ವಿದ್ಯಾರ್ಥಿಗಳೇಕೆ ಇವರನ್ನು (ಬಿಜೆಪಿಯವರನ್ನು) ಬಿಟ್ಟು ಬೇರೆಡೆ ಸಭೆ ನಡೆಸಿದರು? ಪ್ರಧಾನಿ ನರೇಂದ್ರ ಮೋದಿ ವರ್ಷಕ್ಕೆ 2 ಕೋಟಿ ಉದ್ಯೋಗ ಕೊಡುತ್ತೇವೆ ಎಂದಿದ್ರಲ್ಲ ಏನಾಯಿತು? ಅವರು ಅಧಿಕಾರಕ್ಕೆ ಬಂದು 11 ವರ್ಷಗಳಾದವು? ಈವರೆಗೆ ಎಷ್ಟು ಉದ್ಯೋಗ ಕೊಡಬೇಕಾಗಿತ್ತು? ನಮ್ಮನ್ನು ಪ್ರಶ್ನಿಸಲು ಅವರಿಗೆ ಯಾವ ನೈತಿಕ ಹಕ್ಕಿದೆ' ಎಂದು ಪ್ರಶ್ನಿಸಿದರು.

ಮೊದಲ ಬಾರಿಯ ಶಾಸಕರಿಗೆ ಸಚಿವ ಸ್ಥಾನ ಇಲ್ಲ: ಸಿ.ಎಂ

ಪ್ರಜಾವಾಣಿ ವಾರ್ತೆ

ಉಡುಪಿ: 'ಮೊದಲ ಬಾರಿ ಶಾಸಕರಾದವರಿಗೆ ಸಚಿವ ಸ್ಥಾನ ಕೊಡಬಾರದು ಎಂದು ನಿರ್ಣಯವನ್ನು ತೆಗೆದು ಕೊಂಡಿದ್ದೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ತಿಳಿಸಿದರು.



ಸಿದ್ದರಾಮಯ್ಯ

ಕಾರ್ಕಳದಲ್ಲಿ ಬುಧವಾರ ಸುದ್ದಿಗಾರ ರೊಂದಿಗೆ ಮಾತನಾಡಿದ ಅವರು, 'ಮೊದಲ ಬಾರಿಗೆ ಶಾಸಕರಾದವರು ಸಚಿವರಾಗಬೇಕು ಎಂದು ಕೇಳುವುದ ರಲ್ಲಿ ತಪ್ಪಿಲ್ಲ' ಎಂದು ಪ್ರತಿಕ್ರಿಯಿಸಿದರು.

ಆಗುಂಬೆಯಲ್ಲಿ ಸುರಂಗ ಮಾರ್ಗ ನಿರ್ಮಾಣಕ್ಕೆ ಪರಿಸರವಾದಿಗಳಿಂದ ವಿರೋಧ ಕುರಿತ ಪ್ರಶ್ನೆಗೆ, 'ಯಾವ ಕಾರಣಕ್ಕೆ ವಿರೋಧ ಎಂದು ತಿಳಿದುಕೊಳ್ಳುತ್ತೇವೆ. ಚರ್ಚಿಸಿ ಅವರಿಗೆ ಮನವರಿಕೆ ಮಾಡಿಕೊಡುತ್ತೇವೆ' ಎಂದು ಹೇಳಿದರು.

'ಕಾನೂನನ್ನು ಯಾರೇ ಕೈಗೆ ತೆಗೆದುಕೊಂಡರೂ ಸುಮ್ಮನೆ ಬಿಡುವುದಿಲ್ಲ' ಎಂದು, ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯಕ್ಕೆ ಎಬಿವಿಪಿ ಕಾರ್ಯಕರ್ತರು ನುಗ್ಗಿದ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ

ಇಂದು ಕೆಲವೆಡೆ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಕೆಲವೆಡೆ ಗುರುವಾರ ಮಳೆಯಾಗುವ ಸಾಧ್ಯತೆಯಿದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಐದು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಬೀದರ್, ಕಲಬುರಗಿ, ವಿಜಯಪುರ, ಬೆಳಗಾವಿ ಹಾಗೂ ಗದಗ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದ್ದು, ಈ ಜಿಲ್ಲೆಗಳ ಒಂದೆರಡು ಕಡೆ ಗುಡುಗು ಸಹಿತ ಭಾರಿ ಗಾಳಿಯೊಂದಿಗೆ ಸಾಧಾರಣ ಮಳೆಯಾಗುವ ಸಂಭವವಿದೆ. ಉತ್ತರ ಒಳನಾಡಿನ ಉಳಿದ ಜಿಲ್ಲೆಗಳಲ್ಲಿ ಒಣ ಹವೆ ಇರಲಿದೆ.

ಕರಾವಳಿಯಲ್ಲಿ ದಕ್ಷಿಣ ಕನ್ನಡದ ಒಂದೆರಡು ಕಡೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ದಕ್ಷಿಣ ಒಳನಾಡಿನಲ್ಲಿ ಕೊಡಗು, ಮೈಸೂರು, ಬಳ್ಳಾರಿ, ವಿಜಯನಗರ ಜಿಲ್ಲೆಯ ಒಂದೆರಡು ಕಡೆ ಸಾಧಾರಣ ಮಳೆಯಾಗುವ ಸಂಭವವಿದೆ. ಉಳಿದ ಜಿಲ್ಲೆಗಳಲ್ಲಿ ಒಣಹವೆ ಇರಲಿದೆ.

ಬುಧವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ರಾಜ್ಯದ ಕೆಲವೆಡೆ ಮಳೆಯಾಗಿದೆ.

ಮತದಾರರ ಪಟ್ಟಿ: ಮತ್ತೆ ಗಡುವು ವಿಸ್ತರಣೆ

ಪರಿಷ್ಕೃತ ಕರಡು ಪಟ್ಟಿ ಮಾರ್ಚ್ 9ಕ್ಕೆ ಪ್ರಕಟ; ರಾಜ್ಯ ಚುನಾವಣಾ ಆಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ನಗರ ಪಾಲಿಕೆಗಳ ಚುನಾವಣೆಗೆ ವಾರ್ಡ್‌ವಾರು ಮತದಾರರ ಅಂತಿಮ ಪಟ್ಟಿ ಪ್ರಕಟಣೆಯ ಗಡುವನ್ನು ಮತ್ತೆ ವಿಸ್ತರಿಸಿರುವ ರಾಜ್ಯ ಚುನಾವಣಾ ಆಯೋಗ, ಮತದಾರರ ಪರಿಷ್ಕೃತ ಕರಡು ಪಟ್ಟಿಯನ್ನು ಮತ್ತೊಮ್ಮೆ ಪ್ರಕಟಿಸಲಿದೆ.

2026ರ ಜನವರಿ 19ರಂದು ಮತದಾರರ ಕರಡು ಪಟ್ಟಿಯನ್ನು ಪ್ರಕಟಿಸಿದ್ದ ರಾಜ್ಯ ಚುನಾವಣಾ ಆಯೋಗ, ಮಾರ್ಚ್ 15ರಂದು ಮತದಾರರ ಅಂತಿಮ ಪಟ್ಟಿಯನ್ನು ಪ್ರಕಟಿಸುವುದಾಗಿ ಹೇಳಿತ್ತು. ಆ ದಿನಾಂಕವನ್ನು ಮಾರ್ಚ್ 30ಕ್ಕೆ ವಿಸ್ತರಿಸಿ, ಜನವರಿ 24ರಂದು ಆದೇಶಿಸಿತ್ತು. ಇದೀಗ ಮತ್ತೆ ಗಡುವನ್ನು ಏಪ್ರಿಲ್ 6ಕ್ಕೆ ವಿಸ್ತರಿಸಿ, ಫೆ.24ರಂದು ಆದೇಶ ಹೊರಡಿಸಿದೆ.

ಜನವರಿ 19ರಂದು ಪ್ರಕಟಿಸಲಾದ ಮತದಾರರ ಕರಡು ಪಟ್ಟಿಯ ಕುರಿತು ರಾಜಕೀಯ ಪಕ್ಷಗಳು ಹಾಗೂ ಸಾರ್ವಜನಿಕರಿಂದ ಹಲವಾರು ದೂರುಗಳು ಸ್ವೀಕೃತಗೊಂಡ ಕಾರಣದಿಂದ 'ಗ್ರೇಟರ್ ಬೆಂಗಳೂರು ಆಡಳಿತ (ಮತದಾರರ ನೋಂದಣಿ) ನಿಯಮಗಳು, 2025ರ ನಿಯಮ 30ರನ್ವಯ ತಾತ್ಕಾಲಿಕವಾಗಿ ಜಾರಿಯಲ್ಲಿರುವ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯನ್ನು ಅಳವಡಿಸಿಕೊಂಡು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ನಗರ ಪಾಲಿಕೆಗಳಿಗೆ ವಾರ್ಡುವಾರು ಮತದಾರರ ಪಟ್ಟಿಯನ್ನು ತಯಾರಿಸುವುದು ಸೂಕ್ತವೆಂದು ಅಭಿಪ್ರಾಯಿಸಿ ಪರಿಷ್ಕೃತ ಸುತ್ತೋಲೆಯನ್ನು ಹೊರಡಿಸಲಾಗಿದೆ' ಎಂದು ತಿಳಿಸಲಾಗಿದೆ.

ಮತದಾರರ ಕರಡು ಪಟ್ಟಿಯನುಸಾರ ವಾರ್ಡುವಾರು ವಿಂಗಡಣೆಗೊಂಡಿರುವ ವಿಧಾನಸಭಾ ಕ್ಷೇತ್ರದ ಮತಗಟ್ಟೆಗಳ ಪ್ರದೇಶ ಮತ್ತು ಮತದಾರರನ್ನು ಭೌತಿಕವಾಗಿ ಪರಿಶೀಲನೆ ಮಾಡಿದಾಗ ಕೆಲವು ಪ್ರದೇಶಗಳಲ್ಲಿ ಮತದಾರರ ವಿವರಗಳಲ್ಲಿ ಅದಲು-ಬದಲು ಆಗಿವೆ. ಭೌಗೋಳಿಕವಾಗಿ ಒಂದು ವಾರ್ಡಿನಲ್ಲಿ ವಾಸವಾಗಿರುವ ಮತದಾರರು ಮತ್ತೊಂದು ವಾರ್ಡಿನ ವ್ಯಾಪ್ತಿಯ ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಂಡಿರುವುದು ಹಾಗೂ ಮತಗಟ್ಟೆಗಳ ಕುರಿತು ಸಂಖ್ಯೆಗಳ ನಮೂದಿಸುವಲ್ಲಿ ತಪ್ಪಾಗಿದ್ದು, ಸದರಿ ಲೋಪದೋಷಗಳನ್ನು ಮ್ಯಾಪ್ಪಿಂಗ್‌ನಲ್ಲಿ ಸರಿಪಡಿಸಲು ಅವಕಾಶ ನೀಡುವಂತೆ ಕೋರಲಾಗಿರುತ್ತದೆ.

ಪರಿಷ್ಕರಿಸಲಾದ ವೇಳಾಪಟ್ಟಿ

ಗ್ರೇಟರ್ ಬೆಂಗಳೂರು ಆಡಳಿತ (ಮತದಾರರ ನೋಂದಣಿ) ನಿಯಮಗಳು, 2025ರ ನಿಯಮ, 19 ಮತ್ತು 20ರನ್ವಯ ಮತದಾರರ ಪಟ್ಟಿಯನ್ನು ಅಂತಿಮವಾಗಿ ಪ್ರಕಟಿಸಲು ಮೊದಲು ಲೋಪದೋಷಗಳನ್ನು ಸರಿಪಡಿಸಲು ಅವಕಾಶವಿದೆ. ಅದರಂತೆ ನಿಯಮಾನುಸಾರ ಕ್ರಮ ಕೈಗೊಂಡು ಮ್ಯಾಪ್ಪಿಂಗ್ ಪ್ರಕ್ರಿಯೆಯನ್ನು ಫೆ.16ರಿಂದ 20ರವರೆಗೆ ನಡೆಸಲಾಗಿದೆ. ಇನ್ನುಳಿದ ವೇಳಾಪಟ್ಟಿಯನ್ನು ಮುಂದಿನಂತೆ ಪರಿಷ್ಕರಿಸಲಾಗಿದೆ ಎಂದು ತಿಳಿಸಲಾಗಿದೆ.

ಮುದ್ರಣ ಮ್ಯಾಪ್ಪಿಂಗ್ ನಂತರ ಇ-ರೋಲ್ ಮುದ್ರಿಸುವುದು	ಫೆ.25ರಿಂದ ಮಾರ್ಚ್ 1
ವಾರ್ಡ್‌ವಾರು ಮತದಾರರ ಪರಿಷ್ಕೃತ ಕರಡು ಪಟ್ಟಿಯ ಮುದ್ರಣ	ಮಾರ್ಚ್ 2-8
ಮತದಾರರ ಪರಿಷ್ಕೃತ ಕರಡು ಪಟ್ಟಿ ಪ್ರಕಟಿಸುವುದು	ಮಾರ್ಚ್ 9
ಆಕ್ಷೇಪಣೆ ಮತ್ತು ದೂರು ಸಲ್ಲಿಸಲು ಅವಕಾಶ	ಮಾರ್ಚ್ 10-16
ಯಾವುದಾದರು ತಿದ್ದುಪಡಿ ಇದ್ದಲ್ಲಿ ಮ್ಯಾಪ್ಪಿಂಗ್‌ನಲ್ಲಿ ಅಳವಡಿಸುವುದು	ಮಾರ್ಚ್ 17-18
ಪರಿಶೀಲಿಸಿದ ನಂತರ ಬದಲಾವಣೆ ಇದ್ದಲ್ಲಿ ಮ್ಯಾಪ್ಪಿಂಗ್ ಸಾಫ್ಟ್‌ವೇರ್‌ನಲ್ಲಿ ಅಳವಡಿಸುವುದು	ಮಾರ್ಚ್ 20-22
ಮುದ್ರಣ ಮತದಾರರ ಅಂತಿಮ ಪಟ್ಟಿಯ ಇ-ರೋಲ್ ಮುದ್ರಿಸುವುದು	ಮಾರ್ಚ್ 23-27
ವಾರ್ಡ್‌ವಾರು ಮತದಾರರ ಅಂತಿಮ ಪಟ್ಟಿಯ ಮುದ್ರಣ	ಮಾರ್ಚ್ 28ರಿಂದ ಏಪ್ರಿಲ್ 4
ಮತದಾರರ ಅಂತಿಮ ಪಟ್ಟಿಯ ಪ್ರಕಟಣೆ	ಏಪ್ರಿಲ್ 6

ಎಐ ಆಧರಿತ 'ಸಿಂಪಲ್ ಲೆಕ್ಚರ್'ಗೆ ಚಾಲನೆ



'ಸಿಂಪಲ್ ಲೆಕ್ಚರ್' ಕೃತಕ ಬುದ್ಧಿಮತ್ತೆ (ಎಐ) ಆಧರಿತ ಶಿಕ್ಷಣ ಕಲಿಕಾ ಪ್ಲಾಟ್‌ಫಾರ್ಮ್‌ಗೆ ಚಾಲನೆ ನೀಡಲಾಯಿತು. ಕುಪೇಂದ್ರ ರೆಡ್ಡಿ, ಯೋಗರಾಜ್ ಭಟ್, ಸುರೇಶ್ ನಾಗ್‌ಪಾಲ್, ಅಫ್ಸಿಯಾ ಅಫ್ಜಲ್ ಉಪಸ್ಥಿತರಿದ್ದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಪಾ ನಾಲೆಜ್ ಸ್ಟೋರ್ ವತಿಯಿಂದ 'ಸಿಂಪಲ್ ಲೆಕ್ಚರ್' ಕೃತಕ ಬುದ್ಧಿಮತ್ತೆ (ಎಐ) ಆಧರಿತ ಶಿಕ್ಷಣ ಕಲಿಕಾ ಪ್ಲಾಟ್‌ಫಾರ್ಮ್‌ಗೆ ಚಾಲನೆ ನೀಡಲಾಯಿತು.

ರಾಜ್ಯಸಭೆಯ ಮಾಜಿ ಸದಸ್ಯ ಕುಪೇಂದ್ರ ರೆಡ್ಡಿ ಮಾತನಾಡಿ, 'ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯ ಅಂತರವನ್ನು ಕಡಿಮೆ ಮಾಡುವ ಉದ್ದೇಶದಿಂದ ಎಐ ಆಧಾರಿತ ಕಲಿಕೆಯನ್ನು ಉತ್ತೇಜಿಸಲು 'ಸಿಂಪಲ್ ಲೆಕ್ಚರ್' ಸಹಾಯಕವಾಗಲಿದೆ. ಇದು ಬಳಕೆದಾರರ ಸ್ನೇಹಿಯಾಗಿದ್ದು, ಇಂಟರ್‌ಫೇಸ್ ಹಾಗೂ ಬಹಳ ಸಂಕೀರ್ಣವಾದ ವಿಷಯಗಳ ಕಲಿಕೆಯಲ್ಲಿ ವಿದ್ಯಾರ್ಥಿಗಳಿಗೆ ವೈಯಕ್ತಿಕ ಮಟ್ಟದಲ್ಲಿ ಅನುಭವ ನೀಡುವ ಸಾಮರ್ಥ್ಯ ಹೊಂದಿದೆ' ಎಂದರು.

ಚಲನಚಿತ್ರ ನಿರ್ದೇಶಕ ಯೋಗರಾಜ್ ಭಟ್ ಮಾತನಾಡಿ, 'ಸೃಜನಶೀಲತೆಯ ವಿವಿಧ ವಿಭಾಗಗಳನ್ನು ತಂತ್ರಜ್ಞಾನ ಹಾಗೂ ಶಿಕ್ಷಣದ ಮೂಲಕ ಪಡೆದುಕೊಳ್ಳಬಹುದು. ನಾವೀನ್ಯ ಎಂಬುದು ವಿದ್ಯಾರ್ಥಿಗಳ ಕಲಿಕೆ ಅನುಭವವನ್ನು ಮರುವ್ಯಾಖ್ಯಾನ ಮಾಡುತ್ತದೆ' ಎಂದು ತಿಳಿಸಿದರು.

ಕೃಪಾ ನಾಲೆಜ್ ಸ್ಟೋರ್‌ನ ಕಾರ್ಯನಿರ್ವಾಹಕ ನಿರ್ದೇಶಕ ಹಾಗೂ ಶಿಕ್ಷಣ ತಜ್ಞ ಸುರೇಶ್ ನಾಗ್‌ಪಾಲ್ ಮಾತನಾಡಿ, 'ಸಿಂಪಲ್ ಲೆಕ್ಚರ್- ಎಐ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿ ಮಾಡಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಸಿಂಪಲ್ ಲೆಕ್ಚರ್' ಸಿಇಒ ಅಫ್ಸಿಯಾ ಅಫ್ಜಲ್ ಉಪಸ್ಥಿತರಿದ್ದರು.

ಅಂಗಾಂಗ ದಾನ: ಆರು ಮಂದಿಗೆ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಕ್ಟೋರಿಯಾದ ಟ್ರಾಮಾ ಕೇರ್ ಸೆಂಟರ್‌ಗೆ ದಾಖಲಾಗಿದ್ದ ಯುವಕನ ಅಂಗಾಂಗ ದಾನಕ್ಕೆ ಕುಟುಂಬಸ್ಥರು ಸಮ್ಮತಿಸಿದ್ದರಿಂದ, ಆರು ಮಂದಿಗೆ ಅಂಗಾಂಗ ಕಸಿ ಸಾಧ್ಯವಾಗಿದೆ.



ದರ್ಶನ್

ಮಂಡ್ಯ ಜಿಲ್ಲೆಯ ಚಿಕ್ಕಮಂಡ್ಯ ಗ್ರಾಮದ ದರ್ಶನ್ ಅವರು ಫೆಬ್ರುವರಿ 22ರಂದು ದ್ವಿಚಕ್ರ ವಾಹನದಿಂದ ಬಿದ್ದು ಗಾಯಗೊಂಡಿದ್ದರು. ಅವರನ್ನು ಕುಟುಂಬಸ್ಥರು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿದ್ದರು. ತಲೆಯೊಳಗೆ ರಕ್ತಸ್ರಾವ ಆಗಿದ್ದರಿಂದ ಹೆಚ್ಚಿನ ಚಿಕಿತ್ಸೆಗೆ ವಿಕ್ಟೋರಿಯಾದ ಟ್ರಾಮಾ ಕೇರ್ ಸೆಂಟರ್‌ಗೆ ಶಿಫಾರಸು ಮಾಡಲಾಗಿತ್ತು.

ಟ್ರಾಮಾ ಕೇರ್ ಸೆಂಟರ್‌ಗೆ ದಾಖಲಾದ ಯುವಕನಿಗೆ ವೈದ್ಯರ ತಂಡವು ವಿವಿಧ ಪರೀಕ್ಷೆಗಳನ್ನು ನಡೆಸಿ, ಚಿಕಿತ್ಸೆ ಒದಗಿಸಿದರೂ ಆರೋಗ್ಯದಲ್ಲಿ ಚೇತರಿಕೆ ಕಾಣಿಸಿಕೊಂಡಿರಲಿಲ್ಲ. ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡಾ. ಕಾವ್ಯಾ, ಡಾ. ದೀಪಕ್, ಡಾ. ಆಸೀಮಾ ಬಾನು ಅವರನ್ನು ಒಳಗೊಂಡ ವೈದ್ಯರ ತಂಡವು ಎರಡು ದಿನಗಳ ಬಳಿಕ ಯುವಕನ ಮಿದುಳು ನಿಷ್ಕ್ರಿಯಗೊಂಡಿರುವುದಾಗಿ ಘೋಷಿಸಿತು.

ಯುವಕನ ಕುಟುಂಬಸ್ಥರಿಗೆ ಅಂಗಾಂಗ ದಾನದ ಮಹತ್ವ ಬಗ್ಗೆ ತಿಳಿಸಿದ ವೈದ್ಯರು, ಅವರಿಂದ ಅನುಮತಿ ಪಡೆದುಕೊಂಡರು. ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಜೀವಸಾರ್ಥಕತೆ ಸಂಸ್ಥೆಯು, ಅಂಗಾಂಗಕ್ಕಾಗಿ ಹೆಸರು ನೋಂದಾಯಿಸಿದವರಿಗೆ ಅಂಗಾಂಗಗಳನ್ನು ಕಸಿ ಮಾಡಲು ಒದಗಿಸಿತು.

ನಾಳೆಯಿಂದ ಜಿಎಎಫ್‌ಎಕ್ಸ್ ಶೃಂಗಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಹಾಗೂ ಬೆಂಗಳೂರು ಅನಿಮೇಷನ್ ಇಂಡಸ್ಟ್ರಿ ಅಸೋಸಿಯೇಷನ್ ಸಹಯೋಗದೊಂದಿಗೆ ಇದೇ 27ರಿಂದ ಮಾರ್ಚ್ 1ರವರೆಗೆ ನಗರದ ಲಲಿತ್ ಅಶೋಕ್ ಹೋಟೆಲ್‌ನಲ್ಲಿ 7 ನೇ ಆವೃತ್ತಿಯ ಬೆಂಗಳೂರು ಜಿಎಎಫ್‌ಎಕ್ಸ್ ಶೃಂಗಸಭೆಯನ್ನು ಆಯೋಜಿಸಲಾಗಿದೆ.

ಮೂರು ದಿನಗಳ ಈ ಶೃಂಗಸಭೆಯಲ್ಲಿ ಅನಿಮೇಷನ್, ವಿಎಫ್‌ಎಕ್ಸ್, ಗೇಮಿಂಗ್, ಕಾಮಿಕ್ಸ್ ಇತ್ಯಾದಿ ಮಾಧ್ಯಮಗಳ ಸೃಷ್ಟಿಕರ್ತರು, ಸ್ಟುಡಿಯೋಗಳು ಮತ್ತು ಉದ್ಯಮದ ನಾಯಕರು ಭಾಗವಹಿಸಲಿದ್ದಾರೆ ಎಂದು ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಈ ಶೃಂಗಸಭೆಯನ್ನು ಉದ್ಘಾಟಿಸಲಿದ್ದಾರೆ.

ಪ್ರವಾಹ ನಿರ್ವಹಣಾ ಸಮಿತಿ ರಚನೆ

ನಗರ ಪ್ರವಾಹ ನಿರ್ವಹಣೆಯ ಸಮಗ್ರ ಕಾರ್ಯಯೋಜನೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮಳೆಗಾಲದ ಸಮಯದಲ್ಲಿ ಉಂಟಾಗುವ ಜಲಾವೃತ ಪರಿಸ್ಥಿತಿಯನ್ನು ತಡೆಗಟ್ಟಲು, ನಗರ ಪ್ರವಾಹ ನಿರ್ವಹಣೆಗೆ ಸಂಬಂಧಿಸಿದಂತೆ ಸಮಗ್ರ ಕ್ರಮಗಳನ್ನು ಕೈಗೊಳ್ಳಲು 'ಪ್ರವಾಹ ನಿರ್ವಹಣಾ ಸಮಿತಿ'ಯನ್ನು ರಚಿಸಲಾಗಿದೆ.

ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಅತಿಯಾದ ನಗರೀಕರಣ, ಮಳೆ ನೀರಿನ ಸರಾಗವಾಗಿ ಹರಿಯುವಿಕೆ ತೊಡಕುಗಳು, ರಾಜಕಾಲುವೆಗಳ ಆಕ್ರಮಣ, ಒಳಚರಂಡಿ ಸಮಸ್ಯೆಗಳು ಮತ್ತು ತುರ್ತು ಪ್ರತಿಕ್ರಿಯಾ ವ್ಯವಸ್ಥೆಯಲ್ಲಿನ ಕೊರತೆ ಮುಂತಾದ ಕಾರಣಗಳಿಂದ ಜಲಾವೃತ ಸಮಸ್ಯೆಗಳು ಹೆಚ್ಚುತ್ತಿವೆ. ಇದನ್ನು ನಿಯಂತ್ರಿಸಲು, ಆಯುಕ್ತರ ನೇತೃತ್ವದಲ್ಲಿ ನಗರ ಪಾಲಿಕೆ ಎಂಜಿನಿಯರಿಂಗ್ ವಿಭಾಗ, ಕೆಆರ್‌ಡಿಸಿಎಲ್, ಸಣ್ಣ ನೀರಾವರಿ, ಪೊಲೀಸ್ ಇಲಾಖೆ, ನೈರುತ್ಯ ರೈಲ್ವೆ, ಲೋಕೋಪಯೋಗಿ ಇಲಾಖೆ, ಬೆಸ್ಕಾಂ, ಜಿಲ್ಲಾ ವಿಪತ್ತು ನಿರ್ವಹಣೆ ಮತ್ತು ಇನ್ನಿತರೆ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ 'ಪ್ರವಾಹ ನಿರ್ವಹಣಾ ಸಮಿತಿ' ರಚಿಸಲಾಗಿದೆ.

ನಗರ ಪಾಲಿಕೆಯ ಎಂಜಿನಿಯರಿಂಗ್ ವಿಭಾಗ, ಆರೋಗ್ಯ ಇಲಾಖೆ, ವಿಪತ್ತು ನಿರ್ವಹಣಾ ಘಟಕ ಮತ್ತು ಇತರೆ ಸಂಬಂಧಿತ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಮೂಲಕ ಮಳೆಗಾಲದ ವೇಳೆ ಜನಜೀವನ ವ್ಯತ್ಯಯ ವಾಗದಂತೆ, ಸಾರ್ವಜನಿಕ ಸುರಕ್ಷತೆ ಹಾಗೂ ಮೂಲಸೌಕರ್ಯ ರಕ್ಷಣೆ ದೃಷ್ಟಿಯಿಂದ ಈ ಸಮಿತಿ ಕಾರ್ಯ ನಿರ್ವಹಿಸಲಿದೆ ಎಂದು ಆಯುಕ್ತ ಡಿ.ಎಸ್.ರಮೇಶ್ ತಿಳಿಸಿದರು.

ಸಮಿತಿಯ ಉದ್ದೇಶಗಳು: ಮಳೆಗಾಲದ ಪೂರ್ವ ಸಿದ್ಧತಾ ಕ್ರಮಗಳನ್ನು ಸಮನ್ವಯದಿಂದ ಅನುಷ್ಠಾನಗೊಳಿಸುವುದು. ರಾಜಕಾಲುವೆ, ಮಳೆ ನೀರು ಕಾಲುವೆ ಮತ್ತು ಒಳಚರಂಡಿಗಳ ಶುದ್ಧೀಕರಣ ಹಾಗೂ ದುರಸ್ತಿ ಕಾರ್ಯಗಳ ಮೇಲ್ವಿಚಾರಣೆ. ಜಲಾವೃತ ಪ್ರದೇಶಗಳನ್ನು ಗುರುತಿಸಿ ಶಾಶ್ವತ ಪರಿಹಾರಕ್ಕೆ ಕ್ರಮ ರೂಪಿಸುವುದು. ತುರ್ತು ಪರಿಸ್ಥಿತಿಯಲ್ಲಿ ತ್ವರಿತ ಪ್ರತಿಕ್ರಿಯಾ ವ್ಯವಸ್ಥೆ ರೂಪಿಸುವುದು. ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸುವುದು.

ಮುಖ್ಯಾಂಶಗಳು
- ಮಳೆ ನೀರಿನ ಸರಾಗ ಹರಿವಿಗೆ ಅಡ್ಡಿಯಾಗಿರುವ ಅತಿಕ್ರಮಣ ತೆರವು
- ಮಳೆ ನೀರು ನಿಲ್ಲದಂತೆ ತಾಂತ್ರಿಕ ಕ್ರಮ
- ಸಾರ್ವಜನಿಕ ಸುರಕ್ಷತೆಗೆ ಆದ್ಯತೆ

ಪ್ರಮುಖ ಕಾರ್ಯಗಳು: ಜಲಾವೃತ ಪ್ರದೇಶಗಳ ಮ್ಯಾಪಿಂಗ್ ಹಾಗೂ ಅಪಾಯ ಪ್ರದೇಶಗಳ ಗುರುತಿಸುವುದು. ಮಳೆ ನೀರಿನ ಸರಾಗ ಹರಿವಿಗೆ ಅಡ್ಡಿಯಾಗಿರುವ ಅತಿಕ್ರಮಣವನ್ನು ತೆರವುಗೊಳಿಸುವುದು. ನೀರು ನಿಲ್ಲುವ ಪ್ರದೇಶಗಳಲ್ಲಿ ಪಂಪ್‌ಗಳ ಅಳವಡಿಕೆ ಹಾಗೂ ತಾತ್ಕಾಲಿಕ ಪರಿಹಾರ ಕ್ರಮ. ವಿಪತ್ತು ನಿರ್ವಹಣಾ ತಂಡಗಳೊಂದಿಗೆ ಸಮನ್ವಯ. ಸಾರ್ವಜನಿಕರಿಂದ ಸ್ವೀಕರಿಸಿದ ದೂರುಗಳ ಕುರಿತು ತ್ವರಿತ ಕ್ರಮವಹಿಸುವುದು.

ರಸ್ತೆ ಪುನಃಸ್ಥಾಪನೆ: ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಯುಟಿಲಿಟಿ ಸಂಸ್ಥೆಗಳು ವಿದ್ಯುತ್ ಕೇಬಲ್, ನೀರಿನ ಕೊಳವೆಮಾರ್ಗ, ಒಳಚರಂಡಿ, ಟೆಲಿಕಾಂ ಮಾರ್ಗ ಸೇರಿದಂತೆ ವಿವಿಧ ಮೂಲ ಸೌಕರ್ಯ ಕಾಮಗಾರಿಗಳ ನಿಮಿತ್ತ ರಸ್ತೆಗಳನ್ನು ಕತ್ತರಿಸಲಾಗುತ್ತಿದೆ.

ಇಂತಹ ಕಾಮಗಾರಿಗಳ ನಂತರ ರಸ್ತೆ ಪುನಃಸ್ಥಾಪನೆ ಸಮರ್ಪಕವಾಗಿ ನಡೆಯದಿರುವುದರಿಂದ ಸಾರ್ವಜನಿಕರ ಸಂಚಾರಕ್ಕೆ ತೊಂದರೆ, ಅಪಘಾತಗಳ ಸಂಭವ ಹಾಗೂ ರಸ್ತೆ ಹಾನಿ ಹೆಚ್ಚುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಅಂತಹ ರಸ್ತೆಗಳನ್ನು ಮೂಲ ಸ್ಥಿತಿಗೆ ತರುವ ಸಲುವಾಗಿ ನಗರ ಪಾಲಿಕೆಯ ಹೆಚ್ಚುವರಿ ಆಯುಕ್ತರ ನೇತೃತ್ವದಲ್ಲಿ ನಗರ ಪಾಲಿಕೆ ಎಂಜಿನಿಯರಿಂಗ್ ವಿಭಾಗ, ಬೆಸ್ಕಾಂ, ಕೆಪಿಟಿಸಿಎಲ್, ಜಲಮಂಡಳಿ, ಗೇಲ್, ಸಂಚಾರ ಪೊಲೀಸ್, ಹಾಗೂ ಒಎಫ್‌ಸಿ ಅಪರೇಟರ್‌ಗಳನ್ನು ಒಳಗೊಂಡ 'ರಸ್ತೆ ಪುನಃ ಸ್ಥಾಪನೆ' ಸಮಿತಿ ರಚಿಸಲಾಗಿದೆ ಎಂದು ರಮೇಶ್ ತಿಳಿಸಿದರು.

ರಸ್ತೆ ಕತ್ತರಿಸಲು ಅನುಮತಿ ಪಡೆದ ಎಲ್ಲಾ ಇಲಾಖೆಗಳು/ಸಂಸ್ಥೆಗಳು ನಿಗದಿತ ಅವಧಿಯೊಳಗೆ ಗುಣಮಟ್ಟದ ರಸ್ತೆ ಪುನಃಸ್ಥಾಪನೆ ಮಾಡುವುದು ಕಡ್ಡಾಯ. ರಸ್ತೆ ಪುನಃಸ್ಥಾಪನೆ ಕಾಮಗಾರಿಗಳನ್ನು ಎಂಜಿನಿಯರಿಂಗ್ ವಿಭಾಗದಿಂದ ತಾಂತ್ರಿಕವಾಗಿ ಪರಿಶೀಲಿಸಲಾಗುವುದು. ಮಾನದಂಡಗಳಿಗೆ ಅನುಗುಣವಾಗಿರದ ಕಾಮಗಾರಿಗಳನ್ನು ನಡೆಸಿದವರ ವಿರುದ್ಧ ದಂಡನಾತ್ಮಕ ಕ್ರಮ ಕೈಗೊಳ್ಳಲಾಗುವುದು. ಪುನಃಸ್ಥಾಪನೆ ಸಂದರ್ಭದಲ್ಲಿ ಉತ್ತಮ ಗುಣಮಟ್ಟದೊಂದಿಗೆ ರಸ್ತೆ ಸಮತಟ್ಟಾಗಿರುವಂತೆ ಹಾಗೂ ಮಳೆ ನೀರು ನಿಲ್ಲದಂತೆ ತಾಂತ್ರಿಕ ಕ್ರಮ ಅನುಸರಿಸಬೇಕು. ಪುನಃಸ್ಥಾಪನೆ ಬಳಿಕ ನಿರ್ದಿಷ್ಟ ಅವಧಿಯೊಳಗೆ ರಸ್ತೆ ಕುಸಿತ ಕಂಡುಬಂದಲ್ಲಿ ಸಂಬಂಧಿತ ಸಂಸ್ಥೆಯೇ ಜವಾಬ್ದಾರಿಯಾಗಿರುತ್ತದೆ. ಸುಗಮ ಸಂಚಾರ ಕಾಪಾಡುವುದು, ಅಪಘಾತಗಳನ್ನು ತಡೆಯುವುದು, ರಸ್ತೆ ಗುಣಮಟ್ಟ ಹಾಗೂ ದೀರ್ಘಾಯುಷ್ಯ ಹೆಚ್ಚಿಸುವ ಮೂಲಕ ಮೂಲಸೌಕರ್ಯ ಸುಧಾರಣೆ ಹಾಗೂ ಸಾರ್ವಜನಿಕ ಸುರಕ್ಷತೆಗೆ ಆದ್ಯತೆ ನೀಡುವುದು 'ರಸ್ತೆ ಪುನಃ ಸ್ಥಾಪನೆ' ಸಮಿತಿ ಕಾರ್ಯಗಳಾಗಿವೆ ಎಂದರು.

ಶಸ್ತ್ರಚಿಕಿತ್ಸೆ ನಂತರ, ಅದೇ ಸ್ಥಳಕ್ಕೆ ಬೀದಿ ನಾಯಿ

ಬೆಂಗಳೂರು ಉತ್ತರ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಜನಸಂಖ್ಯೆ ನಿಯಂತ್ರಣ ಹಾಗೂ ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಪ್ರಾಣಿ ಜನನ ನಿಯಂತ್ರಣ (ಎಬಿಸಿ) ಕಾರ್ಯಕ್ರಮವನ್ನು ಮಾರ್ಗಸೂಚಿಗಳಂತೆ ಕ್ರಮಬದ್ಧವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

ಈ ಕಾರ್ಯಕ್ರಮದಡಿ ಬೀದಿ ನಾಯಿಗಳನ್ನು ಮಾನವೀಯ ರೀತಿಯಲ್ಲಿ ಹಿಡಿದು, ಅರ್ಹ ಪಶುವೈದ್ಯರಿಂದ ಶಸ್ತ್ರ ಚಿಕಿತ್ಸೆ ಹಾಗೂ ರೇಬೀಸ್ ನಿರೋಧಕ ಲಸಿಕೆ ನೀಡಲಾಗುತ್ತದೆ. ಶಸ್ತ್ರ ಚಿಕಿತ್ಸೆಯ ನಂತರ ನಾಯಿಗಳಿಗೆ ಅಗತ್ಯವಾದ ಆರೈಕೆ ಮತ್ತು ಚೇತರಿಕೆ ಒದಗಿಸಿ ನಂತರ ನಿಯಮಾನುಸಾರ ಮರುಬಿಡುಗಡೆ ಮಾಡಲಾಗುತ್ತದೆ.

ಎಬಿಸಿ ಕಾಯ್ದೆ–2023ರ ನಿಯಮಾನುಸಾರ ಶಸ್ತ್ರ ಚಿಕಿತ್ಸೆಯಾದ ಬೀದಿ ನಾಯಿಗಳನ್ನು ಅವುಗಳನ್ನು ಹಿಡಿದ ಮೂಲ ಸ್ಥಳದಲ್ಲಿಯೇ ಮರುಬಿಡುಗಡೆ ಮಾಡುವುದು ಕಡ್ಡಾಯವಾಗಿದೆ. ಶಸ್ತ್ರ ಚಿಕಿತ್ಸೆಯಾದ ನಂತರ ಕಿವಿಯಲ್ಲಿ ಗುರುತು ಹೊಂದಿರುವ ಬೀದಿ ನಾಯಿಗಳನ್ನು ಯಾವುದೇ ಕಾರಣಕ್ಕೂ ಸ್ಥಳಾಂತರ ಮಾಡಬಾರದು. ಇಂತಹ ನಾಯಿಗಳಿಗೆ ಹಾನಿ ಮಾಡುವುದು ಅಥವಾ ಬೇರೆ ಸ್ಥಳಕ್ಕೆ ಕೊಂಡೊಯ್ಯುವುದು ಕಾನೂನುಬಾಹಿರವಾಗಿದೆ. ಈ ನಿಟ್ಟಿನಲ್ಲಿ ನಾಗರಿಕರು ಸಹಕರಿಸಬೇಕು ಎಂದು ಉತ್ತರ ನಗರ ಪಾಲಿಕೆಯ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅವರು ಮನವಿ ಮಾಡಿಕೊಂಡಿದ್ದಾರೆ.

ಮುಖ್ಯ ಆಯುಕ್ತರಿಂದ ಸಾರ್ವಜನಿಕ ಸಂಪರ್ಕ ಸಭೆ

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಪರಿಶೀಲನೆ ಕೈಗೊಳ್ಳಲಿದ್ದಾರೆ. ನಂತರ, ಆಯಾ ಪಾಲಿಕೆ ಆಯುಕ್ತರ ಕಚೇರಿಯಲ್ಲಿ 'ಸಾರ್ವಜನಿಕ ಸಂಪರ್ಕ ಸಭೆ' ನಡೆಸಲಿದ್ದಾರೆ.

ಬೆಂಗಳೂರು ಕೇಂದ್ರ, ಪೂರ್ವ, ಪಶ್ಚಿಮ, ಉತ್ತರ ಹಾಗೂ ದಕ್ಷಿಣ ನಗರ ಪಾಲಿಕೆಗಳಲ್ಲಿ ಸಾರ್ವಜನಿಕರ ಅಹವಾಲುಗಳು ಮತ್ತು ಮನವಿಗಳನ್ನು ನೇರವಾಗಿ ಸ್ವೀಕರಿಸಿ, ಸ್ಥಳೀಯ ಸಮಸ್ಯೆಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಮೂಲಸೌಕರ್ಯ, ರಸ್ತೆ, ಸ್ವಚ್ಛತೆ, ಒಳಚರಂಡಿ ಸಮಸ್ಯೆಯ ಅಹವಾಲುಗಳನ್ನು ಖುದ್ದಾಗಿ ಆಲಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ತ್ವರಿತ ಕ್ರಮ ಕೈಗೊಂಡು ಸಮಸ್ಯೆ ಇತ್ಯರ್ಥಪಡಿಸಲು ಸೂಚಿಸಲಾಗುವುದು. 'ಸಾರ್ವಜನಿಕ ಸಂಪರ್ಕ' ಸಭೆಯಲ್ಲಿ ಆಯಾ ನಗರ ಪಾಲಿಕೆಯ ಆಯುಕ್ತರು, ಅಭಿವೃದ್ಧಿ/ಕಂದಾಯ ಹೆಚ್ಚುವರಿ ಆಯುಕ್ತರು, ಜಂಟಿ ಆಯುಕ್ತರು, ವಿವಿಧ ಇಲಾಖೆಗಳ ಮುಖ್ಯಸ್ಥರು, ಅಧಿಕಾರಿಗಳು ಉಪಸ್ಥಿತರಿರುತ್ತಾರೆ.

ಕೇಂದ್ರ ನಗರ ಪಾಲಿಕೆಯಲ್ಲಿ (ಸಂಪರ್ಕ 94806 85702) ಫೆ.26ರಂದು ಮಧ್ಯಾಹ್ನ 2.30ರಿಂದ ಸಂಜೆ 5ರವರೆಗೆ ಸಾರ್ವಜನಿಕ ಸಂಪರ್ಕ ಸಭೆ ನಡೆಯಲಿದೆ. ಅದಕ್ಕೂ ಮುನ್ನ, ಬೆಳಿಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ವಿವಿಧ ಕಚೇರಿಗಳಿಗೆ ಮುಖ್ಯ ಆಯುಕ್ತರು ಭೇಟಿ ನೀಡಲಿದ್ದಾರೆ.

ಪೂರ್ವ ನಗರ ಪಾಲಿಕೆಯಲ್ಲಿ ಮಾರ್ಚ್ 3ರಂದು, ಪಶ್ಚಿಮ ನಗರ ಪಾಲಿಕೆಯಲ್ಲಿ ಮಾರ್ಚ್ 5ರಂದು, ಉತ್ತರ ನಗರ ಪಾಲಿಕೆಯಲ್ಲಿ ಮಾರ್ಚ್ 10 ಹಾಗೂ ದಕ್ಷಿಣ ನಗರ ಪಾಲಿಕೆಯಲ್ಲಿ ಮಾರ್ಚ್ 12ರಂದು ಸಾರ್ವಜನಿಕ ಸಂಪರ್ಕ ಸಭೆ ನಡೆಯಲಿದೆ.

ಸಾಂಸ್ಕೃತಿಕ ಮುನ್ನೋಟ



ಸುದೀಪ್ತ ಜಿ. ಮತ್ತು ಪ್ರೀತಿ ಚೌಧರಿ

'ಕಲಾ ಸ್ಪಂದನ' ಸಂಗೀತ–ನೃತ್ಯ

ಬೆಂಗಳೂರು: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್ ಹಾಗೂ ಅಲಂಕೃತ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ ಇದೇ 28ರಂದು ಸಂಜೆ 5 ಗಂಟೆಗೆ ಜಯನಗರದ 5ನೇ ಬ್ಲಾಕ್‌ನಲ್ಲಿರುವ ಸನಾತನ ಕಲಾಕ್ಷೇತ್ರದಲ್ಲಿ 'ಕಲಾ ಸ್ಪಂದನ' ಶಾಸ್ತ್ರೀಯ ಸಂಗೀತ–ನೃತ್ಯ ತಿಂಗಳ ಕಾರ್ಯಕ್ರಮ ಹಮ್ಮಿಕೊಂಡಿದೆ.

ಸುದೀಪ್ತ ಜಿ. ಮತ್ತು ಪ್ರೀತಿ ಚೌಧರಿ ಅವರಿಂದ ಕಥಕ್ ನೃತ್ಯ ಪ್ರದರ್ಶನ ಆಯೋಜಿಸಲಾಗಿದೆ. ಪೂರ್ಣಾ ಹೆಬ್ಬಾರ್, ಪ್ರಜ್ಞಾ ಹೆಬ್ಬಾರ್ ಅವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಗಾಯನ ನಡೆಯಲಿದ್ದು, ರೋಹನ್ ಕುಮಾರ್ ತಬಲಾದಲ್ಲಿ ಸಾಥ್ ನೀಡಲಿದ್ದಾರೆ.

'ಪಶ್ಚಾತಾಪ' ನಾಟಕ ಪ್ರದರ್ಶನ

ಬೆಂಗಳೂರು: ಸಂಧ್ಯಾ ಜನ ಸಂಸ್ಕೃತಿ ಟ್ರಸ್ಟ್ ಇದೇ 28ರಂದು ತನ್ನ 8ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಚಾಮರಾಜಪೇಟೆಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮಹಾದೇವಿ ಸಭಾಂಗಣದಲ್ಲಿ ಗಾಯನ ಹಾಗೂ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಸಂಜೆ 4 ಗಂಟೆಗೆ ಪಿ.ರುದ್ರಪ್ಪ ಮತ್ತು ತಂಡದಿಂದ ಗೀತ ಗಾಯನ ನಡೆಯಲಿದೆ. ಸಂಜೆ 6.30ರಿಂದ 'ಪಶ್ಚಾತಾಪ' ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದ್ದು, ಫೋಟೋ ವೆಂಕಿ ಈ ನಾಟಕ ರಚಿಸಿ ನಿರ್ದೇಶಿಸಿದ್ದಾರೆ.

ಯಕ್ಷಗಾನ ಕಾರ್ಯಾಗಾರ

ಬೆಂಗಳೂರು: ಕುಂದಾಪುರದ ನಾದಾವಧಾನ ಪ್ರತಿಷ್ಠಾನವು ಇದೇ 28ರಂದು ಬೆಳಿಗ್ಗೆ 10ರಿಂದ ರಾಜಾಜಿನಗರದ ಚಿತ್ಪಾವನ ಸಭಾಭವನದಲ್ಲಿ ಬಡಗುತಿಟ್ಟು ಹಿಮ್ಮೇಳ ಕಾರ್ಯಾಗಾರ ಹಮ್ಮಿಕೊಂಡಿದೆ. ಆಸಕ್ತರು ಮೊ.ಸಂಖ್ಯೆ 9940469916 ಅಥವಾ 9448276944ಕ್ಕೆ ಸಂಪರ್ಕಿಸಬಹುದಾಗಿದೆ.

ಯಕ್ಷಗಾನ ತಾಳಮದ್ದಳೆ

ಬೆಂಗಳೂರು: ನಿರ್ಮಾಣ್ ಯಕ್ಷ ಬಳಗವು ಇದೇ 28ರಂದು ಸಂಜೆ 5.30ಕ್ಕೆ ಕೋಣನಕುಂಟೆ ಕ್ರಾಸ್ ಬಳಿಯ ವಲ್ಲಭ ನಗರದಲ್ಲಿರುವ ಮಹಾಲಕ್ಷ್ಮೀ ದೇವಸ್ಥಾನದಲ್ಲಿ 'ಶ್ರೀಕೃಷ್ಣಸಂಧಾನ' ಯಕ್ಷಗಾನ ತಾಳಮದ್ದಳೆ ಹಮ್ಮಿಕೊಂಡಿದೆ.

ಹಿಮ್ಮೇಳದಲ್ಲಿ ರಕ್ಷಿತ್ ಭಟ್ಟ ಮೂರೂರು, ಆಗ್ನೇಯ ಭಟ್ ಕ್ಯಾಸನೂರು, ನಾರಾಯಣ ಮೂರ್ತಿ ಹೊಸಬಾಳೆ, ಶ್ರೀರಮಣ ಭಟ್ಟ ಮೂರೂರು, ಮುಮ್ಮೇಳದಲ್ಲಿ ಶಿವಕುಮಾರ್ ಬೇಗಾರ್, ರವಿ ಐತುಮನೆ ಹಾಗೂ ಚಂದನ್ ಕಲಾಹಂಸ ಭಾಗವಹಿಸಲಿದ್ದಾರೆ.

'ಒಮ್ಮೆ ಹೆಣ್ಣಾಗು' ನಾಟಕ


ಬೆಂಗಳೂರು: ಕೋರಮಂಗಲದಲ್ಲಿರುವ ಇಂಡಿಯನ್ ಹೆರಿಟೇಜ್ ಅಕಾಡೆಮಿ ಇದೇ 27ರಂದು ಸಂಜೆ 6.30ಕ್ಕೆ ತನ್ನ ಕೇಂದ್ರದಲ್ಲಿ 'ಒಮ್ಮೆ ಹೆಣ್ಣಾಗು' ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ರಂಗಾಯಣ ಮೈಸೂರು ಹಾಗೂ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಈ ಪ್ರದರ್ಶನ ಆಯೋಜಿಸಲಾಗಿದೆ. ಲೇಖಕಿ ಬಾನು ಮುಷ್ತಾಕ್ ಅವರ 'ಎದೆಯ ಹಣತೆ' ಸಂಕಲನದ ಆಯ್ದ ಕಥೆಗಳನ್ನು ಆಧರಿಸಿದ ನಾಟಕ ಇದಾಗಿದ್ದು, ಸವಿತಾ ರಾಣಿ ನಿರ್ದೇಶಿಸಿದ್ದಾರೆ. ಪ್ರವೇಶ ಉಚಿತ ಇರಲಿದೆ.

ಸಂಗೀತ ಕಛೇರಿ

ಬೆಂಗಳೂರು: ಗುರುರಾವ್ ದೇಶಪಾಂಡೆ ಸಂಗೀತ ಸಭಾ ಇದೇ 28ರಂದು ರಾತ್ರಿ 9 ಗಂಟೆಯಿಂದ ಜೆ.ಸಿ.ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ರಾತ್ರಿಯಿಡೀ ಸಂಗೀತ ಮಹೋತ್ಸವ ಹಮ್ಮಿಕೊಂಡಿದೆ.

ಗುರುರಾವ್ ದೇಶಪಾಂಡೆ ಹಾಗೂ ಭೀಮಸೇನ ಜೋಶಿ ದತ್ತಿ ಸಂಗೀತ ಮಹೋತ್ಸವ ಇದಾಗಿದೆ. ಯೋಗೇಶ್ ಸಂಸಿ, ವಿನಾಯಕ ತೊರವಿ, ರುಚಿರ ಕೇದಾರ್, ಇಂದ್ರಯುದ್ಧ್ ಮಜುಂದಾರ್ ಹಾಗೂ ದತ್ತಾತ್ರೇಯ ವೇಲಂಕರ್ ಭಾಗವಹಿಸುತ್ತಾರೆ. ಪ್ರವೇಶ ಉಚಿತ.



ವಿನಾಯಕ ತೊರವಿ

ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

ಜಯನಗರದಲ್ಲಿ ವಚನಕಾರ್ತಿಯರ ಕಮ್ಮಟ 28ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಸಂಯುಕ್ತ ಆಶ್ರಯದಲ್ಲಿ 12ನೇ ಶತಮಾನದ ವಚನಕಾರ್ತಿಯರ ಕುರಿತು ಒಂದು ದಿನದ ಕಮ್ಮಟವನ್ನು ಫೆ.28ರಂದು ಜಯನಗರದ ಶ್ರೀ ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪದಲ್ಲಿ ಆಯೋಜಿಸಲಾಗಿದೆ.

ವಚನ ಸಾಹಿತ್ಯದಲ್ಲಿ ಹೆಚ್ಚು ಚರ್ಚೆಗೊಳಗಾಗದ ವಚನಕಾರ್ತಿಯರ ಮಹತ್ವದ ಕೊಡುಗೆಗಳನ್ನು ಪರಿಚಯಿಸುವುದು, ಅವರ ಚಿಂತನೆಗಳ ಸಾಂಸ್ಕೃತಿಕ ಸಾಮಾಜಿಕ ಪ್ರಾಸಂಗಿಕತೆ ಚರ್ಚಿಸುವುದು ಹಾಗೂ ಹೊಸಪೀಳಿಗೆಯಲ್ಲಿ ಈ ಪರಂಪರೆ ಕುರಿತು ಅರಿವು ಮೂಡಿಸುವುದು ಈ ಕಮ್ಮಟದ ಉದ್ದೇಶ ಎಂದು ಸಂಯೋಜಕಿ ಮುಕ್ತಾ ಬಿ.ಕಾಗಲಿ ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯ ನಿವೃತ್ತ ಪ್ರಾಧ್ಯಾಪಕಿ ಎಂ.ಉಷಾ ಆಶಯ ನುಡಿ ಆಡಲಿದ್ದಾರೆ. ಬಳಿಕ ನಡೆಯುವ ಗೋಷ್ಠಿಗಳಲ್ಲಿ ಲೇಖಕಿಯರ ಸಂಘದ ರಾಜ್ಯ ಅಧ್ಯಕ್ಷೆ ಆರ್.ಸುನಂದಮ್ಮ, ಲೇಖಕಿಯರಾದ ಸುನಂದಾ ಬಸಪ್ಪ, ಇಂದಿರಾ ಶಿವಣ್ಣ ಅವರು ವಚನಕಾರ್ತಿಯರ ಸಾಹಿತ್ಯ ಮತ್ತು ಚಿಂತನೆಗಳ ವಿವಿಧ ಆಯಾಮ ವಿಶ್ಲೇಷಿಸಲಿದ್ದಾರೆ.

ಸಂಜೆ 4ಕ್ಕೆ ನಡೆಯುವ ಸಮಾರೋಪ ಸಮಾರಂಭದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಸಿ.ಸೋಮಶೇಖರ್ ಸಮಾರೋಪ ಭಾಷಣ ಮಾಡಲಿದ್ದು, ಪತ್ರಕರ್ತೆ ಆರ್. ಪೂರ್ಣಿಮಾ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ಬಜೆಟ್: ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಿ

'ಸಾರ್ವಜನಿಕ ಶೌಚಾಲಯಗಳನ್ನು ಹೆಚ್ಚಿಸಿ'



ಬೆಂಗಳೂರು ನಗರದಲ್ಲಿ ಸಾರ್ವಜನಿಕ ಶೌಚಾಲಯಗಳ ಅಭಾವ ಅಧಿಕವಾಗಿದೆ. ಶೌಚಾಲಯಗಳಿದ್ದರೂ ನಿರ್ವಹಣೆ ಇಲ್ಲದೇ ಗಬ್ಬೆದ್ದು ನಾರುತ್ತಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಉಪಯೋಗಿಸಬೇಕಾದ ಪರಿಸ್ಥಿತಿ ಎದುರಾಗಿದೆ. ಈ ಶೌಚಾಲಯಗಳನ್ನು ನಿರ್ವಹಣೆ ಮಾಡುವವರಿಗೆ ಗೌರವ ಧನ ನಿಗದಿಪಡಿಸಬೇಕು. ಬಜೆಟ್‌ನಲ್ಲಿ ಬೆಂಗಳೂರು ನಗರದ ಸರ್ವತೋಮುಖ ಅಭಿವೃದ್ಧಿಗೆ ಆದ್ಯತೆ ನೀಡಬೇಕು.

ಸಂಜೀವಿನಿ, ಚಾಮರಾಜಪೇಟೆ

'ಕಾಮಗಾರಿಗಳು ವೇಗ ಪಡೆಯಲಿ'



ಬೆಂಗಳೂರು ನಗರದ ನಾನಾ ಭಾಗಗಳಲ್ಲಿ ಕೈಗೊಂಡಿರುವ ರಸ್ತೆ, ಮೇಲ್ಸೇತುವೆ, ಒಳಚರಂಡಿ ಸೇರಿದಂತೆ ಮುಂತಾದ ಅಭಿವೃದ್ಧಿ ಕಾಮಗಾರಿಗಳು ಆಮೆಗತಿಯಲ್ಲಿ ಸಾಗಿವೆ. ಇದರಿಂದ ನಿತ್ಯ ಸಂಚಾರ ದಟ್ಟಣೆ, ಆಗುತ್ತಿದ್ದು, ಅಪಘಾತಗಳ ಸಂಖ್ಯೆಯೂ ಹೆಚ್ಚುತ್ತಿದೆ. ವಿಶ್ವದಲ್ಲಿಯೇ ಬೆಂಗಳೂರು ಎರಡನೇ ಅತಿಹೆಚ್ಚು ದಟ್ಟಣೆ ಆಗುವ ನಗರ ಎಂಬ ಹೆಸರು ಪಡೆದಿದೆ. ಆದ್ದರಿಂದ ನಗರದ ಮೂಲಸೌಕರ್ಯ ಅಭಿವೃದ್ಧಿಗೆ ಬಜೆಟ್‌ನಲ್ಲಿ ಆದ್ಯತೆ ನೀಡಬೇಕು.

ಪತ್ತಂಗಿ ಎಸ್. ಮುರಳಿ, ಕುಮಾರಸ್ವಾಮಿ ಬಡಾವಣೆ

'ಶಿಕ್ಷಣಕ್ಕೆ ಆದ್ಯತೆ ನೀಡಿ'



ಮುಂಬರುವ ಬಜೆಟ್‌ನಲ್ಲಿ ಶಿಕ್ಷಣ, ಆರೋಗ್ಯ ಹಾಗೂ ಕೌಶಲ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ನಗರದ ಎಲ್ಲ ರಸ್ತೆ, ಪಾದಚಾರಿ ಮಾರ್ಗಗಳು, ಉದ್ಯಾನಗಳು ಸೇರಿದಂತೆ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚು ಅನುದಾನ ನೀಡಬೇಕು.

ಶಿಲ್ಪಾ ಗೋವಿಂದು, ಮಾದಾವರ


'ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಿ'



ನಗರದ ವಾಹನ ದಟ್ಟಣೆಗೆ ಪರಿಹಾರ ಕಲ್ಪಿಸಬೇಕು. ಸಾರ್ವಜನಿಕ ಶೌಚಾಲಯ, ಉದ್ಯಾನ, ಕ್ರೀಡಾಂಗಣಗಳ ನಿರ್ಮಾಣಕ್ಕೆ ಆದ್ಯತೆ ನೀಡಬೇಕು. ಶಿಕ್ಷಣದ ಮೌಲ್ಯವನ್ನು ಹೆಚ್ಚಿಸುವ ಮತ್ತು ಮಕ್ಕಳಲ್ಲಿನ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗುವ ಕಲಿಕಾ ವಿಧಾನವನ್ನು ನಿರ್ಮಿಸಬೇಕು. ಏಕೆಂದರೆ ಇಂದಿನ ಮಕ್ಕಳೇ ನಾಳಿನ ಭವಿಷ್ಯದ ಬುನಾದಿ. ಆದ್ದರಿಂದ ಮೊದಲು ಗುಣಮಟ್ಟದ ಶಿಕ್ಷಣ ನೀಡುವ ಯೋಜನೆ ರೂಪಿಸಬೇಕು.

ಮಲ್ಲೇಶ್, ಮಲ್ಲೇಶ್ವರ

'ಮೆಟ್ರೊ ಕಾಮಗಾರಿಗಳಿಗೆ ವೇಗ ನೀಡಿ'



ಬೆಂಗಳೂರು ನಗರದ ನಮ್ಮ ಮೆಟ್ರೊದ ನೂತನ ಮಾರ್ಗಗಳನ್ನು ಹಾಗೂ ಈಗಾಗಲೇ ಚಾಲ್ತಿಯಲ್ಲಿರುವ ಮಾರ್ಗಗಳ ಕಾಮಗಾರಿ ವೇಗ ನೀಡಿ, ಪೂರ್ಣಗೊಳಿಸಬೇಕು. ಮೆಟ್ರೊ ಪ್ರಯಾಣ ದರ ಹೆಚ್ಚಿಸಲಾಗಿದೆ. ಅದಕ್ಕೆ ತಕ್ಕಂತೆ ಮೂಲಸೌಕರ್ಯಗಳನ್ನು ಒದಗಿಸಬೇಕು. ಮೆಟ್ರೊ ನಿಲ್ದಾಣಗಳಲ್ಲಿ ಸಾರ್ವಜನಿಕರು ಕುಳಿತುಕೊಳ್ಳಲು ಅನುಕೂಲವಾಗುವಂತೆ ಆಸನಗಳ ವ್ಯವಸ್ಥೆ ಮಾಡಬೇಕು.

ಸಿ.ಎಸ್. ಮಂಜುಳಾ, ಸಹಾಯಕ ಪ್ರಾಧ್ಯಾಪಕಿ

'ಸುಸ್ಥಿರ ಅಭಿವೃದ್ಧಿಗೆ ಒತ್ತು ನೀಡಿ'



ಬೆಂಗಳೂರನ್ನು 'ಬ್ರ್ಯಾಂಡ್ ಬೆಂಗಳೂರು' ಆಗಿ ಪರಿವರ್ತಿಸಲು ಬಜೆಟ್‌ನಲ್ಲಿ ಸರ್ಕಾರ ಸುಸ್ಥಿರ ಯೋಜನೆಗಳತ್ತ ಗಮನಹರಿಸಬೇಕಿದೆ. ಅವುಗಳಲ್ಲಿ ಪ್ರಮುಖವಾಗಿ ಮೆಟ್ರೊ ಹಂತ-3 ಮತ್ತು ಉಪನಗರ ರೈಲು ಯೋಜನೆಗಳ ಕಾಮಗಾರಿಗೆ ವೇಗ ನೀಡಬೇಕು. ಇದರಿಂದ ನಗರದ ಸಂಚಾರ ದಟ್ಟಣೆ ಕಡಿಮೆ ಆಗುವ ಸಾಧ್ಯತೆ ಇದೆ. ರಸ್ತೆಗುಂಡಿಗಳಿಗೆ ಮುಕ್ತಿ, ವೈಟ್ ಟಾಪಿಂಗ್ ಮತ್ತು ಮಳೆನೀರು ಕಾಲುವೆಗಳ ಅಭಿವೃದ್ಧಿಪಡಿಸಿ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಬೇಕು. ಕೆರೆಗಳ ಪುನಶ್ಚೇತನಗೊಳಿಸಬೇಕು. ಬಿಎಂಟಿಸಿ ಬಸ್‌ಗಳ ಸಂಖ್ಯೆ ಹೆಚ್ಚಳ ಮತ್ತು 'ಲಾಸ್ಟ್ ಮೈಲ್ ಕನೆಕ್ಟಿವಿಟಿ' ಸುಧಾರಣೆ ಮಾಡಿ ಸಾರ್ವಜನಿಕ ಸಾರಿಗೆಯಲ್ಲಿನ ಕೊರತೆಯನ್ನು ನೀಗಿಸಬೇಕಿದೆ.

ವಿಶಾಲ್ ಆರ್., ವಿದ್ಯಾರ್ಥಿ

ಬಜೆಟ್ ನಿರೀಕ್ಷೆ ನೀವೂ ಬರೆಯಿರಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 6ರಂದು ಬಜೆಟ್ ಮಂಡಿಸಲಿದ್ದಾರೆ. ಮೆಟ್ರೊ, ಸುರಂಗ ರಸ್ತೆ, ಮೇಲ್ಸೇತುವೆಗಳ ನಿರ್ಮಾಣ, ರಸ್ತೆ, ಶೌಚಾಲಯ, ಪಾದಚಾರಿ ಮಾರ್ಗಗಳ ಅಭಿವೃದ್ಧಿ ಸೇರಿದಂತೆ ರಾಜಧಾನಿಯಲ್ಲಿ ಮೂಲಸೌಕರ್ಯಗಳನ್ನು ಕಲ್ಪಿಸಿಕೊಡಲು ಹೆಚ್ಚಿನ ಅನುದಾನದ ಅಗತ್ಯವಿದೆ.

ಜೀವನಮಟ್ಟವನ್ನು ಸುಗಮಗೊಳಿಸಲು ಸರ್ಕಾರ ಬಜೆಟ್‌ನಲ್ಲಿ ಯಾವುದಕ್ಕೆ ಆದ್ಯತೆ ನೀಡಬೇಕು. ತಮ್ಮ ನಿರೀಕ್ಷೆಗಳು ಏನು ಎಂಬುದನ್ನು ಜನರು ಹಂಚಿಕೊಳ್ಳಬಹುದು. 50 ಪದಗಳಿಗೆ ಮೀರದಂತೆ ಬರೆದು, ಭಾವಚಿತ್ರ ಸಮೇತ ಕಳುಹಿಸಬೇಕು.

ವಾಟ್ಸ್‌ಆ್ಯಪ್ ಸಂಖ್ಯೆ: **9606038256**

ಉದ್ಯೋಗ ನೀಡಲು ಬದ್ಧ: ಡಿಕೆಶಿ

ಪ್ರಜಾವಾಣಿ ವಾರ್ತೆ



ಶಿವಕುಮಾರ್

ಬೆಂಗಳೂರು: 'ಕರ್ನಾಟಕದಲ್ಲಿ ಖಾಲಿ ಹುದ್ದೆಗಳನ್ನು ಹಗರಣ ರಹಿತವಾಗಿ ತುಂಬಲು ಕಾಂಗ್ರೆಸ್ ಸರ್ಕಾರವು ಕ್ರಮ ವಹಿಸಲಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಯುವಕರ ಸಮಸ್ಯೆಗಳನ್ನು ನಮ್ಮ ಸರ್ಕಾರ ಬಗೆಹರಿಸಲಿದೆ. ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ಚರ್ಚಿಸಿ ಸಂದೇಶ ನೀಡುತ್ತೇವೆ' ಎಂದು ತಿಳಿಸಿದರು.

'ಹಿಂದಿನ ಬಿಜೆಪಿ ಸರ್ಕಾರದಲ್ಲಿ ಹುದ್ದೆ ಭರ್ತಿ ಮಾಡಲು ಆಗಲಿಲ್ಲ. ಅವರ ಸಮಯದಲ್ಲಿ ಹಗರಣಗಳು ಆದವು. ನಾವು ಯುವಕರ ನೋವು ಅರ್ಥ ಮಾಡಿಕೊಂಡಿದ್ದೇವೆ. ಒಳಮೀಸಲು ವಿಚಾರದಿಂದ ಅಡಚಣೆಯಾಗಿದೆ' ಎಂದು ಹೇಳಿದರು.

'ನಮ್ಮ ಮೆಟ್ರೊ ಜಾಲ ವಿಸ್ತರಣೆ ಸಂಬಂಧ ಸಮೀಕ್ಷೆ ಕಾರ್ಯ ನಡೆದಿದೆ. ಡಬಲ್ ಡೆಕರ್ ವಿಚಾರವಾಗಿ ಕೇಂದ್ರ ಸರ್ಕಾರ ಸ್ಪಷ್ಟನೆ ಕೇಳಿರುವುದರಿಂದ ಅದಕ್ಕೆ ಉತ್ತರ ನೀಡಲು ಕೇಂದ್ರ ಸಚಿವರನ್ನು ಭೇಟಿ ಮಾಡುತ್ತೇನೆ' ಎಂದು ತಿಳಿಸಿದರು.

'ಹಣ ಲಭ್ಯತೆ ಇಲ್ಲದೇ ಇರುವ ಕಾರಣಕ್ಕೆ ಕಾಮಗಾರಿಗಳನ್ನು ತೆಗೆದು-ಕೊಳ್ಳಬೇಡಿ ಎಂದು ಅನೇಕ ಗುತ್ತಿಗೆ-ದಾರರಿಗೆ ಸಲಹೆ ನೀಡಿದ್ದರೂ, ಒಂದಷ್ಟು ಜನ ಕಾಮಗಾರಿಗಳನ್ನು ತೆಗೆದುಕೊಂಡು ಸಂಕಷ್ಟ ಅನುಭ-ವಿಸುತ್ತಿದ್ದಾರೆ. ಪ್ರತಿಭಟನೆ ನಡೆಸುವುದಾಗಿ ಹೇಳಿರುವ ಬಗ್ಗೆ ಅವರೊಂದಿಗೆ ಚರ್ಚಿಸುತ್ತೇನೆ' ಎಂದರು.

ನಗರದಲ್ಲಿ ಇಂದು

ಪ್ರೊ. ಸುಕನ್ಯಾ ಮಾರುತಿ ಅವರ ಬದುಕು ಬರಹ, ಸಾಂಸ್ಕೃತಿಕ ಚಿಂತನೆ, ರಾಜ್ಯಮಟ್ಟದ ವಿಚಾರಸಂಕಿರಣ: ಉದ್ಘಾಟನೆ: ಹಂ.ಪ. ನಾಗರಾಜಯ್ಯ, ಅಧ್ಯಕ್ಷತೆ: ಬಂಜಗೆರೆ ಜಯಪ್ರಕಾಶ್, ಪುಸ್ತಕ ಬಿಡುಗಡೆ: ಕೆ.ಎ. ದಯಾನಂದ, ಪುಸ್ತಕದ ಕುರಿತು: ದೇವು ಪತ್ತಾರ, ಆಯೋಜನೆ: ಪದ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 9.30ರಿಂದ

ಬ್ಲ್ಯೂ ಫೆಸ್ಟಿವಲ್–2026, ಇಂಡಿಯಾ ಡೆಫ್ ಎಕ್ಸ್‌ಪೊ: ಅತಿಥಿಗಳು: ಪ್ರಿಯ ಕೃಷ್ಣ, ಅಭಿನಯಾ, ಬಸ್ರೂರು ರಾಜೀವ್ ಶೆಟ್ಟಿ, ದಾಸ ಸೂರ್ಯವಂಶಿ, ಎಂ. ಅಲ್ಬಿನಾ, ಚಾರ್ಲ್ಸ್ ಜುನ್ಸ್, ಸ್ಥಳ: ಮೌಂಟ್ ಕಾರ್ಮೆಲ್ ಕಾಲೇಜಿನ ಸಭಾಂಗಣ, ವಸಂತನಗರ, ಬೆಳಿಗ್ಗೆ 10.30

'ರಾಷ್ಟ್ರಮಟ್ಟದ ಕ್ಲಾರೆಟ್ ಕಾವ್ಯ ಪ್ರಶಸ್ತಿ–2026' ಪ್ರದಾನ, 'ನವ ಕುಸುಮದ ಪರಿಮಳ' ಪುಸ್ತಕ ಬಿಡುಗಡೆ: ಎಚ್. ದಂಡಪ್ಪ, ಅಧ್ಯಕ್ಷತೆ: ಥಾಮಸ್ ವಿ. ತೆನೆಡಿಯಲ್, ಅತಿಥಿಗಳು: ಮನೋಜ್, ಜೋಸೆಫ್ ಎಸ್., ಪ್ರಶಸ್ತಿ ಪ್ರದಾನ: ಮನೋಜ್ ಕುಮಾರ್ ಯಾದವ್ ಆರ್., ಉಪಸ್ಥಿತಿ: ಮಾದೇಶ್ ಎನ್., ಕುಮಾರ್ ಇಂದ್ರಬೆಟ್ಟ, ಆಯೋಜನೆ ಮತ್ತು ಸ್ಥಳ: ಸೇಂಟ್ ಕ್ಲಾರೆಟ್ ಕಾಲೇಜು, ಬೆಳಿಗ್ಗೆ 11

27ನೇ ವರ್ಷದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ: ಸಾನ್ನಿಧ್ಯ: ಬಾಲಯೋಗಿ ಸಾಯಿ ಮಂಜುನಾಥ್ ಮಹಾರಾಜ್ ಸ್ವಾಮೀಜಿ, ಅತಿಥಿಗಳು: ರಾಮಲಿಂಗಾರೆಡ್ಡಿ, ಆರ್. ಅಶೋಕ, ತೇಜಸ್ವಿ ಸೂರ್ಯ, ಪಿ.ಸಿ. ಮೋಹನ್, ಎಂ. ಕೃಷ್ಣಪ್ಪ, ತಾರಾ ಅನೂರಾಧಾ, ಎಲ್.ಎ. ರವಿಸುಬ್ರಮಣ್ಯ, ಸಿ.ಕೆ. ರಾಮಮೂರ್ತಿ, ಬಿ.ಟಿ. ಲಲಿತಾ ನಾಯಕ್, ಆಯೋಜನೆ: ಶ್ರೀ ಬನಶಂಕರಿ ಸಾಮೂಹಿಕ ವಿವಾಹ ವೇದಿಕೆ, ಸ್ಥಳ: ಬನಶಂಕರಿ ದೇವಸ್ಥಾನದ ಆವರಣ, ಕನಕಪುರ ಮುಖ್ಯರಸ್ತೆ, ಬೆಳಿಗ್ಗೆ 11.23

ನೂತನ ದೇವಾಲಯದ ಪ್ರತಿಷ್ಠಾಪನೆ, ಕುಂಭಾಭಿಷೇಕ ಮಹೋತ್ಸವ: ನೂತನ ವಿಗ್ರಹಗಳಿಗೆ ಮೂಲ ಸ್ವಾಮಿಗೆ ಕುಂಭಾಭಿಷೇಕ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಆಯೋಜನೆ ಮತ್ತು ಸ್ಥಳ: ಶ್ರೀರುಕ್ಮಿಣಿ ಸತ್ಯಭಾಮ ಸಮೇತ ವೇಣುಗೋಪಾಲಸ್ವಾಮಿ ಆಂಜನೇಯಸ್ವಾಮಿ ಮತ್ತು ಗಣಪತಿಯ ನೂತನ ದೇವಾಲಯ ಹಾಗೂ ಪ್ರತಿಷ್ಠಾಪನಾ ಮಹೋತ್ಸವ, ಅಂಜನಾಪುರ, ಬಿಡಿಎ ಲೇಔಟ್ ಮೂರನೇ ಹಂತ, ಬೆಳಿಗ್ಗೆ 11.35

ರಾಷ್ಟ್ರಕವಿ ಕುವೆಂಪು ನಾಟಕೋತ್ಸವ: 'ಶ್ಮಶಾನ ಕುರುಕ್ಷೇತ್ರಂ', 'ಜಲಗಾರ' ನಾಟಕ ಪ್ರದರ್ಶನ: ಆಯೋಜನೆ: ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘ, ಸ್ಥಳ: ಕಲಾ ಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6

ಹೊನ್ನಾರು ರಂಗೋತ್ಸವ ಸಮಾರೋಪ ಸಮಾರಂಭ: ಅತಿಥಿಗಳು: ಶಿವರಾಜ ಎಸ್. ತಂಗಡಗಿ, ಕೆ.ವಿ. ನಾಗರಾಜಮೂರ್ತಿ, ಬಿ.ಎಸ್. ಮಂಜುನಾಥಸ್ವಾಮಿ, ಸಿ. ಬಸವಲಿಂಗಯ್ಯ, ಶ್ರೀನಿವಾಸ್ ಜಿ. ಕಪ್ಪಣ್ಣ, ವಿ.ಎಂ. ನಾಗೇಶ್, ಅಧ್ಯಕ್ಷತೆ: ಉಮಾಶ್ರೀ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ವಿಚಾರ ಸಂಕಿರಣ, ಅಭಿನಂದನಾ ಸಮಾರಂಭದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವ್ ಸಿಂಘ್ ಆಗ್ರಹ

'ನಿವೃತ್ತರಿಗೂ ಆರೋಗ್ಯ ಯೋಜನೆ ವಿಸ್ತರಿಸಿ'

ಪ್ರಜಾವಾಣಿ ವಾರ್ತೆ



ಸಮಾರಂಭದಲ್ಲಿ 75 ವರ್ಷ ಮೇಲ್ಪಟ್ಟ ನಿವೃತ್ತ ನೌಕರರನ್ನು ಅಭಿನಂದಿಸಲಾಯಿತು. ಚಿರಂಜೀವ್ ಸಿಂಘ್, ಸಿ.ಎಸ್. ಷಡಾಕ್ಷರಿ, ಎಲ್. ಭೈರಪ್ಪ, ಶಾಹಿನ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಅಬ್ದುಲ್ ಖದೀರ್, ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಬಿ. ಬೆಟ್ಟೇಗೌಡ, ಮಾಧ್ಯಮ ಅಕಾಡೆಮಿ ಮಾಜಿ ಅಧ್ಯಕ್ಷ ಸಿದ್ದರಾಜು ಹಾಗೂ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: 'ಸರ್ಕಾರದ ಭಾಗವಾಗಿ ಕೆಲಸ ಮಾಡಿದ ನಿವೃತ್ತ ನೌಕರರ ಬಗ್ಗೆಯೂ ಕಾಳಜಿ ತೋರಿಸಿ, ಅವರಿಗೂ ನಗದು ರಹಿತ ಆರೋಗ್ಯ ಸೇವೆ ಒದಗಿಸುವ ಯೋಜನೆಯನ್ನು ವಿಸ್ತರಿಸಬೇಕು' ಎಂದು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವ್ ಸಿಂಘ್ ಅವರು ಆಗ್ರಹಿಸಿದರು.

ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ನಿವೃತ್ತ ನೌಕರರ ಕುರಿತ ವಿಚಾರಸಂಕಿರಣ ಹಾಗೂ ಅಭಿನಂದನಾ ಸಮಾರಂಭ ಉದ್ಘಾಟಿಸಿ, ಮಾತನಾಡಿದರು.

'ಅನೇಕ ಗ್ಯಾರಂಟಿ ನೀಡಿರುವ ರಾಜ್ಯ ಸರ್ಕಾರಕ್ಕೆ, ನಿವೃತ್ತ ಸರ್ಕಾರಿ ನೌಕರರಿಗೆ ನಗದುರಹಿತ ಆರೋಗ್ಯ ಸೇವೆ ಒದಗಿಸುವ ಯೋಜನೆ ಜಾರಿಗೊಳಿಸುವುದು ಕಷ್ಟವಲ್ಲ. ಆದ್ದರಿಂದ ಸರ್ಕಾರಿ ನೌಕರರಿಗೆ ಜಾರಿಗೊಳಿಸಿರುವ 'ಆರೋಗ್ಯ ಸಂಜೀವಿನಿ' ಯೋಜನೆಯನ್ನು ನಿವೃತ್ತ ನೌಕರರಿಗೂ ವಿಸ್ತರಿಸಬೇಕು' ಎಂದು ಹೇಳಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ, 'ನಗದುರಹಿತ ಆರೋಗ್ಯ ಸೇವೆ ಒದಗಿಸುವ ಯೋಜನೆಯನ್ನು ನಿವೃತ್ತ ಸರ್ಕಾರಿ ನೌಕರರಿಗೂ ವಿಸ್ತರಿಸುವಂತೆ ಸರ್ಕಾರದ ಮನವೊಲಿಸಲಾಗಿದೆ. ಬಜೆಟ್‌ನಲ್ಲಿ ಘೋಷಿಸುವ ಸಾಧ್ಯತೆಯಿದೆ' ಎಂದರು. ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಎಲ್. ಭೈರಪ್ಪ, 'ನಿವೃತ್ತರ ಸಮಸ್ಯೆಗಳಿಗೆ ಸ್ಪಂದಿಸಬೇಕು. ನಗದುರಹಿತ ಆರೋಗ್ಯ ಸೇವೆ ಒದಗಿಸುವ 'ಆರೋಗ್ಯ ಸಂಜೀವಿನಿ' ಯೋಜನೆಯನ್ನು ವಿಸ್ತರಿಸಬೇಕು. ಅನೇಕ ಕಾಯಿಲೆಗಳಿಂದ ಬಳಲುತ್ತಿರುವ ನಿವೃತ್ತರ ನೆರವಿಗೆ ಸರ್ಕಾರ ಬರಬೇಕು' ಎಂದು ಒತ್ತಾಯಿಸಿದರು.

ಚಿಟಿಕೆ ಸುದ್ದಿ

ವಿಬಿಎಸ್‌ಎ ಮಸೂದೆ: ದುಂಡು ಮೇಜಿನ ಸಭೆ 28ಕ್ಕೆ

ಬೆಂಗಳೂರು: ಭಾರತೀಯ ಶಿಕ್ಷಣ ಮಂಡಲದಿಂದ ಫೆ. 28ರಂದು ಬೆಳಿಗ್ಗೆ 8.30ಕ್ಕೆ ನೃಪತುಂಗ ರಸ್ತೆಯಲ್ಲಿರುವ ದಿ ಮಿಥಿಕ್ ಸೊಸೈಟಿಯಲ್ಲಿ 'ವಿಕಸಿತ ಭಾರತ್ ಶಿಕ್ಷಾ ಅಧಿಷ್ಠಾನ್ (ವಿಬಿಎಸ್‌ಎ) ಮಸೂದೆ' ಕುರಿತು ದುಂಡು ಮೇಜಿನ ಸಭೆ ನಡೆಯಲಿದೆ.

ದುಂಡು ಮೇಜಿನ ಸಭೆಯಲ್ಲಿ ವಿಬಿಎಸ್‌ಎ ಮಸೂದೆಗೆ ಸಂಬಂಧಿಸಿದಂತೆ ಶಿಕ್ಷಣ ತಜ್ಞರು ಚರ್ಚೆಗಳನ್ನು ನಡೆಸಲಿದ್ದಾರೆ. ಇದರಲ್ಲಿ ವಿಶ್ವವಿದ್ಯಾಲಯಗಳ ಕುಲಪತಿಗಳು, ನಿರ್ದೇಶಕರು, ಸಂಶೋಧಕರು ಭಾಗವಹಿಸಲಿದ್ದಾರೆ. ಈ ಸಭೆಗೆ ದಿ ಮಿಥಿಕ್ ಸೊಸೈಟಿಯ ಸಹಯೋಗ ಇದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಶಸ್ತಿಗೆ ಅರ್ಜಿ ಆಹ್ವಾನ

ರಾಜರಾಜೇಶ್ವರಿ ನಗರ: ಮಲ್ಲತ್ತಹಳ್ಳಿಯ ವಾಸುದೇವ ಚಾರಿಟೇಬಲ್ ಟ್ರಸ್ಟ್ ವತಿಯಿಂದ ದಿವಂಗತ ಹೊಂಬಣ್ಣ, ಮುನಿಗಂಗಮ್ಮ, ವಾಸುದೇವ ಹೆಸರಿನಲ್ಲಿ ನೀಡುವ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

2025ನೇ ಸಾಲಿನಲ್ಲಿ ಪ್ರಥಮ ಬಾರಿಗೆ ಪ್ರಕಟವಾಗಿರುವ ಪುರುಷ ಸಾಹಿತಿಯ ಕಾದಂಬರಿಗೆ ಹೊಂಬಣ್ಣ ಪ್ರಶಸ್ತಿ, ಮಹಿಳಾ ಸಾಹಿತಿಯ ಕಾದಂಬರಿಗೆ ಮುನಿಗಂಗಮ್ಮ ಪ್ರಶಸ್ತಿ, ಯುವ ಚಿತ್ರ ಕಲಾವಿದರಿಗೆ ವಾಸದೇವ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು ಎಂದು ಎಚ್. ತುಕಾರಾಂ ತಿಳಿಸಿದ್ದಾರೆ.

ನೀರಿನ ಅದಾಲತ್ ಇಂದು

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಫೆ.26ರಂದು ಬೆಳಿಗ್ಗೆ 9.30ರಿಂದ 11ರವರೆಗೆ ನೀರಿನ ಅದಾಲತ್ ಹಮ್ಮಿಕೊಂಡಿದೆ.

ಆಗ್ನೇಯ 3ನೇ ಉಪ ವಿಭಾಗದ ಅದಾಲತ್ ಕೂಡ್ಲು ಎಲ್‌ಆರ್ ಆವರಣ, ಆಗ್ನೇಯ 6 ಬಿಟಿಎಂ 2ನೇ ಹಂತ, ಪಶ್ಚಿಮ 1–3 ರಾಜಾಜಿನಗರ , ವಾಯುವ್ಯ–5 ಎಂಇಐ ಲೇಔಟ್, ಉತ್ತರ 2–3 ಪಿನಾಕಿನಿ ಭವನ, ದಕ್ಷಿಣ 1–3 ಅಂಜನಾಪುರ, ನೈರುತ್ಯ–3 ಎಂಎನ್‌ಕೆ ಪಾರ್ಕ್, ನೈರುತ್ಯ–6 ಲಿಂಗಧೀರನಹಳ್ಳಿ, ಪೂರ್ವ 2–4 ಕಸ್ತೂರಿನಗರದಲ್ಲಿ ಅದಾಲತ್ ನಡೆಯಲಿದೆ. ಸಹಾಯವಾಣಿ: 1916

ನಕಲಿ ವೆಬ್‌ಸೈಟ್ ಬಗ್ಗೆ ಎಚ್ಚರವಹಿಸಿ: ಟಿಟಿಡಿ

ತಿರುಪತಿ (ಪಿಟಿಐ): ತಿರುಮಲದಲ್ಲಿ ವಸತಿ ವ್ಯವಸ್ಥೆ ಕಲ್ಪಿಸುವುದಾಗಿ ವಂಚಿಸುವ ನಕಲಿ ವೆಬ್‌ಸೈಟ್‌ಗಳು ಮತ್ತು ಮಧ್ಯವರ್ತಿಗಳ ಬಗ್ಗೆ ಎಚ್ಚರ ವಹಿಸುವಂತೆ ತಿರುಪತಿ ತಿರುಮಲ ದೇವಸ್ಥಾನಂ (ಟಿಟಿಡಿ) ಬುಧವಾರ ತಿಳಿಸಿದೆ.

ತಿರುಮಲದಲ್ಲಿ 'ಕರ್ನಾಟಕ ಪ್ರವಾಸಿ ಸೌಧ'ದ ಹೆಸರಿನಲ್ಲಿ ಕೊಠಡಿಯನ್ನು ನೀಡುವುದಾಗಿ ವ್ಯಕ್ತಿಯೊಬ್ಬರು ಮೋಸ ಮಾಡಿದ್ದಾರೆ ಎಂದು ಕೇರಳದ ಭಕ್ತರೊಬ್ಬರು ದೂರು ನೀಡಿದ ಬಳಿಕ ಈ ವಿಷಯ ಗೊತ್ತಾಗಿದೆ.

'ದೂರಿನ ಬಗ್ಗೆ ಜಾಗೃತ ದಳವು ತನಿಖೆ ನಡೆಸಿದೆ. ಅನಧಿಕೃತ ವ್ಯಕ್ತಿಗಳು ತಿರುಮಲ ತಿರುಪತಿ ದೇವಸ್ಥಾನದ ಚಿತ್ರ, ಚಿಹ್ನೆ ಬಳಸಿ ನಕಲಿ ವೆಬ್‌ಸೈಟ್ ತೆರೆದು ಭಕ್ತರ ದಾರಿ ತಪ್ಪಿಸುತ್ತಿರುವುದು ಗೊತ್ತಾಗಿದೆ' ಎಂದು ಟಿಟಿಡಿ ಹೇಳಿದೆದೆ.

'ಗೂಗಲ್ ಸರ್ಚ್‌ನಲ್ಲಿ ವೆಬ್‌ಸೈಟ್‌ಗಳು ಗೋಚರಿಸುತ್ತಿವೆ. ವಂಚಕರು ಆನ್‌ಲೈನ್ ಮೂಲಕ ಭಕ್ತರಿಂದ ಹಣ ಸಂಗ್ರಹಿಸುತ್ತಿದ್ದಾರೆ. ಈಗಾಗಲೇ ದೇಗುಲದ ಚಿತ್ರ ಮತ್ತು ಆಡಳಿತ ಮಂಡಳಿಯ ಚಿಹ್ನೆ ಬಳಸಿರುವವರ ವಿರುದ್ಧ ಟಿಟಿಡಿ ಐಟಿ ವಿಭಾಗ ಪೊಲೀಸರಿಗೆ ದೂರು ನೀಡಿದೆ. ಪೊಲೀಸರು ಕಾನೂನು ಕ್ರಮ ಜರುಗಿಸಲಿದ್ದಾರೆ' ಎಂದು ತಿಳಿಸಿದೆ.

ಅನುಮಾನ ಬರುವ ವೆಬ್‌ಸೈಟ್, ದೂರವಾಣಿ ಕರೆಗಳ ಬಗ್ಗೆ ಟಿಟಿಡಿಗೆ ಮಾಹಿತಿ ನೀಡಿ. ದೇಗುಲದ ಅಧಿಕೃತ ವೆಬ್‌ಸೈಟ್‌ನಲ್ಲೇ ದರ್ಶನ, ಕೊಠಡಿ ಮತ್ತು ಸೇವಾ ರಶೀದಿಗಳನ್ನು ಪಡೆಯಿರಿ ಎಂದು ಭಕ್ತರಿಗೆ ತಿಳಿಸಿದೆ.

ಕುಂಬಾರಪೇಟೆ: ಭಾರಿ ಅಗ್ನಿ ಅವಘಡ

ಹೊತ್ತಿ ಉರಿದ ಪ್ಲಾಸ್ಟಿಕ್ ವಸ್ತುಗಳು, ಪೀಠೋಪಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನದಟ್ಟಣೆಯ ಪ್ರದೇಶವಾದ ಚಿಕ್ಕಪೇಟೆ- ಕುಂಬಾರ ಪೇಟೆಯಲ್ಲಿರುವ ಲಕ್ಷ್ಮಿ ಕಮರ್ಷಿಯಲ್ ಕಟ್ಟಡದ ಗೋದಾಮಿನಲ್ಲಿ ಬುಧವಾರ ಬೆಳಿಗ್ಗೆ ಅಗ್ನಿ ಅವಘಡ ಸಂಭವಿಸಿದ್ದು, ಅಪಾರ ನಷ್ಟ ಉಂಟಾಗಿದೆ.

ಪ್ಲಾಸ್ಟಿಕ್ ವಸ್ತುಗಳು ಮತ್ತು ಹಾರ್ಡ್‌ವೇರ್ ವಸ್ತುಗಳನ್ನು ಸಂಗ್ರಹಿಸಿದ್ದ ಮೂರು ಅಂತಸ್ತಿನ ಕಟ್ಟಡದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಪಕ್ಕದ ಫ್ಯಾನ್ಸಿ ಸ್ಟೋರ್‌ಗೂ ವ್ಯಾಪಿಸಿತ್ತು. ಬಿಸಿಲು ಏರುತ್ತಿದ್ದಂತೆಯೇ ಕ್ಷಣ ಕ್ಷಣಕ್ಕೂ ಬೆಂಕಿ ವ್ಯಾಪಿಸುತ್ತಲೇ ಸಾಗಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಪ್ಲಾಸ್ಟಿಕ್ ವಸ್ತುಗಳೇ ಹೆಚ್ಚಿದ್ದ ಕಾರಣ ಬೆಂಕಿ ವೇಗವಾಗಿ ಎಲ್ಲೆಡೆ ವ್ಯಾಪಿಸಿತ್ತು. ಬೆಂಕಿ ಆವರಿಸುತ್ತಿದ್ದಂತೆ ಇಡೀ ಪ್ರದೇಶದಲ್ಲಿ ದಟ್ಟವಾದ ಕಪ್ಪು ಹೊಗೆ ತುಂಬಿಕೊಂಡಿತ್ತು. ಇದರಿಂದ ಸ್ಥಳೀಯ ನಿವಾಸಿಗಳು ಮತ್ತು ವ್ಯಾಪಾರಿಗಳಲ್ಲಿ ತೀವ್ರ ಆತಂಕ ಸೃಷ್ಟಿಯಾಗಿತ್ತು. ಫ್ಯಾನ್ಸಿ ಸ್ಟೋರ್‌ನಲ್ಲಿದ್ದ ಪ್ಲಾಸ್ಟಿಕ್ ಗಿಫ್ಟ್‌ಗಳು, ಪೈಪ್, ಪೀಠೋಪಕರಣಗಳು ಸುಟ್ಟು ಭಸ್ಮವಾಗಿವೆ.

ಬೆಳಿಗ್ಗೆ ಅವಘಡ ಸಂಭವಿಸಿದ್ದರಿಂದ ಕಟ್ಟಡದಲ್ಲಿದ್ದ ಯಾವುದೇ ಮಳಿಗೆಯ ಬಾಗಿಲು ತೆರೆದಿರಲಿಲ್ಲ. ಗ್ರಾಹಕರೂ ಇರಲಿಲ್ಲ. ಘಟನೆಯಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ನಿರಂತರ ಕಾರ್ಯಾಚರಣೆ: 'ಬೆಳಿಗ್ಗೆ 8.30ರಿಂದ ಸಂಜೆ 4ರವರೆಗೆ ಅಗ್ನಿಶಾಮಕದ ದಳದ ಸಿಬ್ಬಂದಿ ನಿರಂತರ ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ಹತೋಟಿಗೆ ತಂದರು. ಅಕ್ಕಪಕ್ಕದ ಕಟ್ಟಡಗಳಿಗೆ ಬೆಂಕಿ ವ್ಯಾಪಿಸದಂತೆಯೂ ಕ್ರಮ ಕೈಗೊಂಡಿದ್ದರು. ಅಪಾರ ಪ್ರಮಾದಲ್ಲಿ ಪ್ಲಾಸ್ಟಿಕ್ ವಸ್ತುಗಳನ್ನು ಸಂಗ್ರಹ ಮಾಡಿದ್ದರಿಂದ ಹೊಗೆ ಹೆಚ್ಚಿತ್ತು. ಹೊಗೆಯಿಂದಾಗಿ ಕಾರ್ಯಾಚರಣೆಗೂ ಪದೇ ಪದೇ ಅಡಚಣೆ ಉಂಟಾಗುತ್ತಿತ್ತು. ಅಗ್ನಿಶಾಮಕ ದಳದ ಸಿಬ್ಬಂದಿ ಆಮ್ಲಜನಕದ ಸಿಲಿಂಡರ್ ಬಳಸಿ ಕಟ್ಟಡ ಪ್ರವೇಶಿಸಿ ಕಾರ್ಯಾಚರಣೆ ನಡೆಸಿದರು. ಕಾರ್ಯಾಚರಣೆ ಸಂದರ್ಭದಲ್ಲಿ ಹೊಗೆ ಹಾಗೂ ಬಿಸಿನೀರು ಬಿದ್ದು ಆರು ಮಂದಿ ಅಸ್ವಸ್ಥಗೊಂಡಿದ್ದರು. ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಯಿತು. ಎಲ್ಲರೂ ಚೇತರಿಸಿಕೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಬೆಂಕಿ ಅವಘಡ ಸಂಭವಿಸಿದ ಕಟ್ಟಡದ ಬಳಿಗೆ ತೆರಳುವುದಕ್ಕೆ ದೊಡ್ಡದಾದ ರಸ್ತೆ ಇರಲಿಲ್ಲ. ಕಿರಿದಾದ ರಸ್ತೆಯಿದ್ದ ಕಾರಣಕ್ಕೆ ದೂರದಲ್ಲೇ ಅಗ್ನಿಶಾಮಕ ವಾಹನಗಳನ್ನು ನಿಲುಗಡೆ ಮಾಡಿಕೊಂಡು ಕಾರ್ಯಾಚರಣೆ ನಡೆಸಲಾಯಿತು.

ಆತಂಕದ ವಾತಾವರಣ: ಹೊಗೆ ಹಾಗೂ ಬೆಂಕಿಯ ಜ್ವಾಲೆಯಿಂದ ಸ್ಥಳೀಯ ನಿವಾಸಿಗಳು, ವ್ಯಾಪಾರಿಗಳು ಹಾಗೂ ಕಟ್ಟಡದ ಅಕ್ಕಪಕ್ಕದ ಮಳಿಗೆದಾರರಲ್ಲಿ ಆತಂಕ ಸೃಷ್ಟಿಯಾಗಿತ್ತು. ಅಕ್ಕಪಕ್ಕದ ಕಟ್ಟಡಗಳಿಗೆ ಬೆಂಕಿ ವ್ಯಾಪಿಸದಂತೆ ತಡೆಯಲು ಅಗ್ನಿಶಾಮಕ ಇಲಾಖೆ ಸಿಬ್ಬಂದಿ ಯಶಸ್ವಿಯಾದರು. ಆದರೂ, ಲಕ್ಷ್ಮಿ ಕಮರ್ಷಿಯಲ್ ಕಟ್ಟಡದಲ್ಲಿರುವ ಕೆಲವು ಮಳಿಗೆಗಳಿಗೆ ಬೆಂಕಿ ತಗುಲಿ ಹಾನಿಯಾಗಿದೆ.

'ಚಾಮರಾಜಪೇಟೆ ಅಗ್ನಿಶಾಮಕ ಠಾಣೆಗೆ ಬುಧವಾರ ಬೆಳಿಗ್ಗೆ 8.30ರ ಸುಮಾರಿಗೆ ಮಾಹಿತಿ ಬಂದಿತ್ತು. ಆರಂಭದಲ್ಲಿ ಅಗ್ನಿಶಾಮಕ ಇಲಾಖೆಯ ಒಂದು ವಾಹನವನ್ನು ಸ್ಥಳಕ್ಕೆ ಕಳುಹಿಸಲಾಗಿತ್ತು. ಕಾರ್ಯಾಚರಣೆಗೆ ಇನ್ನೂ ಹೆಚ್ಚಿನ ಸಿಬ್ಬಂದಿ ಬೇಕೆಂದು ಸಿಬ್ಬಂದಿ ಕೇಳಿದ್ದರು. ತಕ್ಷಣವೇ 150 ಸಿಬ್ಬಂದಿ ಹಾಗೂ ಆರು ವಾಹನಗಳನ್ನು ಕಳುಹಿಸಿ, ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸಲಾಯಿತು' ಎಂದು ಅಗ್ನಿಶಾಮಕ ಇಲಾಖೆಯ ಅಧಿಕಾರಿ ಜಯರಾಮಯ್ಯ ತಿಳಿಸಿದರು.

ಕಳೆದ ವರ್ಷವೂ ಅನಾಹುತ

'2025ರ ಆಗಸ್ಟ್ 16ರಂದು ನಗರ್ತಪೇಟೆಯ ನಾಲ್ಕು ಅಂತಸ್ತಿನ ಕಟ್ಟಡದಲ್ಲಿ ಬೆಂಕಿ ಅವಘಡ ಸಂಭವಿಸಿ ಒಂದೇ ಕುಟುಂಬದ ನಾಲ್ವರು ಸೇರಿ ಐವರು ಸಜೀವ ದಹನವಾಗಿದ್ದರು. ಕಿರಿದಾದ ಪ್ರದೇಶದಲ್ಲಿ ಇರುವ ಕಟ್ಟಡಗಳ ಮಾಲೀಕರು ಎಚ್ಚರಿಕೆ ವಹಿಸಬೇಕು. ಅಗ್ನಿ ನಂದಕ ಉಪಕರಣಗಳನ್ನು ಅಳವಡಿಸಿರಬೇಕೆಂದು ಅಗ್ನಿಶಾಮಕ ಇಲಾಖೆ ಸೂಚನೆ ನೀಡಿತ್ತು. ಆದರೂ, ಪಾಲನೆ ಆಗುತ್ತಿಲ್ಲ' ಎಂಬ ಆರೋಪವಿದೆ.



ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿದ್ದ ಅಗ್ನಿಶಾಮಕ ಇಲಾಖೆಯ ಸಿಬ್ಬಂದಿ

ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಅವಘಡ?

ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಅವಘಡ ಸಂಭವಿಸಿದೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ಹಲಸೂರು ಗೇಟ್ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಘಟನೆಗೆ ಬೇರೆ ಏನಾದರೂ ಕಾರಣ ಇರಬಹುದೇ ಎಂಬುದನ್ನು ಪತ್ತೆ ಮಾಡಲಾಗುತ್ತಿದೆ ಎಂದು ಮೂಲಗಳು ಹೇಳಿವೆ.



ಬೆಂಕಿಯಿಂದ ಆವರಿಸಿದ್ದ ದಟ್ಟ ಹೊಗೆ

ಸುದ್ದಿ 2 ನಿಮಿಷ

ಪಾಸ್‌ಪೋರ್ಟ್ ಅರ್ಜಿ ಪರಿಶೀಲನೆ ಬಾಡಿವೋರ್ನ್ ಕ್ಯಾಮೆರಾ ಕಡ್ಡಾಯ

ಬೆಂಗಳೂರು: ಪಾಸ್‌ಪೋರ್ಟ್ ಅರ್ಜಿಗಳ ಪರಿಶೀಲನೆ ಪ್ರಕ್ರಿಯೆಯ ವೇಳೆ ಪೊಲೀಸ್ ಸಿಬ್ಬಂದಿ ಕಡ್ಡಾಯವಾಗಿ ಬಾಡಿವೋರ್ನ್ ಕ್ಯಾಮೆರಾ ಬಳಕೆ ಮಾಡಬೇಕು. ಜತೆಗೆ, ನಿಗದಿತ ಮಾನದಂಡಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ಆದೇಶಿಸಿದ್ದಾರೆ.

ಪಾಸ್‌ಪೋರ್ಟ್ ಅರ್ಜಿದಾರರನ್ನು ಪೊಲೀಸ್ ಠಾಣೆಗಳಿಗೆ ಪರಿಶೀಲನೆಗೆಂದು ಕರೆಸುವಂತಿಲ್ಲ. ಪಾಸ್‌ಪೋರ್ಟ್ ಅರ್ಜಿಗಳ ಪರಿಶೀಲನೆಗೆ ಅರ್ಜಿದಾರರು ನೀಡಿರುವ ವಿಳಾಸಕ್ಕೆ ಹೋಗುವ ಮೊದಲು ಅರ್ಜಿದಾರರಿಗೆ ಮಾಹಿತಿ ನೀಡಬೇಕು (ಕನಿಷ್ಠ 24 ಗಂಟೆಗಳ ಮುಂಚಿತವಾಗಿ ಎಸ್‌ಎಂಎಸ್ ಅಥವಾ ಕರೆ ಮಾಡುವ ಮೂಲಕ). ಎಲ್ಲ ಕ್ರಮಗಳನ್ನೂ ಪಾರದರ್ಶಕವಾಗಿ ದಾಖಲಿಸಬೇಕು. ಪರಿಶೀಲನೆ ನಡೆಸುವ ಎಲ್ಲ ಅಧಿಕಾರಿಗಳು ಹಾಗೂ ಸಿಬ್ಬಂದಿ ಆರಂಭದಿಂದ ಕೊನೆಯವರೆಗೆ ಬಾಡಿವೋರ್ನ್ ಕ್ಯಾಮೆರಾವನ್ನು ಕಡ್ಡಾಯವಾಗಿ ಧರಿಸಿರಬೇಕು ಎಂದು ಆದೇಶದಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಎಲ್ಲ ವಿಭಾಗದ ಡಿಸಿಪಿಗಳು ಮೇಲ್ವಿಚಾರಣೆ ನಡೆಸಿ ವಾರಕ್ಕೊಮ್ಮೆ ನಗರ ಪೊಲೀಸ್ ಕಮಿಷನರ್ ಕಚೇರಿಗೆ ವರದಿ ಸಲ್ಲಿಸಬೇಕು. ಪರಿಶೀಲನೆಯ ವೇಳೆ ಕೆಲವು ನಿಯಮಗಳ ಪಾಲನೆಯಲ್ಲಿ ವಿನಾಯಿತಿ ಅಗತ್ಯವಿದ್ದಲ್ಲಿ ಕಚೇರಿಗೆ ಲಿಖಿತ ಮನವಿ ಸಲ್ಲಿಸಿ ಪೂರ್ವಾನುಮತಿ ಪಡೆದುಕೊಳ್ಳಬೇಕು ಎಂದು ಸೂಚಿಸಿದ್ದಾರೆ.



ಸ್ಪೇನ್ ಪೋಷಕರಿಂದ ಮೂವರು ಮಕ್ಕಳ ದತ್ತು ಸ್ವೀಕಾರ

ಮೈಸೂರು: ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮೂಲಕ ಛಾಯಾದೇವಿ ವಿಶೇಷ ದತ್ತು ಕೇಂದ್ರದ ಮಗುವನ್ನು ಸ್ಪೇನ್ ಪೋಷಕರು ನಗರದಲ್ಲಿ ಬುಧವಾರ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಸಮ್ಮುಖದಲ್ಲಿ ದತ್ತು ಸ್ವೀಕರಿಸಿದರು.

ಸರ್ಕಾರಿ ವಿಶೇಷ ದತ್ತು ಕೇಂದ್ರದ 3 ಹಾಗೂ ಛಾಯಾದೇವಿ ದತ್ತು ಕೇಂದ್ರದಿಂದ ಮೂವರು ಮಕ್ಕಳನ್ನು ಕಾನೂನು ಪ್ರಕ್ರಿಯೆ ಮೂಲಕ ಪೋಷಕರಿಗೆ ದತ್ತು ನೀಡಲಾಯಿತು. ಈವರೆಗೆ ಎರಡೂ ಸಂಸ್ಥೆಯಿಂದ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮೂಲಕ 41 ದೇಶಿಯವಾಗಿ ಹಾಗೂ 6 ಮಕ್ಕಳನ್ನು ವಿದೇಶಕ್ಕೆ ದತ್ತು ನೀಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಬಿಬಿಎಂಪಿ ಮಹದೇವಪುರ ವಲಯದಲ್ಲಿ ಸೇವೆ ಸಲ್ಲಿಸಿದ್ದ ಪರಮೇಶ್ವರಯ್ಯ

ನಿವೃತ್ತ ಮುಖ್ಯ ಎಂಜಿನಿಯರ್ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ನಿವೃತ್ತ ಮುಖ್ಯ ಎಂಜಿನಿಯರ್ ಪರಮೇಶ್ವರಯ್ಯ (63) ಅವರು ಕೋರಮಂಗಲದ ತಮ್ಮ ನಿವಾಸದಲ್ಲಿ ನೇಣು ಹಾಕಿಕೊಂಡು ಬುಧವಾರ ಬೆಳಿಗ್ಗೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬಿಬಿಎಂಪಿಯ ಮಹದೇವಪುರ ವಲಯದಲ್ಲಿ ಪರಮೇಶ್ವರಯ್ಯ ಅವರು ಮುಖ್ಯ ಎಂಜಿನಿಯರ್ ಆಗಿ ನಿವೃತ್ತರಾಗಿದ್ದರು.

ಕೋರಮಂಗಲದ ನಾಲ್ಕನೇ ಬ್ಲಾಕ್‌ನಲ್ಲಿರುವ ತಮ್ಮ ನಿವಾಸದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಒಂದು ಪುಟದ ಮರಣ ಪತ್ರ ಸಿಕ್ಕಿದೆ. ಪರಿಶೀಲನೆ ನಡೆಸಲಾಗುತ್ತಿದೆ ಎಂದು ಕೋರಮಂಗಲ ಠಾಣೆಯ ಪೊಲೀಸರು ತಿಳಿಸಿದರು.

'ನನ್ನ ಸಾವಿಗೆ ಯಾರೂ ಕಾರಣರಲ್ಲ. ನಾನೇ ಕಾರಣ. ಯಾರಿಗೂ ತೊಂದರೆ ಕೊಡಬೇಡಿ, ನನ್ನ ವೈಯಕ್ತಿಕ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ' ಎಂದು ಬರೆದಿರುವ ಮರಣ ಪತ್ರವೊಂದು ಸಿಕ್ಕಿದೆ. ಆ ಪತ್ರವನ್ನು ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಪರಮೇಶ್ವರಯ್ಯ ಅವರು ಪತ್ನಿ ಮತ್ತು ಪುತ್ರನೊಂದಿಗೆ ಕೋರಮಂಗಲದಲ್ಲಿ ವಾಸವಿದ್ದರು. ಮತ್ತೊಬ್ಬ ಮಗ ಎಂಜಿನಿಯರ್ ಆಗಿದ್ದು, ಆಸ್ಟ್ರೇಲಿಯಾದಲ್ಲಿ ಕೆಲಸ ಮಾಡುತ್ತಿದ್ದಾರೆ.

'20 ದಿನಗಳ ಹಿಂದೆ ಪರಮೇಶ್ವರಯ್ಯ ಅವರ ನಿವಾಸದ ಮೇಲೆ ಸಿಬಿಐ ಅಧಿಕಾರಿಗಳು ದಾಳಿ ನಡೆಸಿ ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿದ್ದರು. ಸಿಬಿಐ ದಾಳಿಯ ನಂತರ ಪರಮೇಶ್ವರಯ್ಯ ಮಾನಸಿಕವಾಗಿ ನೊಂದಿದ್ದರು. ಮನೆಯವರ ಜತೆಯೂ ಹೆಚ್ಚು ಮಾತನಾಡುತ್ತಿರಲಿಲ್ಲ. ಪದೇ ಪದೇ ಸಿಬಿಐ ಪ್ರಕರಣದ ಬಗ್ಗೆಯೇ ಚಿಂತಿಸುತ್ತಿದ್ದರು. ಹೀಗಾಗಿ, ಅವರು ಇತ್ತೀಚೆಗೆ ಮನೋವೈದ್ಯರನ್ನು ಭೇಟಿ ಮಾಡಿ ಚಿಕಿತ್ಸೆ ಕೂಡ ಪಡೆದುಕೊಂಡಿದ್ದರು' ಎಂದು ಮೂಲಗಳು ಹೇಳಿವೆ.

ವಿಚಾರಣೆಗೆ ಹಾಜರಾಗಲು ಸೂಚಿಸಿದ್ದ ಸಿಬಿಐ

ದಾಳಿ ಬಳಿಕ ವಿಚಾರಣೆಗೆ ಹಾಜರಾಗುವಂತೆ ಪರಮೇಶ್ವರಯ್ಯ ಅವರಿಗೆ ಸಿಬಿಐ ಸೂಚಿಸಿತ್ತು. ಆರ್.ಟಿ.ನಗರದಲ್ಲಿರುವ ಸಿಬಿಐ ಕಚೇರಿಗೆ ಬುಧವಾರ ವಿಚಾರಣೆಗೆ ಹಾಜರಾಗಬೇಕಿತ್ತು. ಅದಕ್ಕೂ ಮುನ್ನ ಪರಮೇಶ್ವರಯ್ಯ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿಚಾರಣೆ ವೇಳೆ ಹೆಸರು ಪ್ರಸ್ತಾಪ

ಆದಾಯ ತೆರಿಗೆ ವಂಚನೆ ಆರೋಪದ ಮೇರೆಗೆ ಐದು ವರ್ಷಗಳ ಹಿಂದೆ ಬಿಬಿಎಂಪಿ ಗುತ್ತಿಗೆದಾರ ಜಿ.ಅನಿಲ್ ಕುಮಾರ್ ಅವರ ಮನೆ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ದಾಳಿ ನಡೆಸಿದ್ದರು.

ದಾಳಿ ವೇಳೆ ಸೂಟ್‌ಕೇಸ್, ಮೂರು ಬ್ಯಾಂಕ್ ಲಾಕರ್ ಕೀಗಳು, ₹1.35 ಲಕ್ಷ ನಗದು, 275 ಗ್ರಾಂ ಚಿನ್ನಾಭರಣ, ಇತರೆ ದಾಖಲೆಗಳು ಪತ್ತೆಯಾಗಿದ್ದವು. ಅನಿಲ್ ಕುಮಾರ್ ವಿಚಾರಣೆ ವೇಳೆ ಸೂಟ್‌ಕೇಸ್ ಪರಮೇಶ್ವರಯ್ಯ ಅವರಿಗೆ ಸೇರಿದ್ದು ಎಂಬುದಾಗಿ ಹೇಳಿಕೆ ನೀಡಿದ್ದರು. ಐ.ಟಿ ಅಧಿಕಾರಿಗಳು ಪರಮೇಶ್ವರಯ್ಯ ವಿರುದ್ಧ 2021ರಲ್ಲಿ ಪ್ರಕರಣ ದಾಖಲಿಸಿಕೊಂಡು ಅವರ ಮನೆ ಮೇಲೂ ದಾಳಿ ನಡೆಸಿದ್ದರು. ಈ ವೇಳೆಯೂ ಮೂರು ಬ್ಯಾಂಕ್ ಲಾಕರ್‌ಗಳ ಕೀಗಳು ಪತ್ತೆ ಆಗಿದ್ದವು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಖಾಸಗಿ ಏಜೆನ್ಸಿ ನೋಂದಣಿ ಕಡ್ಡಾಯ

ಮ್ಯಾನ್‌ಹೋಲ್ ಸ್ವಚ್ಛತೆ: ನಿಯಮ ಪಾಲನೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮ್ಯಾನ್‌ಹೋಲ್ ಮತ್ತು ತ್ಯಾಜ್ಯ ನೀರು ಸಂಸ್ಕರಣಾ ಘಟಕ ಸ್ವಚ್ಛಗೊಳಿಸುವ ಎಲ್ಲ ಖಾಸಗಿ ಏಜೆನ್ಸಿಗಳು ಜಲಮಂಡಳಿಯಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾಯ್ದೆ 1964ರ ಸೆಕ್ಷನ್ 84 ಮತ್ತು 88ರ ಅಡಿಯ ಅಧಿಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಖಾಸಗಿ ಏಜೆನ್ಸಿಗಳ ಮೇಲೆ ನಿಗಾವಹಿಸಬೇಕು ಎಂದು ಎಂಜಿನಿಯರ್‌ಗಳಿಗೆ ಜಲಮಂಡಳಿ ಅಧ್ಯಕ್ಷ ಡಾ.ರಾಮಪ್ರಸಾತ್ ಮನೋಹರ್ ಸೂಚನೆ ನೀಡಿದ್ದಾರೆ.

ಮಾ.7ರ ಒಳಗೆ ಕಡ್ಡಾಯ ನೋಂದಣಿ: ಒಳಚರಂಡಿ ವ್ಯವಸ್ಥೆಯ ಮ್ಯಾನ್‌ಹೋಲ್ ಮತ್ತು ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳನ್ನು(ಎಸ್‌ಟಿಪಿ) ಸ್ವಚ್ಛಗೊಳಿಸುವ ಖಾಸಗಿ ವಾಹನಗಳ ಮಾಲೀಕರು ಮತ್ತು ಏಜೆನ್ಸಿಗಳು ಮಾರ್ಚ್ 7ರೊಳಗೆ ನೋಂದಣಿ ಮಾಡಿಸಿಕೊಳ್ಳಬೇಕು.

ವಾಣಿಜ್ಯ ಕಟ್ಟಡಗಳು, ವಸತಿ ಸಮುಚ್ಚಯಗಳು, ಗುಂಪು ಮನೆಗಳು ಮತ್ತು ಖಾಸಗಿ ಬಡಾವಣೆಗಳ ಎಸ್‌ಟಿಪಿ ಹಾಗೂ ಮ್ಯಾನ್‌ಹೋಲ್‌ಗಳ ನಿರ್ವಹಣೆಯನ್ನು ಜಲಮಂಡಳಿಯಲ್ಲಿ ನೋಂದಾಯಿತವಾಗಿರುವ ಏಜೆನ್ಸಿಗಳ ಮುಖಾಂತರವೇ ಮಾಡಿಸಬೇಕು ಎಂದು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳಿಗೆ ಸೂಚಿಸಲಾಗಿದೆ.

ನೋಂದಾಯಿಸಲಾಗದ ಏಜೆನ್ಸಿ ಅಥವಾ ಅನಧಿಕೃತ ವ್ಯಕ್ತಿಗಳ ಮೂಲಕ ಸ್ವಚ್ಛತಾ ಕಾರ್ಯ ಕೈಗೊಂಡಾಗ ಯಾವುದಾದರೂ ಅನಾಹುತ ಸಂಭವಿಸಿದಲ್ಲಿ, ಆಯಾ ವಾಣಿಜ್ಯ ಕಟ್ಟಡ, ವಸತಿ ಸಮುಚ್ಚಯ, ಖಾಸಗಿ ಬಡಾವಣೆಗಳ ಮಾಲೀಕರು ಅಥವಾ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರೇ ನೇರ ಜವಾಬ್ದಾರರಾಗುತ್ತಾರೆ ಎಂದು ಎಚ್ಚರಿಸಲಾಗಿದೆ.

ಈ ನಿಯಮಾವಳಿಗಳ ಕುರಿತು ಎಲ್ಲ ವಾಣಿಜ್ಯ ಕಟ್ಟಡಗಳು ಮತ್ತು ವಸತಿ ಸಮುಚ್ಚಯಗಳ ಮಾಲೀಕರು ಹಾಗೂ ಅಸೋಸಿಯೇಷನ್‌ಗಳಿಗೆ ಕೂಡಲೇ ಸೂಚನಾ ಪತ್ರವನ್ನು ನೀಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಮುಖ್ಯಾಂಶಗಳು

- ಏಜೆನ್ಸಿಗಳ ಮೇಲೆ ನಿಗಾವಹಿಸಲು ನಿರ್ದೇಶನ
- ಸೂಚನಾ ಪತ್ರವನ್ನು ನೀಡಲು ಆದೇಶ



ಮಾ.16ಕ್ಕೆ ಎನ್‌ಎಚ್‌ಎಂ ಸಿಬ್ಬಂದಿಯಿಂದ ಮುಷ್ಕರ

ಬೆಂಗಳೂರು: ಸೇವೆ ಕಾಯಮಾತಿ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿರುವ ರಾಷ್ಟ್ರೀಯ ಆರೋಗ್ಯ ಅಭಿಯಾನದ ಗುತ್ತಿಗೆ ಮತ್ತು ಹೊರಗುತ್ತಿಗೆ ಸಿಬ್ಬಂದಿ, ಮಾರ್ಚ್ 16ರಿಂದ ಅನಿರ್ದಿಷ್ಟಾವಧಿ ಮುಷ್ಕರ ಕೈಗೊಳ್ಳುವುದಾಗಿ ಘೋಷಿಸಿದ್ದಾರೆ.

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘವು ಈ ಬಗ್ಗೆ ಅಭಿಯಾನದ ನಿರ್ದೇಶಕರಿಗೆ ಪತ್ರ ಬರೆದಿದೆ.

'ಆರೋಗ್ಯ ಹಾಗೂ ವೈದ್ಯಕೀಯ ಇಲಾಖೆಯ ಸಂಘಗಳು ಕರೆ ನೀಡಿರುವ ಮುಷ್ಕರಕ್ಕೆ ಬೆಂಬಲ ನೀಡಲಾಗುವುದು. ಮಾರ್ಚ್ 11ರಿಂದ 15ರವರೆಗೆ ಕಪ್ಪು ಪಟ್ಟಿ ಧರಿಸಿ ಕಾರ್ಯನಿರ್ವಹಿಸಲಾಗುವುದು. ಬಳಿಕ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುತ್ತದೆ. ಚುನಾವಣೆ ಪೂರ್ವದಲ್ಲಿ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಪ್ರಕಟಿಸಿದಂತೆ ಎಲ್ಲ ಗುತ್ತಿಗೆ ಮತ್ತು ಹೊರಗುತ್ತಿಗೆ ಸಿಬ್ಬಂದಿಯ ಸೇವೆಯನ್ನು ಕಾಯಂಗೊಳಿಸಲು ತೀರ್ಮಾನಿಸಿ, ಆ ಬಗ್ಗೆ ಪ್ರಕ್ರಿಯೆ ಆರಂಭಿಸಬೇಕು' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಶ್ರೀಕಾಂತ ಸ್ವಾಮಿ ಆಗ್ರಹಿಸಿದ್ದಾರೆ.

ಜಿಎಸ್‌ಟಿ ಅಧಿಕಾರಿಗಳ ಸೋಗಿನಲ್ಲಿ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರಕು ಮತ್ತು ಸೇವಾ ತೆರಿಗೆಗಳ ಇಲಾಖೆಯ (ಜಿಎಸ್‌ಟಿ) ಅಧಿಕಾರಿಗಳ ಸೋಗಿನಲ್ಲಿ ಗುಟ್ಕಾ ವ್ಯಾಪಾರಿಯನ್ನು ಬೆದರಿಸಿ ಸುಲಿಗೆ ಮಾಡಿದ್ದ ಇಬ್ಬರನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಂಧಿತರಾದ ನಾಗರಾಜ್ ಹಾಗೂ ದಾದಾಪೀರ್ ಅವರಿಂದ ₹5 ಲಕ್ಷ ನಗದು, ಮೂರು ನಕಲಿ ಗುರುತಿನ ಚೀಟಿ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಗಳಿಬ್ಬರು ಬನಶಂಕರಿ ಯಲ್ಲಿರುವ ಸರಕು ಮತ್ತು ಸೇವಾ ತೆರಿಗೆಗಳ ಇಲಾಖೆಯ ಪ್ರಧಾನ ಆಯುಕ್ತರ ಕಚೇರಿಯಲ್ಲಿ ಹೌಸ್ ಕೀಪಿಂಗ್ ಕೆಲಸ ಮಾಡುತ್ತಿದ್ದರು. ಆರೋಪಿಗಳು ನಕಲಿ ಗುರುತಿನ ಚೀಟಿ ತೋರಿಸಿ ಜ.10ರಂದು ಪೀಣ್ಯದಲ್ಲಿ ಗುಟ್ಕಾ ವ್ಯಾಪಾರಿಯನ್ನು ಬೆದರಿಸಿ ₹5 ಲಕ್ಷ ಸುಲಿಗೆ ಮಾಡಿದ್ದರು ಎಂದು ಪೊಲೀಸರು ತಿಳಿಸಿದರು.

'ಆರೋಪಿಗಳು ಜಿಎಸ್‌ಟಿ–ಸಿಎಲ್‌ಟಿಎಸ್ ಹಾಗೂ ಇಂಟಲಿಜೆನ್ಸ್ ಅಧಿಕಾರಿಗಳಂತೆ ನಕಲಿ ಗುರುತಿನ ಚೀಟಿ ಮಾಡಿಸಿಕೊಂಡಿದ್ದರು. ಅವರ ಕಾರ್ಯವೈಖರಿ ಬಗ್ಗೆ ಅನುಮಾನ ಗೊಂಡಿದ್ದ ಇಲಾಖೆ ಅಧಿಕಾರಿಗಳು, ಫೆ.17ರಂದು ವಿಚಾರಣೆಗೆ ಒಳಪಡಿಸಿದ್ದರು. ಅವರು ವಾಸವಿದ್ದ ಮನೆ ಹಾಗೂ ಅವರಿಗೆ ಕಚೇರಿಯಲ್ಲಿ ನೀಡಲಾಗಿದ್ದ ಕೊಠಡಿಗಳಲ್ಲಿ ಪರಿಶೀಲನೆ ನಡೆಸಿದ್ದರು. ಆಗ, ನಕಲಿ ಗುರುತಿನ ಚೀಟಿಗಳು ಪತ್ತೆ ಆಗಿದ್ದವು. ಪೊಲೀಸರಿಗೆ ಜಿಎಸ್‌ಟಿ ಅಧಿಕಾರಿಗಳು ದೂರು ನೀಡಿದ್ದರು. ಆ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಮೂಲಗಳು ಹೇಳಿವೆ.



ದಾದಾಪೀರ್



ನಾಗರಾಜ್

ಕಂದನ ಬೆರಳು ಕತ್ತರಿಸಿದ ನರ್ಸ್

ಬೆಂಗಳೂರು: ಡ್ರಿಪ್ಸ್ ತೆಗೆಯುವ ಸಂದರ್ಭದಲ್ಲಿ ನರ್ಸ್‌ವೊಬ್ಬರು ಆರು ತಿಂಗಳ ಮಗುವಿನ ಎಡಗೈನ ಬೆರಳು ಕತ್ತರಿಸಿದ್ದು, ಈ ಸಂಬಂಧ ಸಿಎಂಎಚ್ ಆಸ್ಪತ್ರೆಯ ನರ್ಸ್ ಅನಿತಾ, ವೈದ್ಯೆ ಹಾಗೂ ಆಸ್ಪತ್ರೆ ಆಡಳಿತ ಮಂಡಳಿಯ ವಿರುದ್ಧ ಇಂದಿರಾನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಉದಯನಗರ ನಿವಾಸಿ ವಿಜಯ್ ಕುಮಾರ್ ಅವರ ಪುತ್ರ ಬಾಲಕುಮಾರ್‌ನ ಎಡಗೈನ ಕೊನೆಯ ಬೆರಳು ತುಂಡಾಗಿದೆ. ಈ ಸಂಬಂಧ ವಿಜಯ್ ಕುಮಾರ್ ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ಅನಿತಾ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ. ಫೆ.24ರಂದು ಆಸ್ಪತ್ರೆಯಲ್ಲಿ ಘಟನೆ ನಡೆದಿತ್ತು ಎಂದು ಪೊಲೀಸರು ಮಾಹಿತಿ ನೀಡಿದರು.

'ಆರು ತಿಂಗಳ ಮಗು ಬಾಲಕುಮಾರ್‌ಗೆ ಶೀತ ಮತ್ತು ಜ್ವರ ಕಾಣಿಸಿಕೊಂಡಿದ್ದರಿಂದ ಫೆ.19ರಂದು ಸಿಎಂಎಚ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮಕ್ಕಳ ತಜ್ಞೆ ಮೀನಾಕ್ಷಿ ಚಿಕಿತ್ಸೆ ನೀಡುತ್ತಿದ್ದರು. ಫೆ.24ರಂದು ಮಗುವನ್ನು ಡಿಸ್ಚಾರ್ಜ್ ಮಾಡಲು ಮೀನಾಕ್ಷಿ ಅವರು ನರ್ಸ್‌ಗೆ ಸೂಚಿಸಿದ್ದರು. ನರ್ಸ್ ಅನಿತಾ ಅವರು ಮಗುವಿಗೆ ಹಾಕಿದ್ದ ಡ್ರಿಪ್ಸ್ ತೆಗೆಯುವ ಸಂದರ್ಭದಲ್ಲಿ ಎಡಗೈನ ಕೊನೆಯ ಬೆರಳನ್ನು ಕತ್ತರಿಸಿದ್ದಾರೆ. ಅದರಿಂದ ಮಗುವಿಗೆ ತೀವ್ರ ನೋವು ಹಾಗೂ ಗಾಯವಾಗಿದೆ. ತಕ್ಷಣ ಆಸ್ಪತ್ರೆಯ ವೈದ್ಯರು ಡ್ರೆಸಿಂಗ್ ಮಾಡಿ, ಪ್ಲಾಸ್ಟರ್ ಮಾಡಿದ್ದರು' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ಮಗುವಿಗೆ ದೊಡ್ಡ ಗಾಯವಾಗಿಲ್ಲ. ಮಗುವಿಗೆ ಚಿಕ್ಕ ವಯಸ್ಸು. ಬೇಗ ಗುಣವಾಗುತ್ತದೆ' ಎಂದು ಆಸ್ಪತ್ರೆಯವರು ಭರವಸೆ ನೀಡಿದ್ದರು. ಆದರೆ, ನಿರ್ಲಕ್ಷ್ಯ ವಹಿಸಿದ್ದ ನರ್ಸ್, ಆಸ್ಪತ್ರೆಯ ವೈದ್ಯರು ಹಾಗೂ ಆಸ್ಪತ್ರೆಯ ಆಡಳಿತ ಮಂಡಳಿ ವಿರುದ್ಧ ಕ್ರಮಕೈಗೊಳ್ಳುವಂತೆ ವಿಜಯ್ ದೂರು ನೀಡಿದ್ದರು. ತನಿಖೆ ಮುಂದುವರಿದಿದೆ' ಎಂದು ಪೊಲೀಸರು ಹೇಳಿದರು.

ವಿದ್ಯಾರ್ಥಿ ಕೊಲೆ: ಇನ್‌ಸ್ಪೆಕ್ಟರ್ ಅಮಾನತು, ಪ್ರಕರಣ ಸಿಸಿಬಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್‌ಎಲ್‌ಬಿ ವಿದ್ಯಾರ್ಥಿ ರೇವಂತ್ ಅವರ ಕೊಲೆ ಪ್ರಕರಣದ ಸಂಬಂಧ ವರ್ತೂರು ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಯೋಗಾನಂದ್ ಅವರನ್ನು ಅಮಾನತುಗೊಳಿಸಿ ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ಆದೇಶಿಸಿದ್ದಾರೆ. ಅಲ್ಲದೇ, ಪ್ರಕರಣದ ತನಿಖೆಯನ್ನು ಸಿಸಿಬಿಗೆ ವರ್ಗಾವಣೆ ಮಾಡಿದ್ದಾರೆ.

2024ರ ಸೆ.18ರಂದು ರೇವಂತ್ (24) ಅವರನ್ನು ತಮಿಳುನಾಡಿನ ಬಾಗಲೂರಿಗೆ ಕರೆದೊಯ್ದು ಕೊಲೆ ಮಾಡಲಾಗಿತ್ತು. ರೌಡಿ ರೇವಾ ಮತ್ತು ಸಹಚರರು ಕೊಲೆ ಪ್ರಕರಣದ ಆರೋಪಿಗಳು. ಕೃತ್ಯ ನಡೆದು ಒಂದೂವರೆ ವರ್ಷ ಆಗಿದ್ದರೂ ದೋಷಾರೋಪ ಪಟ್ಟಿ ಸಲ್ಲಿಸಿಲ್ಲ. ನಿರ್ಲಕ್ಷ್ಯ ವಹಿಸಿದ ಆರೋಪದಡಿ ಯೋಗಾನಂದ್ ಅವರನ್ನು ಅಮಾನತು ಮಾಡಿ ಆದೇಶಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಸ್ನೇಹಿತ ಸ್ಟಾಲಿನ್ ಮೇಲೆ ನಡೆದಿದ್ದ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ದಾಖಲಿಸಲು ರೇವಂತ್ ಅವರು ಸಹಕರಿಸಿದ್ದರು. ದೂರು ವಾಪಸ್ ಪಡೆಯುವಂತೆ ರೇವಾ ತಂಡದವರು, ರೇವಂತ್ ಮೇಲೆ ಪದೇಪದೇ ಒತ್ತಡ ಹೇರಿದ್ದರು. ರಾಜಿ ಮಾಡಿಕೊಳ್ಳುವ ನೆಪದಲ್ಲಿ ಕರೆಸಿಕೊಂಡಿದ್ದ ದುಷ್ಕರ್ಮಿಗಳು, ರೇವಂತ್ ಅವರನ್ನು ಕೊಲೆ ಮಾಡಿದ್ದರು' ಎಂದು ಮೂಲಗಳು ಹೇಳಿವೆ.

ತಮಿಳುನಾಡು ಪೊಲೀಸರಿಂದ ವರ್ಗಾವಣೆಯಾದ ಈ ಪ್ರಕರಣದ ತನಿಖೆ ನಡೆಸಿದ್ದ ವರ್ತೂರು ಪೊಲೀಸರು, ನಿಯಮದಂತೆ 90 ದಿನಗಳ ಒಳಗೆ ದೋಷಾರೋಪ ಪಟ್ಟಿ ಸಲ್ಲಿಸಿರಲಿಲ್ಲ. ಜೈಲಿನಲ್ಲಿದ್ದ ರೌಡಿಶೀಟರ್ ರೇವಾ ಸೇರಿದಂತೆ ಏಳು ಮಂದಿ ಆರೋಪಿಗಳು ಜಾಮೀನು ಪಡೆದು ಹೊರಬಂದಿದ್ದರು. ಜಾಮೀನಿನ ಮೇಲೆ ಹೊರಬಂದಿದ್ದ ರೌಡಿ ರೇವಾಗೆ ಪ್ರತಿದಿನ ಠಾಣೆಗೆ ಬಂದು ಸಹಿ ಹಾಕುವಂತೆ ನ್ಯಾಯಾಲಯ ಆದೇಶಿಸಿತ್ತು. ಆದರೆ, ರೇವಾ ಠಾಣೆಗೆ ಬರುತ್ತಿರಲಿಲ್ಲ. ಬದಲಾಗಿ, ಪೊಲೀಸರೇ ರೇವಾ ನೆಲಸಿದ್ದ ಸ್ಥಳಕ್ಕೆ ತೆರಳಿ ಸಹಿ ಮಾಡಿಸಿಕೊಂಡು ಬರುತ್ತಿದ್ದರು ಎಂಬ ಗಂಭೀರ ಆರೋಪವಿದೆ. ಈ ಸಂಬಂಧ ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಅವರಿಗೆ ದೂರು ನೀಡಲಾಗಿತ್ತು.

'ಕೆಟ್ಟ ಆಡಳಿತ: ಬೀದಿಗಿಳಿದ ಜನ'

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಕಾಂಗ್ರೆಸ್ ಸರ್ಕಾರದ ಕೆಟ್ಟ ಆಡಳಿತದಿಂದಾಗಿ ರಾಜ್ಯದಲ್ಲಿ ವಿವಿಧ ಸಂಘ– ಸಂಸ್ಥೆಗಳು, ಸಮುದಾಯಗಳು ಸರ್ಕಾರದ ವಿರುದ್ಧ ಬೀದಿಗಿಳಿದು ಹೋರಾಟ ನಡೆಸುತ್ತಿವೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಟೀಕಿಸಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ಧಾರವಾಡದಲ್ಲಿ ಸರ್ಕಾರಿ ಉದ್ಯೋಗಾಕಾಂಕ್ಷಿಗಳಿಂದ ನೇಮಕಾತಿಗೆ ಆಗ್ರಹಿಸಿ ಪ್ರತಿಭಟನೆ, ಖಾಲಿ ಹುದ್ದೆ ಭರ್ತಿ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ಸರ್ಕಾರಿ ವೈದ್ಯರಿಂದ ಮಾರ್ಚ್ 11ರಿಂದ ಒಪಿಡಿ ಬಂದ್, ₹37 ಸಾವಿರ ಕೋಟಿ ಬಾಕಿ ಪಾವತಿಗೆ ಆಗ್ರಹಿಸಿ ಗುತ್ತಿಗೆದಾರರಿಂದ ಮಾ.6 ರಂದು ಕಾಮಗಾರಿ ಸ್ಥಗಿತಗೊಳಿಸಿ ಪ್ರತಿಭಟನೆ ನಡೆಯಲಿದೆ' ಎಂದಿದ್ದಾರೆ.

ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ವರ್ಗೀಕರಣದಲ್ಲಿ ಆಗಿರುವ ಅನ್ಯಾಯ ಸರಿಪಡಿಸುವಂತೆ ಬಂಜಾರ, ಭೋವಿ, ಕೊರಮ, ಕೊರಚ ಮತ್ತು ಅಲೆಮಾರಿ ಸಮುದಾಯಗಳ ಪ್ರತಿಭಟನೆ ನಡೆಯುತ್ತಿದೆ. ಒಳ ಮೀಸಲಾತಿಯಿಂದ ಆಗಿರುವ ಅನ್ಯಾಯ ವಿರುದ್ಧ ಎಸ್‌ಸಿ ಬಲಗೈ ಸಮುದಾಯದ ಪ್ರತಿಭಟನೆ ನಡೆಯುತ್ತಿದೆ ಎಂದಿದ್ದಾರೆ.

'ಬಿಡದಿ ಟೌನ್‌ಶಿಪ್ ಯೋಜನೆ, ಸೆಣಬು ಸಬ್ಸಿಡಿ ಬಂದ್, ಕಬ್ಬು ಬಿಲ್ ಬಾಕಿ ವಿರುದ್ಧ ರೈತರಿಂದ ಬೀದಿಗಿಳಿದು ಪ್ರತಿಭಟನೆ, ವೇತನ ಹೆಚ್ಚಳ ಸೇರಿ ವಿವಿಧ ಬೇಡಿಕೆಗೆ ಒತ್ತಾಯಿಸಿ ಫೆಬ್ರುವರಿ 27ರಿಂದ ಪ್ರತಿಭಟನೆ ಆರಂಭವಾಗುತ್ತದೆ. ಸಿದ್ದರಾಮಯ್ಯ ಅವರ ಭ್ರಷ್ಟ ಆಡಳಿತದಲ್ಲಿ ಒಬ್ಬರಾದರೂ ನೆಮ್ಮದಿಯಿಂದ ಇದ್ದಾರಾ? ಸರ್ಕಾರದ ಖಜಾನೆ ಖಾಲಿ ಆಗಿರುವುದಕ್ಕೆ ಬೇರೆ ಸಾಕ್ಷ್ಯ ಬೇಕೆ' ಎಂದು ಅವರು ಪ್ರಶ್ನಿಸಿದ್ದಾರೆ.



ಆರ್. ಅಶೋಕ

'ವಾಗ್ದಾನ ಮರೆತ ಸರ್ಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಧಿಕಾರಕ್ಕೆ ಬಂದ ಒಂದು ವರ್ಷದೊಳಗೆ ಎಲ್ಲ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ವಿಧಾನಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಭರವಸೆ ನೀಡಿದ್ದರು. ಈಗ ಎಲ್ಲವೂ ಅವರಿಗೆ ಮರೆತು ಹೋಗಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದ್ದಾರೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. 'ವಿಧಾನಸಭೆ ಚುನಾವಣೆ ವೇಳೆ ರಾಹುಲ್ ಗಾಂಧಿ ಬೆಳಗಾವಿಗೆ ಬಂದಾಗ 2.5 ಲಕ್ಷ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಹೇಳಿದ್ದರು. ಈಗ ಅವರು ಕೂಡ ಬಾಯಿ ಬಿಡುತ್ತಿಲ್ಲ. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಯವರಿಗೆ ಕುರ್ಚಿ ಕಾಳಗದಿಂದ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಮಯ ಸಿಗುತ್ತಿಲ್ಲ' ಎಂದರು.

'ಮುಖ್ಯಮಂತ್ರಿಯವರೇ ಯುವ ಜನರ ಪ್ರತಿಭಟನೆ ಪ್ರಾರಂಭವಾಗಿ ಎರಡು ವರ್ಷವಾಗಿದೆ. ಪ್ರತಿಭಟನೆ ಗಂಭೀರವಾಗಿ ಪರಿಗಣಿಸಿದ್ದೇವೆ ಎನ್ನಲು ನಿಮಗೆ ಎರಡು ವರ್ಷ ಬೇಕಾಯಿತೆ? ಯಾಕಿಷ್ಟು ದಿನ ನೀವು ಇದರ ಬಗ್ಗೆ ಚಕಾರ ಎತ್ತಿಲ್ಲ' ಎಂದೂ ಅವರು ಪ್ರಶ್ನಿಸಿದರು.



ಬಿ.ವೈ. ವಿಜಯೇಂದ್ರ

ಅಜೀಂ ಪ್ರೇಮ್‌ಜಿ ವಿ.ವಿಯ ನಾಮಫಲಕಕ್ಕೆ ಮಸಿ ಬಳಿದಿದ್ದ ಪ್ರಕರಣ

ಎಬಿವಿಪಿಯ 25 ಕಾರ್ಯಕರ್ತರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಜಾಪುರ ಸಮೀಪದ ಬೂರಗುಂಟೆ ಗ್ರಾಮದಲ್ಲಿ ಇರುವ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಆವರಣಕ್ಕೆ ನುಗ್ಗಿ ಗಲಾಟೆ ನಡೆಸಿ, ಭದ್ರತಾ ಸಿಬ್ಬಂದಿಯ ಮೇಲೆ ಹಲ್ಲೆ ನಡೆಸಿದ್ದ ಆರೋಪದಡಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ (ಎಬಿವಿಪಿ) 25 ಕಾರ್ಯಕರ್ತರ ವಿರುದ್ಧ ಸರ್ಜಾಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮಂಗಳವಾರ ಸಂಜೆ 5.40ರ ಸುಮಾರಿಗೆ 25 ಮಂದಿಯ ಗುಂಪು ವಿಶ್ವವಿದ್ಯಾಲಯದ ಆವರಣಕ್ಕೆ ನುಗ್ಗಿತ್ತು. ವಿಶ್ವವಿದ್ಯಾಲಯದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಅಕ್ರಮ ಪ್ರವೇಶ ಮಾಡಿದ್ದ ಪ್ರತಿಭಟನಕಾರರು, ಭದ್ರತಾ ಸಿಬ್ಬಂದಿ ಜಗದೀಶ್, ಚಂದನ್, ಚಿತ್ತರ ಬಹದ್ದೂರ್, ಶ್ರೀಪತಿ, ನರೇಶ್, ಹರೀಶ್ ಹಾಗೂ ವಿದ್ಯಾರ್ಥಿ ಮಹಮ್ಮದ್ ಅಲಿ ಅವರ ಮೇಲೆ ಹಲ್ಲೆ ನಡೆಸಿದ್ದರು. ಅಲ್ಲದೆ ವಿಶ್ವವಿದ್ಯಾಲಯದ ನಾಮಫಲಕಕ್ಕೂ ಮಸಿ ಬಳಿದು ಹಾನಿಗೊಳಿಸಲಾಗಿದೆ ಎಂಬ ದೂರಿನ ಮೇರೆಗೆ ಎಫ್‌ಐಆರ್ ದಾಖಲು ಮಾಡಲಾಗಿದೆ.

'ಕಾರ್ಯಕರ್ತರು ಗುಂಪು ಕಟ್ಟಿಕೊಂಡು ಬೆಂಗಳೂರಿನಿಂದ ಕಾಲೇಜು ಆವರಣಕ್ಕೆ ಬಂದಿದ್ದರು. ಕಾಲೇಜಿನಲ್ಲಿ ಸೈನಿಕರ ವಿರುದ್ಧ ಕಾರ್ಯಕ್ರಮ ಮಾಡುತ್ತಿದ್ದಾರೆ ಎಂದು ಸಾಮಾಜಿಕ ಜಾಲತಾಣದಲ್ಲಿ ಸುದ್ದಿಯೊಂದು ಹರಿದಾಡಿದ್ದರಿಂದ ಕಾರ್ಯಕರ್ತರು ಕಾಲೇಜು ಆವರಣಕ್ಕೆ ಬಂದು ಗಲಾಟೆ ಮಾಡಿದ್ದಾರೆ. ಕಾಲೇಜಿನಲ್ಲಿ ಅಂತಹ ಯಾವುದೇ ಕಾರ್ಯಕ್ರಮವನ್ನೂ ನಡೆಸಿಲ್ಲ. ಯಾವ ಸಂಘಟನೆಗೂ ವೇದಿಕೆ ಕಲ್ಪಿಸಿಲ್ಲ' ಎಂದು ಕಾಲೇಜಿನ ಸಿಬ್ಬಂದಿ ಎಸ್. ವಿಲ್ಸನ್ ಅವರು ನೀಡಿದ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಏನಿದು ಘಟನೆ?: ವಿಶ್ವವಿದ್ಯಾಲಯದ ಆವರಣಕ್ಕೆ ಮಂಗಳವಾರ ಸಂಜೆ ಎಬಿವಿಪಿ ಕಾರ್ಯಕರ್ತರು ಭಾರತ್ ಮಾತಾ ಕೀ ಜೈ ಎಂದು ಘೋಷಣೆಗಳನ್ನು ಕೂಗುತ್ತಾ ಒಳನುಗ್ಗಲು ಪ್ರಯತ್ನಿಸಿದ್ದರು. ವಿಶ್ವವಿದ್ಯಾಲಯದ ನಾಮಫಲಕಕ್ಕೆ ಮಸಿ ಬಳಿದು ಆಕ್ರೋಶ ವ್ಯಕ್ತಪಡಿಸಿದ್ದರು.

ಅಖಿಲ ಭಾರತೀಯ ವಿದ್ಯಾರ್ಥಿ ಸಂಘವು (ಎಐಎಸ್‌ಎ) ದೇಶವಿರೋಧಿ ಚಿಂತನೆಯ ಕಾರ್ಯಕ್ರಮ ನಡೆಸುತ್ತಿದೆ. ಆ ಕಾರ್ಯಕ್ರಮಗಳಿಗೆ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ವೇದಿಕೆ ಕಲ್ಪಿಸುತ್ತಿದೆ ಎಂದು ಪ್ರತಿಭಟನಕಾರರು ಆಕ್ರೋಶ ಹೊರಹಾಕಿದ್ದರು. ಮಾಹಿತಿ ತಿಳಿದು ಸ್ಥಳಕ್ಕೆ ಬಂದ ಪೊಲೀಸರು, ಪ್ರತಿಭಟನಕಾರರನ್ನು ಸಮಾಧಾನಪಡಿಸಲು ಯತ್ನಿಸಿದ್ದರೂ ಸಾಧ್ಯವಾಗಿರಲಿಲ್ಲ. ಬಳಿಕ ಪ್ರತಿಭಟನಕಾರರನ್ನು ವಶಕ್ಕೆ ಪಡೆದುಕೊಂಡಿದ್ದರು. ಸ್ಥಳದಲ್ಲಿ ಕೆಎಸ್‌ಆರ್‌ಪಿ ತುಕಡಿ ನಿಯೋಜಿಸಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲಾಗಿದೆ.

ದೇವೇಗೌಡ ಮತ್ತೆ ರಾಜ್ಯಸಭೆಗೆ?

ಜೂನ್‌ಗೆ ಅವಧಿ ಮುಕ್ತಾಯ • ರಾಜಕೀಯ ವಲಯದಲ್ಲಿ ಆರಂಭವಾದ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಸೇರಿ ನಾಲ್ವರು ರಾಜ್ಯಸಭಾ ಸದಸ್ಯರ ಅವಧಿ ಜೂನ್‌ನಲ್ಲಿ ಮುಗಿಯಲಿದ್ದು, ದೇವೇಗೌಡ ಮತ್ತೊಂದು ಅವಧಿಗೆ ರಾಜ್ಯಸಭೆಗೆ ಪ್ರವೇಶ ಪಡೆಯುವರೇ ಎಂಬ ಚರ್ಚೆ ರಾಜಕೀಯ ವಲಯದಲ್ಲಿ ಆರಂಭವಾಗಿದೆ.



ಎಚ್‌.ಡಿ. ದೇವೇಗೌಡ

ದೇವೇಗೌಡರಲ್ಲದೆ, ಕಾಂಗ್ರೆಸ್‌ನ ಎಂ.ಮಲ್ಲಿಕಾರ್ಜುನ ಖರ್ಗೆ, ಬಿಜೆಪಿಯ ನಾರಾಯಣ ಕೊರಗಪ್ಪ ಮತ್ತು ಈರಣ್ಣ ಕಡಾಡಿ ಅವರ ಅವಧಿ ಜೂನ್ 25ಕ್ಕೆ ಮುಗಿಯಲಿದೆ.

ವಿಧಾನಸಭೆಯಲ್ಲಿ ಶಾಸಕರ ಸಂಖ್ಯಾ ಬಲದ ಪ್ರಕಾರ ತೆರವಾಗುವ ನಾಲ್ಕು ಸ್ಥಾನಗಳಲ್ಲಿ 3 ಸ್ಥಾನಗಳು ಕಾಂಗ್ರೆಸ್‌ಗೆ ಸಿಗಲಿವೆ. ಬಿಜೆಪಿಗೆ ಒಂದು ಸ್ಥಾನ ಸಿಗುವ ಸಾಧ್ಯತೆ ಇದೆ.

93ರ ಇಳಿ ವಯಸ್ಸಿನ ದೇವೇಗೌಡರು ಮತ್ತೊಂದು ಅವಧಿಗೆ ರಾಜ್ಯಸಭೆ ಪ್ರವೇಶಿಸಲು ಉತ್ಸುಕರಾಗಿದ್ದಾರೆ. ಆದರೆ, ಅವರ ಪಕ್ಷಕ್ಕೆ ಸಂಖ್ಯಾ ಬಲ ಇಲ್ಲದ ಕಾರಣ, ಬಿಜೆಪಿ ಸಹಾಯಹಸ್ತ ಚಾಚಿದರೆ ರಾಜ್ಯಸಭೆ ಪ್ರವೇಶಿಸಬಹುದು ಎಂಬ ಲೆಕ್ಕಾಚಾರ ಜೆಡಿಎಸ್ ವರಿಷ್ಠರದ್ದು.

ಈ ಕುರಿತು ದೇವೇಗೌಡರು ಆಸಕ್ತಿ ಹೊಂದಿರುವುದನ್ನು ಬಿಜೆಪಿಯ ರಾಜ್ಯ ಮುಖಂಡರೊಬ್ಬರು ಖಚಿತಪಡಿಸಿದ್ದಾರೆ.

ದೇವೇಗೌಡರು ತಮ್ಮ ರಾಜಕೀಯ ಜೀವನದ ಉದ್ದಕ್ಕೂ ರೈತರ ಹಿತಕ್ಕಾಗಿ ಹೋರಾಟ ಮಾಡಿಕೊಂಡು ಬಂದಿದ್ದಾರೆ ಎಂಬ ಕಾರಣಕ್ಕೆ ಪ್ರಧಾನಿ ನರೇಂದ್ರ ಮೋದಿಯವರ ವಿಶ್ವಾಸಕ್ಕೂ ಅವರು ಪಾತ್ರರಾಗಿದ್ದಾರೆ.

ಪಕ್ಷಗಳ ಬಲಾಬಲ	
ಕಾಂಗ್ರೆಸ್	134
ಬಿಜೆಪಿ	63
ಬಿಜೆಪಿ ಉಚ್ಚಾಟಿತ ಶಾಸಕರು	3
ಜೆಡಿಎಸ್	18
ಸರ್ವೋದಯ ಕರ್ನಾಟಕ ಪಕ್ಷ	1
ಪಕ್ಷೇತರ	2
ಸಭಾಧ್ಯಕ್ಷರು	1
ತೆರವಾಗಿರುವ ಕ್ಷೇತ್ರಗಳು	2

ಒಬ್ಬ ಅಭ್ಯರ್ಥಿಯ ಆಯ್ಕೆ **45** ಮತಗಳು ಬೇಕಾಗುತ್ತವೆ. ಕಾಂಗ್ರೆಸ್ **3** ಸ್ಥಾನಗಳನ್ನು ಸುಲಭವಾಗಿ ಗೆಲ್ಲಬಹುದಾಗಿದೆ.

ದೇವೇಗೌಡರು ರಾಜ್ಯಸಭೆಯಲ್ಲಿದ್ದರೆ ರಾಜಕೀಯವಾಗಿಯೂ ಸಕ್ರಿಯರಾಗಿರುತ್ತಾರೆ ಮತ್ತು ಮುಂದಿನ ವಿಧಾನಸಭೆ ಚುನಾವಣೆಯಲ್ಲೂ ಎನ್‌ಡಿಎ ಪರವಾಗಿ ಪ್ರಚಾರ ಮಾಡುವ ಸಾಧ್ಯತೆ ಇದೆ. ಇದರಿಂದ ಬಿಜೆಪಿ– ಜೆಡಿಎಸ್ ಎರಡಕ್ಕೂ ಅನುಕೂಲ ಆಗುತ್ತದೆ ಎಂಬ ಚರ್ಚೆ ಜೆಡಿಎಸ್‌ನಲ್ಲಿದೆ.

ಬಿಜೆಪಿ ತನ್ನ ಪಾಲಿನ ರಾಜ್ಯಸಭೆ ಸೀಟು ದೇವೇಗೌಡರಿಗೆ ಬಿಟ್ಟುಕೊಟ್ಟರೆ ಮುಂದಿನ ವಿಧಾನಸಭೆ ಚುನಾವಣೆ ವೇಳೆ ಹೆಚ್ಚಿನ ಕ್ಷೇತ್ರಗಳಿಗೆ ಬಿಜೆಪಿ ಜತೆ ಚೌಕಾಸಿ ನಡೆಸಲು ಕಷ್ಟವಾಗಬಹುದು ಎಂಬ ಕಳವಳ ಜೆಡಿಎಸ್‌ಗಿದೆ. ದೇವೇಗೌಡರು ಹಿಂದಕ್ಕೆ ಸರಿದರೆ ಹೆಚ್ಚಿನ ಸೀಟುಗಳಿಗೆ ಒತ್ತಡ ಹೇರಲು ಸಾಧ್ಯ ಎಂಬ ವಾದವೂ ಜೆಡಿಎಸ್‌ನಲ್ಲಿದೆ ಎಂದು ಮೂಲಗಳು ಹೇಳಿವೆ.

ದೇವೇಗೌಡರಿಗೆ ಮತ್ತೊಂದು ಅವಕಾಶ ನೀಡಲು ಬಿಜೆಪಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರ ಒಪ್ಪಿಗೆಯೇ ಅಂತಿಮವಾಗುತ್ತದೆ. ಈ ವಿಚಾರದಲ್ಲಿ ರಾಜ್ಯ ಬಿಜೆಪಿ ನಾಯಕರ ಪಾತ್ರ ಕಡಿಮೆ. ಗೌಡರಿಗೆ ಅವಕಾಶ ನೀಡಲು ಮೋದಿಯವರು ಒಲವು ಹೊಂದಿದ್ದಾರೆ ಎಂದು ಹೇಳಲಾಗಿದೆ. ಅಲ್ಲದೇ, ರಾಜ್ಯಸಭೆಯಲ್ಲಿ ಇತ್ತೀಚಿನ ಎಲ್ಲ ಕಲಾಪಗಳಲ್ಲಿ ದೇವೇಗೌಡರು ಸಕ್ರಿಯವಾಗಿ ಭಾಗವಹಿಸಿದ್ದರು. ಮೋದಿ ಅವರನ್ನು ಹಲವು ಬಾರಿ ಮುಕ್ತ ಕಂಠದಿಂದ ಶ್ಲಾಘನೆ ಮಾಡಿದ್ದಾರೆ. ದೇವೇಗೌಡರು ಇತ್ತೀಚೆಗೆ ಮೋದಿ ಅವರನ್ನು ಭೇಟಿ ಮಾಡಿ ಚರ್ಚೆಯನ್ನೂ ನಡೆಸಿದ್ದಾರೆ.

ಅಲ್ಲದೇ, ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಇತ್ತೀಚೆಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರನ್ನು ಭೇಟಿ ಮಾಡಿ ಹಲವು ವಿಷಯಗಳ ಕುರಿತು ಚರ್ಚಿಸಿದ್ದಾರೆ. ಆ ಸಭೆಯಲ್ಲಿ ರಾಜ್ಯಸಭೆ ಚುನಾವಣೆ ವಿಚಾರವನ್ನೂ ಪ್ರಸ್ತಾಪಿಸಿರುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ದೇವೇಗೌಡರನ್ನು ಮತ್ತೊಮ್ಮೆ ರಾಜ್ಯಸಭೆಗೆ ಆಯ್ಕೆ ಮಾಡಿದರೆ ರಾಜ್ಯದಲ್ಲಿ ಒಕ್ಕಲಿಗ ಸಮುದಾಯದ ವಿಶ್ವಾಸಗಳಿಸಲು ಸಾಧ್ಯವಾಗುತ್ತದೆ. ಇದರಿಂದ ಹಳೇ ಮೈಸೂರು ಭಾಗದ ಒಕ್ಕಲಿಗ ಪ್ರಾಬಲ್ಯದ ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ–ಜೆಡಿಎಸ್‌ಗೆ ಅನುಕೂಲ ಆಗಬಹುದು ಎಂಬ ಅಭಿಪ್ರಾಯ ಬಿಜೆಪಿ ವರಿಷ್ಠರದು.

ಮಾರಿಕಾಂಬಾ ರಥೋತ್ಸವ

ಚಿತ್ರ: ಇಂದ್ರಕುಮಾರ ಬಿ. ದಸ್ತೇನವರ



ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಮಾರಿಕಾಂಬಾ ದೇವಿ ರಥೋತ್ಸವ ಅಪಾರ ಭಕ್ತರ ಹರ್ಷೋದ್ಗಾರದ ನಡುವೆ ಬುಧವಾರ ವಿಜೃಂಭಣೆಯಿಂದ ಜರುಗಿತು

ಜೋಶಿ ವಿರುದ್ಧದ ಕ್ರಮಕ್ಕೆ ತಡೆ

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ (ಕಸಾಪ) ನಡೆದಿವೆ ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿದಂತೆ ಮಾಜಿ ಅಧ್ಯಕ್ಷ ಮಹೇಶ್ ಜೋಶಿ ವಿರುದ್ಧ ತಳೆಯುವ ಯಾವುದೇ ನಿಲುವನ್ನು ಮುಂದಿನ ವಿಚಾರಣೆವರೆಗೆ ಜಾರಿಗೊಳಿಸಬಾರದು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ತಾತ್ಪೂರ್ತಿಕ ನಿರ್ದೇಶನ ನೀಡಿದೆ.



ಮಹೇಶ್ ಜೋಶಿ

ಪರಿಷತ್‌ನಲ್ಲಿನ ಅಕ್ರಮಗಳಿಗೆ ಸಂಬಂಧಿಸಿದಂತೆ ಆಡಳಿತಾಧಿಕಾರಿ ಜಾರಿ ಮಾಡಿರುವ ಷೋಕಾಸ್ ನೋಟಿಸ್ ಪ್ರಶ್ನಿಸಿ ಮಹೇಶ್ ಜೋಶಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಬಿ.ಎಂ. ಶ್ಯಾಮ್ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಾದ– ಪ್ರತಿವಾದ ಆಲಿಸಿದ ನ್ಯಾಯಪೀಠ, 'ಮೇಲ್ನೋಟಕ್ಕೆ, ಆಡಳಿತಾಧಿಕಾರಿ ಷೋಕಾಸ್ ನೋಟಿಸ್ ನೀಡುವ ಅಧಿಕಾರ ವ್ಯಾಪ್ತಿ ಹೊಂದಿರು ವುದನ್ನು ಸಮರ್ಥನೆ ಮಾಡಿಕೊಂಡಿ ದ್ದಾರೆಯೇ ಎಂಬ ಪ್ರಶ್ನೆ ಇದೆ. ಹಾಗಾಗಿ, ಪಕ್ಷಗಾರರ ವಾದ ಆಲಿಸಿದ ನಂತರ ಇದನ್ನು ನಿರ್ಧರಿಸಲಾಗುವುದು' ಎಂದು ತಿಳಿಸಿತು.

'ಮಹೇಶ್ ಜೋಶಿ ಷೋಕಾಸ್ ನೋಟಿಸ್‌ಗೆ ಉತ್ತರಿಸಬೇಕಿದೆ. ಈಗಾಗಲೇ ಪ್ರತಿಕ್ರಿಯೆ ಸಲ್ಲಿಸುವ ಕಾಲಾವಧಿ ಮುಗಿದಿದ್ದರೂ ಜೋಶಿ ಅವರಿಗೆ ಸಕಾರಣ ಸಮಯಾವಕಾಶ ನೀಡಬೇಕಿದೆ. ಆದ್ದರಿಂದ, ಮಾರ್ಚ್ 2ರ ಒಳಗೆ ಜೋಶಿ ನೋಟಿಸ್‌ಗೆ ಉತ್ತರಿಸಬೇಕು' ಎಂದು ನ್ಯಾಯಪೀಠ ತಾಕೀತು ಮಾಡಿದೆ.

ಅಂತೆಯೇ, 'ಜೋಶಿ ವಿರುದ್ಧ ಕೈಗೊಳ್ಳುವ ಕ್ರಮವನ್ನು ಮುಂದಿನ ವಿಚಾರಣೆವರೆಗೆ ಜಾರಿಗೊಳಿಸಕೂಡದು' ಎಂದು ಸರ್ಕಾರಕ್ಕೆ ನಿರ್ದೇಶಿಸಿದೆ.

ಮಹೇಶ್ ಜೋಶಿ ಪರ ಪದಾಂಕಿತ ಹಿರಿಯ ವಕೀಲ ಜಯಕುಮಾರ್ ಎಸ್‌.ಪಾಟೀಲ್ ಮತ್ತು ಸರ್ಕಾರದ ಪರ ಪದಾಂಕಿತ ಹಿರಿಯ ವಕೀಲ ರವಿವರ್ಮ ಕುಮಾರ್ ವಾದ ಮಂಡಿಸಿದರು.

ಗಾಂಜಾ ಜಪ್ತಿ

ದೇವನಹಳ್ಳಿ: ಬ್ಯಾಂಕಾಕ್‌ನಿಂದ ಬಂದ ಇಬ್ಬರು ಪ್ರಯಾಣಿಕರಿಂದ ಒಟ್ಟು ₹6.51 ಕೋಟಿ ಮೌಲ್ಯದ ಹೈಡ್ರೋಪೋನಿಕ್ ಗಾಂಜಾವನ್ನು ಬೆಂಗಳೂರು ಕಸ್ಟಮ್ಸ್ ಅಧಿಕಾರಿಗಳು ಬುಧವಾರ ವಶಕ್ಕೆ ಪಡೆದಿದ್ದಾರೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ (ಕೆಐಎ) ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಈ ಜಪ್ತಿ ನಡೆದಿದೆ.

ಮೊದಲ ಪ್ರಕರಣದಲ್ಲಿ ಪ್ರಯಾಣಿಕನ ಚೆಕ್‌-ಇನ್ ಲಗೇಜ್ ಪರಿಶೀಲಿಸಿದಾಗ 5.55 ಕೆ.ಜಿ ತೂಕದ ಹೈಡ್ರೋಪೋನಿಕ್ ಗಾಂಜಾವನ್ನು ಮುಚ್ಚಿಟ್ಟು ಕಳ್ಳಸಾಗಣೆ ಮಾಡಲು ಯತ್ನಿಸಿರುವುದು ಪತ್ತೆಯಾಯಿತು.

ಇನ್ನೊಂದು ಪ್ರಕರಣದಲ್ಲಿ ಲಗೇಜ್ ಬ್ಯಾಗ್‌ನೊಳಗೆ ಪದರ ಪದರವಾಗಿ ಅಂಟಿಸಿ ಸುಲಭವಾಗಿ ಗುರುತಿಸಲು ಆಗದಂತೆ 13.06 ಕೆ.ಜಿ ತೂಕದ ಗಾಂಜಾವನ್ನು ಅಡಗಿಸಿಡಲಾಗಿತ್ತು. ಪರಿಶೀಲನೆ ವೇಳೆ ₹4.57 ಕೋಟಿ ಮೌಲ್ಯದ ಮಾದಕ ವಸ್ತು ಜಪ್ತಿಯಾಗಿದೆ.

ಆದಿಮ ಕಲಾ ರತ್ನ ರಾಷ್ಟ್ರೀಯ ಪ್ರಶಸ್ತಿಗೆ ರವೀಂದ್ರ ಆಯ್ಕೆ

ಉಡುಪಿ: ಆದಿಮ ಕಲಾ ಟ್ರಸ್ಟ್ ಉಡುಪಿ ತನ್ನ ವಾರ್ಷಿಕೋತ್ಸವದ ನೆನಪಿಗಾಗಿ ನೀಡುವ ಆದಿಮ ಕಲಾ ರತ್ನ ರಾಷ್ಟ್ರೀಯ ಪ್ರಶಸ್ತಿಗೆ ಭಾರತೀಯ ಪುರಾತತ್ತ್ವ ವಿದ್ವಾಂಸ ರವೀಂದ್ರ ಕೋರಿಶೆಟ್ಟರ್ ಅವರನ್ನು ಆಯ್ಕೆ ಮಾಡಲಾಗಿದೆ.



ರವೀಂದ್ರ ಕೋರಿಶೆಟ್ಟರ್

ಪ್ರಶಸ್ತಿ ₹25 ಸಾವಿರ ನಗದು ಒಳಗೊಂಡಿದೆ ಎಂದು ಟ್ರಸ್ಟ್‌ನ ಸ್ಥಾಪಕ ಸಂಚಾಲಕ ಪ್ರೊ. ಟಿ.ಮುರುಗೇಶಿ ತಿಳಿಸಿದ್ದಾರೆ.

ಕಬ್ಬು ಬೆಳೆಗಾರರಿಗೆ ₹300 ಕೋಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ 2025-26ನೇ ಸಾಲಿನಲ್ಲಿ ಕಬ್ಬು ಪೂರೈಕೆ ಮಾಡಿದ ರಾಜ್ಯದ ರೈತರಿಗೆ ಪ್ರತಿ ಟನ್‌ಗೆ ₹50ರಂತೆ ಆರ್ಥಿಕ ನೆರವು ನೀಡಲು ₹300 ಕೋಟಿ ಬಿಡುಗಡೆ ಮಾಡಲಾಗಿದೆ' ಎಂದು ಕಬ್ಬು ಅಭಿವೃದ್ಧಿ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ನ.8ರಂದು ಮುಖ್ಯಮಂತ್ರಿ ನೇತೃತ್ವದಲ್ಲಿ ನಡೆದ ಸಕ್ಕರೆ ಕಾರ್ಖಾನೆಗಳ ಮಾಲೀಕರು ಹಾಗೂ ಕಬ್ಬು ಬೆಳೆಗಾರರ ಸಭೆಯಲ್ಲಿ ಪ್ರತಿ ಟನ್ ಕಬ್ಬಿಗೆ ಎಫ್‌ಆರ್‌ಪಿ ಮೇಲೆ ₹100 ಆರ್ಥಿಕ ನೆರವು ನೀಡಲು ತೀರ್ಮಾನಿಸಲಾಗಿತ್ತು. ಈ ಮೊತ್ತದಲ್ಲಿ ತಲಾ ₹50ರಂತೆ ರಾಜ್ಯ ಸರ್ಕಾರ ಮತ್ತು



ಕಬ್ಬು ನುರಿಸುವಿಕೆ ಮಾರ್ಚ್ ಮೊದಲ ವಾರದ ವೇಳೆಗೆ ಅಂತ್ಯವಾಗಲಿದ್ದು, 600 ಲಕ್ಷ ಟನ್ ನುರಿಸುವ ಅಂದಾಜು ಆಧರಿಸಿ ₹ 300 ಕೋಟಿ ಬಿಡುಗಡೆ ಮಾಡಲಾಗಿದೆ

ಶಿವಾನಂದ ಪಾಟೀಲ, ಕಬ್ಬು ಅಭಿವೃದ್ಧಿ ಸಚಿವ

81 ಪ್ರಸಕ್ತ ಸಾಲಿನಲ್ಲಿ ಕಬ್ಬು ನುರಿಸಿದ ಸಕ್ಕರೆ ಕಾರ್ಖಾನೆಗಳು

29 ಕಬ್ಬು ನುರಿಸುವಿಕೆ ಮುಕ್ತಾಯಗೊಳಿಸಿದ ಕಾರ್ಖಾನೆಗಳು

521 ಲಕ್ಷ ಟನ್ ಈವರೆಗೆ ನುರಿಸಿದ ಕಬ್ಬು

600 ಲಕ್ಷ ಟನ್ ನುರಿಸಬಹುದಾದ ಅಂದಾಜು ಕಬ್ಬು ಪ್ರಮಾಣ

ಸಕ್ಕರೆ ಕಾರ್ಖಾನೆಗಳು ನೀಡಬೇಕೆಂದು ತೀರ್ಮಾನ ಕೈಗೊಳ್ಳಲಾಗಿತ್ತು. ಈ ನಿರ್ಧಾರದಂತೆ ರಾಜ್ಯ ಸರ್ಕಾರ ತನ್ನ ಪಾಲಿನ ಆರ್ಥಿಕ ನೆರವಿನ ಹಣ ಬಿಡುಗಡೆ ಮಾಡಿದೆ' ಎಂದು ಸಚಿವರು ಹೇಳಿದ್ದಾರೆ.

'ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಪೂರೈಕೆ ಮಾಡಿದ ಕಬ್ಬಿನ ಪ್ರಮಾಣ ಆಧರಿಸಿ ಕಬ್ಬು ಬೆಳೆಗಾರರ ಬ್ಯಾಂಕ್ ಖಾತೆಗೆ ನೇರವಾಗಿ ಪ್ರತಿ ಟನ್‌ಗೆ ₹50 ರಂತೆ ಜಮಾ ಮಾಡಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಅಲ್ಲದೆ, ಸಕ್ಕರೆ ಕಾರ್ಖಾನೆಗಳು ಪ್ರತಿ ಟನ್ ಕಬ್ಬಿಗೆ ₹50 ಆರ್ಥಿಕ ನೆರವು ನೀಡಲು ಕ್ರಮ ಕೈಗೊಳ್ಳಬೇಕೆಂದು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ' ಎಂದು ತಿಳಿಸಿದ್ದಾರೆ.

ಯುವಕನ ದುಂಡಾವರ್ತನೆ

ದಾವಣಗೆರೆ: ಪ್ರಾಣಿ ಕಳೇಬರದ ತುಂಡು ಹಿಡಿದಿದ್ದ ವ್ಯಕ್ತಿಯೊಬ್ಬ ದುರ್ಗಮ್ಮನ ಜಾತ್ರೆಗೆ ಬಂದಿದ್ದ ಜನರ ಮೇಲೆ ಏಕಾಏಕಿ ದಾಳಿ ನಡೆಸಿ ನೂಕುನುಗ್ಗಲಿಗೆ ಕಾರಣವಾಗಿರುವ ಘಟನೆ ಇಲ್ಲಿನ ಬಸವರಾಜಪೇಟೆಯಲ್ಲಿ ಬುಧವಾರ ನಸುಕಿನಲ್ಲಿ ನಡೆದಿದೆ. ಈ ಕುರಿತ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ದಾಳಿಯಿಂದ ತಪ್ಪಿಸಿಕೊಳ್ಳುವ ಭರದಲ್ಲಿ ಜನರು ಚೆಲ್ಲಾಪಿಲ್ಲಿಯಾಗಿದ್ದರಿಂದ ನೂಕುನುಗ್ಗಲು ಉಂಟಾಗಿದೆ. ಅನೇಕರು ಭಯದಿಂದ ಕೆಳಗೆ ಬಿದ್ದು ತೀವ್ರ ಸಮಸ್ಯೆ ಎದುರಿಸಿದ್ದಾರೆ. ದುರ್ಗಾಂಬಿಕಾ ದೇವಿ ಜಾತ್ರಾ ಮಹೋತ್ಸವದ ದಿನ ಜನರಲ್ಲಿ ಭೀತಿ ಉಂಟುಮಾಡಿದ ವ್ಯಕ್ತಿಯ ಪತ್ತೆಗೆ ಪೊಲೀಸರು ಮುಂದಾಗಿದ್ದಾರೆ.

ಪ್ರಾಣಿಯ ರಕ್ತಸಿಕ್ತ ಕಾಲನ್ನು ಆಯುಧದ ರೀತಿಯಲ್ಲಿ ಹಿಡಿದು ವ್ಯಕ್ತಿ ಜನರತ್ತ ನುಗ್ಗಿದ್ದಾನೆ. ದಿಕ್ಕಾಪಾಲಾಗಿ ಓಡುವಾಗ ಕೆಲವರು ಕೆಳಗೆ ಬಿದ್ದಿರುವುದು ವಿಡಿಯೊದಲ್ಲಿದೆ.

'ವಿಡಿಯೊ ಪರಿಶೀಲಿಸಲಾಗುತ್ತಿದೆ. ಮದ್ಯ ಸೇವಿಸಿದ್ದ ಯುವಕ ದುಂಡಾವರ್ತನೆ ತೋರಿದ್ದು ಪತ್ತೆಗೆ ಕ್ರಮ ವಹಿಸಲಾಗುತ್ತಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಎಚ್‌.ಟಿ. ಶೇಖರ್ ತಿಳಿಸಿದ್ದಾರೆ.

ಕಾಲಮಿತಿಯಲ್ಲಿ ಹುದ್ದೆ ಭರ್ತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಹೇಳಿದ್ದಾರೆ. ಬಾಯಿಮಾತಿಗೆ ಹೇಳುವುದನ್ನು ಬಿಟ್ಟು, ಕಾಲಮಿತಿ ಹಾಕಿಕೊಂಡು ಕಾರ್ಯೋನ್ಮುಖರಾಗಬೇಕು' ಎಂದು ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘಟನೆ (ಅಕ್ಸಾ) ಅಧ್ಯಕ್ಷ ಕಾಂತಕುಮಾರ್ ಒತ್ತಾಯಿಸಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, '56 ಸಾವಿರ ಹುದ್ದೆಗಳ ಶೀಘ್ರ ಭರ್ತಿಗೆ ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳಬೇಕು. ನಿರ್ಲಕ್ಷಿಸಿದರೆ ಹೋರಾಟ ತೀವ್ರಗೊಳಿಸಲಾಗುವುದು' ಎಂದರು.

'ಮುಂದೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಬರಲಿದ್ದು, ಅದಕ್ಕಿಂತ ಪೂರ್ವದಲ್ಲೇ ಅಧಿಸೂಚನೆ ಹೊರಡಿಸಬೇಕು. ಕಾಲಹರಣ ಮಾಡಿದರೆ ಉದ್ಯೋಗಾಕಾಂಕ್ಷಿಗಳಿಗೆ ನಷ್ಟ ಉಂಟಾಗಲಿದೆ' ಎಂದು ತಿಳಿಸಿದರು.

'ಹೋರಾಟದ ಭಾಗವಾಗಿ ಧಾರವಾಡದಿಂದ ಬೆಂಗಳೂರಿಗೆ ಪಾದಯಾತ್ರೆ ಹಮ್ಮಿಕೊಂಡು, ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಲಾಗುವುದು. ವಿದ್ಯಾರ್ಥಿಗಳು, ಪೋಷಕರು, ವಕೀಲರು ಸೇರಿದಂತೆ ವಿವಿಧ ಕ್ಷೇತ್ರದವರ ಬೆಂಬಲ ಪಡೆದುಕೊಳ್ಳಲಾಗುವುದು' ಎಂದು ಹೇಳಿದರು.

ಪ್ರತಿಭಟನೆಯನ್ನು ಪೂರ್ಣವಾಗಿ ಐದು ಡ್ರೋನ್, 20ಕ್ಕೂ ಹೆಚ್ಚು ಖಾಸಗಿ ವಿಡಿಯೊಗ್ರಾಫರ್‌ಗಳ ಮೂಲಕ ಚಿತ್ರೀಕರಿಸಲಾಗಿದೆ. ಕಾನೂನು ಉಲ್ಲಂಘನೆ ಪ್ರಕರಣ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು

ಎನ್‌.ಶಶಿಕುಮಾರ್, ಹುಬ್ಬಳ್ಳಿ–ಧಾರವಾಡ ಮಹಾನಗರ ಪೊಲೀಸ್ ಕಮಿಷನರ್

ಕಾಂಗ್ರೆಸ್ ಸರ್ಕಾರದ ಕೆಟ್ಟ, ಕೊಳಕು ಆಡಳಿತದಿಂದ ಉದ್ಯೋಗಾಕಾಂಕ್ಷಿಗಳು ಸೇರಿದಂತೆ ಸಮಾಜದ ಪ್ರತಿ ವರ್ಗ ಬೀದಿಗಿಳಿದು ಹೋರಾಟ ನಡೆಸುತ್ತಿದೆ. 'ಅರಾಜಕತೆ ಗ್ಯಾರಂಟಿ' ಕಾಂಗ್ರೆಸ್ ಸರ್ಕಾರದ 6ನೇ ಗ್ಯಾರಂಟಿಯಾಗಿದೆ

ಆರ್‌. ಅಶೋಕ, ವಿಧಾನಸಭೆ ವಿರೋಧಪಕ್ಷದ ನಾಯಕ

'ಕಾಂಗ್ರೆಸ್ ಅಧಿಕಾರಕ್ಕೆ ಬಂದು ಮೂರು ವರ್ಷಗಳಾದರೂ ನೇಮಕಾತಿ ಮಾಡಿಕೊಳ್ಳಲು ಹೊಸದಾಗಿ ಒಂದೂ ಅಧಿಸೂಚನೆ ಹೊರಡಿಸಿಲ್ಲ. ಈ ವಿಚಾರವಾಗಿ ಹೋರಾಟ ಮಾಡಲು ಮುಂದಾದಾಗಲೆಲ್ಲ ಪೊಲೀಸರನ್ನು ಮುಂದೆ ಬಿಟ್ಟು ನಮ್ಮನ್ನು ಹತ್ತಿಕ್ಕಲಾಗುತ್ತಿತ್ತು' ಎಂದರು.

'ಹತಾಶೆಯಲ್ಲಿ ಯುವಜನರು': 'ಉದ್ಯೋಗ ಸಿಗದೆ ಯುವಜನರು ಹತಾಶರಾಗಿದ್ದಾರೆ. ಜವಾಬ್ದಾರಿಯುತ ವಿರೋಧ ಪಕ್ಷವಾಗಿ ಹೋರಾಟಕ್ಕೆ ನಾವು ಬೆಂಬಲ ನೀಡಿದ್ದೇವೆ. ವಿಧಾನಸೌಧದಲ್ಲೂ ಧ್ವನಿ ಎತ್ತುತ್ತೇವೆ' ಎಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ತಿಳಿಸಿದರು.

ವಿದ್ಯಾರ್ಥಿ ಒಕ್ಕೂಟದಿಂದ ವಿವಿಧೆಡೆ ಹೋರಾಟ ನಡೆದಿದೆ. ಆದರೆ, ರಾಜ್ಯ ಸರ್ಕಾರವು ಕುಂಭಕರ್ಣ ನಿದ್ರೆಯಲ್ಲಿದೆ. ಸರ್ಕಾರ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡದಿದ್ದರೆ ಬಿಜೆಪಿಯಿಂದಲೇ ಹೋರಾಟ ಹಮ್ಮಿಕೊಳ್ಳಲಾಗುವುದು

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

'ಆರ್ಥಿಕ ಇಲಾಖೆಯು 55 ಸಾವಿರ ಹುದ್ದೆಗಳ ಭರ್ತಿಗೆ ಅನುಮತಿ ನೀಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಳಿಯೇ ಈ ಇಲಾಖೆ ಇರುವುದರಿಂದ ಅವರು ಇನ್ನುಳಿದ 2.3 ಲಕ್ಷ ಹುದ್ದೆ ಭರ್ತಿಗೂ ಅನುಮತಿ ಪಡೆದು ಖಾಲಿ ಇರುವ ಎಲ್ಲ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಿ' ಎಂದು ಒತ್ತಾಯಿಸಿದರು.

ಸಿ.ಎಂ ಕೇಳಿದರೆ ಕೊಡುತ್ತೇವೆ: ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್‌.ಮಂಜುನಾಥ್

'ಕಮಿಷನ್: ಶಾಸಕರ ಪಟ್ಟಿ ಕೊಡಲು ಸಿದ್ಧ'

ಪ್ರಜಾವಾಣಿ ವಾರ್ತೆ

ಕೋಲಾರ: 'ಪರ್ಸೆಂಟೇಜ್‌ಗಾಗಿ ಗುತ್ತಿಗೆದಾರರ ಮೇಲೆ ಒತ್ತಡ ಹೇರುವ ಶಾಸಕರು ಮೂರೂ ಪಕ್ಷಗಳಲ್ಲಿ ಇದ್ದಾರೆ. ಮುಖ್ಯಮಂತ್ರಿ ಕೇಳಿದರೆ ಅವರ ಪಟ್ಟಿ ಕೊಡುತ್ತೇವೆ' ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್‌. ಮಂಜುನಾಥ್ ಇಲ್ಲಿ ಹೇಳಿದರು.

'ಕೆಲವೆಡೆ ಶಾಸಕರೇ ಗುತ್ತಿಗೆದಾರರಾಗಿರುವ ವಿಚಾರವೂ ನಮಗೆ ಗೊತ್ತಿದೆ. ಅದನ್ನೂ ಬಹಿರಂಗಪಡಿಸುತ್ತೇವೆ. ಕಮಿಷನ್ ಕೇಳಿ ಲಕ್ಷ್ಮೇಶ್ವರ ಶಾಸಕ ಲೋಕಾಯುಕ್ತ ಬಲೆಗೆ ಬಿದ್ದಂತೆ ಎಲ್ಲಾ ಜಿಲ್ಲೆಗಳಲ್ಲಿ ಒಬ್ಬರು, ಇಬ್ಬರು ಶಾಸಕರು ಸಿಗುತ್ತಾರೆ' ಎಂದು ಬುಧವಾರ ಪತ್ರಿಕಾ ಗೋಷ್ಠಿಯಲ್ಲಿ ಹೇಳಿದರು.



ಸಂಘದ ಅಧ್ಯಕ್ಷ ಆರ್‌.ಮಂಜುನಾಥ್, ಗೌರವಾಧ್ಯಕ್ಷ ಕೃಷ್ಣಾರೆಡ್ಡಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು

'ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡಲು ಕೆಲ ಇಲಾಖೆಗಳಲ್ಲಿ ಹಿಂದಿನ ಸರ್ಕಾರಕ್ಕಿಂತ ಮೂರು ಪಟ್ಟು ಕಮಿಷನ್ ಕೇಳುತ್ತಾರೆ. ಯಾವ ಯಾವ ಇಲಾಖೆಯಲ್ಲಿ ಎಷ್ಟು ಪರ್ಸೆಂಟೇಜ್ ಕೇಳುತ್ತಾರೆ ಎಂಬುದನ್ನು ಶೀಘ್ರ ಬಹಿರಂಗಪಡಿಸುತ್ತೇವೆ' ಎಂದು ಹೇಳಿದರು.

ರಾಜಕೀಯ ಬೇಳೆ ಬೇಯಿಸಿಕೊಳ್ಳಲು ವಿರೋಧ ಪಕ್ಷದ ನಾಯಕರು ಶೇ 80 ಕಮಿಷನ್ ಎಂಬ ಆರೋಪ ಮಾಡುತ್ತಾರೆ. 80 ಪರ್ಸೆಂಟೇಜ್ ಲಂಚ ಎಲ್ಲಾದರೂ ಸಾಧ್ಯವೇ?

ಆರ್‌.ಮಂಜುನಾಥ್, ಅಧ್ಯಕ್ಷ, ರಾಜ್ಯ ಗುತ್ತಿಗೆದಾರರ ಸಂಘ

ರಾಜ್ಯದಲ್ಲಿ ಒಂದೂವರೆ ಲಕ್ಷ ಗುತ್ತಿಗೆದಾರರು ಇದ್ದು, ಮೂರು ವರ್ಷಗಳಿಂದ ₹37 ಸಾವಿರ ಕೋಟಿ ಬಾಕಿ ಇದೆ. ಮಾರ್ಚ್ 6ರಂದು ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸುತ್ತೇವೆ. ಆಗಲೂ ಬಿಡುಗಡೆ ಮಾಡದಿದ್ದರೆ ಏಪ್ರಿಲ್‌ನಿಂದ ಎಲ್ಲಾ ಕಾಮಗಾರಿ ಸ್ಥಗಿತಗೊಳಿಸಿ ಹೋರಾಟ ಮಾಡುತ್ತೇವೆ ಎಂದರು.

'ನಾವು ಬೆದರಿಕೆಗೆ ಮಣಿಯುವುದಿಲ್ಲ. ನಾವು ಮಾಡಿದ ಕೆಲಸಕ್ಕೆ ಕೂಲಿ ಕೊಡಿ ಎಂದು ಒತ್ತಾಯಿಸುತ್ತಿದ್ದೇವೆ. ಎಲ್ಲಾ ವಿಚಾರ ಮುಖ್ಯಮಂತ್ರಿಗೆ ಗೊತ್ತಿದೆ. ಆದರೆ, ಅವರು ಜಾಣ ನಡೆ ತೋರುತ್ತಿದ್ದಾರೆ' ಎಂದು ಹೇಳಿದರು.

ರಾಜ್ಯ ಗುತ್ತಿಗೆದಾರರ ಸಂಘ ಗೌರವಾಧ್ಯಕ್ಷ ಕೃಷ್ಣಾರೆಡ್ಡಿ ಹಾಗೂ ಪದಾಧಿಕಾರಿಗಳು ಇದ್ದರು.

ಲೋಕಾಯುಕ್ತ ಬಲೆಗೆ ಬಿದ್ದ ಎಎಸ್‌ಐ

ಪ್ರಜಾವಾಣಿ ವಾರ್ತೆ

ಗದಗ: ಇಲ್ಲಿನ ಶಹರ ಪೊಲೀಸ್ ಠಾಣೆಯ ಎಎಸ್‌ಐ ಸಿ.ವಿ.ಇಂಗಳಹಳ್ಳಿ ಅವರು ₹10 ಸಾವಿರ ಲಂಚ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ನಗರದ ನಿವಾಸಿ ವೀರೇಶ ಪೂಜಾರ ತನ್ನ ತಾಯಿ ಹೆಸರಿನಲ್ಲಿ ಗದಗ ಶಹರ ಠಾಣೆಗೆ ಅನಾಮಧೇಯ ವ್ಯಕ್ತಿಗಳು ಸಲ್ಲಿಸಿದ್ದ ಅರ್ಜಿ ವಜಾಗೊಳಿಸಲು ಕೋರಿದ್ದರು. ಅದಕ್ಕೆ ಎಎಸ್‌ಐ ಇಂಗಳಹಳ್ಳಿ ₹13 ಸಾವಿರಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂದು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ಬುಧವಾರ ಪೊಲೀಸ್ ಠಾಣೆಯಲ್ಲೇ ₹10 ಸಾವಿರ ಲಂಚ ಪಡೆಯುವ ವೇಳೆ ಎಎಸ್‌ಐ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.


ಮೈಸೂರು, ಶಿವಮೊಗ್ಗದಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಮೈಸೂರು/ಕೊಡಗು: ಮೈಸೂರು ಭಾಗದ ಜಿಲ್ಲೆಗಳಲ್ಲಿ ಮಂಗಳವಾರ ತಡರಾತ್ರಿ ಮತ್ತು ಕೊಡಗಿನಲ್ಲಿ ಬುಧವಾರ ಬುಧವಾರ ಉತ್ತಮ ಮಳೆಯಾಯಿತು. ಚಾಮರಾಜನಗರ ಜಿಲ್ಲೆಯಾದ್ಯಂತ ಸಾಧಾರಣ ಮಳೆಯಾದರೂ ಬಿರುಗಾಳಿಗೆ ಮರಗಳು ಉರುಳಿ ಬಿದ್ದಿವೆ.

ಮೈಸೂರು ನಗರದಲ್ಲಿ ರಾತ್ರಿ 11.30ರ ಸುಮಾರಿಗೆ ಮಳೆ ಆರಂಭಗೊಂಡು, ಒಂದು ಗಂಟೆಗೂ ಹೆಚ್ಚು ಕಾಲ ಸುರಿಯಿತು. 3–4 ದಿನಗಳಿಂದಲೂ ಸಾಧಾರಣ ಮಳೆಯಾಗುತ್ತಿದ್ದು, ಅಲ್ಲಲ್ಲಿ ರಾಶಿ ಹಾಕಲಾದ ರಾಗಿ ತೋಯ್ದು ಹಾನಿಯಾಗಿದೆ. ಸಾಕಷ್ಟು ಕಡೆ ಜಮೀನುಗಳಲ್ಲಿ ನೀರು ನಿಂತಿದೆ.

ಕಾವೇರಿ ನದಿ ಪಾತ್ರದಲ್ಲಿರುವ ತಿ.ನರಸೀಪುರ ತಾಲ್ಲೂಕಿನ ಕೆಂಡನಕೊಪ್ಪಲು, ಕೋಳಿಮಲ್ಲನ ಹುಂಡಿ ಹಾಗೂ ಸೋಸಲೆ ಗ್ರಾಮದ ಹಲವು ಜಮೀನುಗಳಿಗೆ ಮಳೆ ನೀರು ನುಗ್ಗಿದ್ದು, ಭತ್ತದ ನಾಟಿಗೆ ಹಿನ್ನಡೆ ಆಗಿದೆ.



ತಿ. ನರಸೀಪುರ ತಾಲ್ಲೂಕಿನ ಕೆಂಡನಕೊಪ್ಪಲು ಗ್ರಾಮದ ಜಮೀನಿನಲ್ಲಿ ಮಳೆ ನೀರು ನಿಂತಿದ್ದು, ಭತ್ತದ ನಾಟಿಗೆ ಅಡ್ಡಿಯಾಯಿತು

ಕೊಡಗಿನ ವಿರಾಜಪೇಟೆ, ಸಿದ್ದಾಪುರ ಶನಿವಾರಸಂತೆ, ನಾಪೋಕ್ಲು ವ್ಯಾಪ್ತಿಯಲ್ಲಿ ಬಿರುಸಿನ ಮಳೆಯಾಗಿದೆ. ಕಾಫಿ ಕೊಯ್ಲು ಮುಗಿದಿರುವ ತೋಟಗಳಲ್ಲಿ ಹೂವು ಅರಳಲು ಸಹಾಯಕವಾಗಿದೆ.

ಶಿವಮೊಗ್ಗ ವರದಿ: ಜಿಲ್ಲೆಯ ಮಲೆನಾಡು ಪ್ರದೇಶದ ಕೆಲವೆಡೆ ಬುಧವಾರ ಮಳೆ ಸುರಿದಿದೆ. ಬೇಸಿಗೆ ಆರಂಭದಲ್ಲಿಯೇ ಮಳೆಯ ಸಿಂಚನವಾಗಿದ್ದು, ತಂಪಾದ ವಾತಾವರಣ ಸೃಷ್ಟಿಸಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಹೊಸನಗರ, ರಿಪ್ಪನ್‌ಪೇಟೆ, ತೀರ್ಥಹಳ್ಳಿ ತಾಲ್ಲೂಕಿನ ಕೋಣಂದೂರು ಹಾಗೂ ಸಾಗರದಲ್ಲಿ ಮಳೆಯಾಗಿದೆ. ರಿಪ್ಪನ್‌ಪೇಟೆ ಸುತ್ತಮುತ್ತ ಜೋರು ಮಳೆ ಆಗಿದೆ.

ಮಂಗಳೂರು ವರದಿ: ಬೆಳ್ತಂಗಡಿ ತಾಲ್ಲೂಕಿನ ಕೆಲವೆಡೆ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಆಲ್ದೂರು, ಬಾಳೆಹೊನ್ನೂರು, ಕೊಪ್ಪ ಭಾಗದಲ್ಲಿ ಬುಧವಾರ ಮಳೆ ಸುರಿಯಿತು.

ಚಂದ್ರಮೌಳೇಶ್ವರ ರಥೋತ್ಸವ

ಪ್ರಜಾವಾಣಿ ವಾರ್ತೆ

ನಾಗಮಂಗಲ: ತಾಲ್ಲೂಕಿನ ಪುರಾಣ ಪ್ರಸಿದ್ಧ ಆದಿಚುಂಚನಗಿರಿ ಕ್ಷೇತ್ರದ ಜಾತ್ರಾ ಮಹೋತ್ಸವದ ಎರಡನೇ ದಿನವಾದ ಬುಧವಾರ ಚಂದ್ರಮೌಳೇಶ್ವರಸ್ವಾಮಿ ರಥೋತ್ಸವ ವೈಭವದಿಂದ ನಡೆಯಿತು.

ಆದಿಚುಂಚನಗಿರಿಯಲ್ಲಿ ಮುಂಜಾನೆ ಕಾಲಭೈರವೇಶ್ವರ ಹಾಗೂ ಗಂಗಾಧರೇಶ್ವರ ಸ್ವಾಮಿಗೆ ವಿಶೇಷ ಪೂಜಾ ಕಾರ್ಯಗಳು ನಡೆದವು. ರಾತ್ರಿ ಸರ್ವಾಲಂಕೃತಗೊಂಡ ಚಂದ್ರಮೌಳೇಶ್ವರ ಸ್ವಾಮಿಯ ರಥಕ್ಕೆ ನಿರ್ಮಲಾನಂದನಾಥ ಸ್ವಾಮೀಜಿ ಪೂಜೆ ಸಲ್ಲಿಸಿ ಉತ್ಸವಕ್ಕೆ ಚಾಲನೆ ನೀಡಿದರು.

ರಥ ಬೀದಿಯಲ್ಲಿ ಉತ್ಸವ ಶ್ರದ್ಧಾ ಭಕ್ತಿಗಳೊಂದಿಗೆ ಸಾಗಿ ಭಕ್ತರ ಕಣ್ಮನ ಸೆಳೆಯಿತು. ಮಠದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ, ಚೈತನ್ಯನಾಥ ಸ್ವಾಮೀಜಿ ಸೇರಿ ವಿವಿಧ ಶಾಖಾ ಮಠಗಳ ಸ್ವಾಮೀಜಿಗಳು ಪಾಲ್ಗೊಂಡಿದ್ದರು.



ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿಯಲ್ಲಿ ಚಂದ್ರಮೌಳೇಶ್ವರಸ್ವಾಮಿ ರಥೋತ್ಸವ ಬುಧವಾರ ವೈಭವದಿಂದ ನಡೆಯಿತು ಪ್ರಜಾವಾಣಿ ಚಿತ್ರ

ಕೇಂದ್ರ ಸರ್ಕಾರ ಎರಡು ವರ್ಷಗಳಿಂದ ಅನುದಾನ ನೀಡಿಲ್ಲ: ಸಚಿವ ಪ್ರಿಯಾಂಕ್ ಖರ್ಗೆ

'ನೀರಿನ ಗುಣಮಟ್ಟ: ₹ 52 ಕೋಟಿ ವೆಚ್ಚ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರಾಮೀಣ ಪ್ರದೇಶಗಳಿಗೆ ಶುದ್ಧ ನೀರು ಪೂರೈಸುವ ಉದ್ದೇಶದಿಂದ ಗುಣಮಟ್ಟ ಪರೀಕ್ಷೆಗೆ ರಾಜ್ಯ ಸರ್ಕಾರ ಎರಡು ವರ್ಷಗಳಲ್ಲಿ ₹52 ಕೋಟಿ ವೆಚ್ಚ ಮಾಡಿದೆ. ಆದರೆ, ಈ ಕೇಂದ್ರ ಸರ್ಕಾರ ತನ್ನ ಪಾಲಿನ ಅನುದಾನ ನೀಡಿಲ್ಲ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

'ಶುದ್ಧ ಮತ್ತು ಸುರಕ್ಷಿತ ಕುಡಿಯುವ ನೀರು ನಿರ್ವಹಣೆಗಾಗಿ ರಾಜ್ಯದಾದ್ಯಂತ ಸ್ಥಾಪಿಸಲಾಗಿರುವ ಪ್ರಯೋಗಾಲಯಗಳ ಮೂಲಕ ಗುಣಮಟ್ಟ ಪರೀಕ್ಷೆ ಕೈಗೊಳ್ಳಲಾಗುತ್ತಿದೆ. ರಾಜ್ಯ ಸರ್ಕಾರ ಈ ಉದ್ದೇಶಕ್ಕೆ 2024-25 ನೇ ಸಾಲಿನಲ್ಲಿ ₹23.52 ಕೋಟಿ, ಪ್ರಸಕ್ತ ಸಾಲಿನಲ್ಲಿ ಈವರೆಗೆ ₹ 28.85 ಕೋಟಿ ವೆಚ್ಚ ಮಾಡಿದೆ' ಎಂದಿದ್ದಾರೆ.

ಕಣ್ಗಾವಲಿಗೆ ಕಾರ್ಯಪಡೆ ರಚನೆ

'ನೀರಿನ ಗುಣಮಟ್ಟ ಮೇಲ್ವಿಚಾರಣೆ ಮತ್ತು ಕಣ್ಗಾವಲು ಕಾರ್ಯಕ್ರಮವನ್ನು ಸೂಕ್ತ ರೀತಿಯಲ್ಲಿ ಅನುಷ್ಠಾನಗೊಳಿಸಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕಾರ್ಯಪಡೆ ರಚಿಸಲಾಗಿದೆ. ಬೇಸಿಗೆ ಕಾಲದಲ್ಲಿ ನೀರು ಪೂರೈಕೆ ವ್ಯವಸ್ಥೆಯನ್ನು ಪರಾಮರ್ಶಿಸಿ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಪ್ರತಿ ತಿಂಗಳು ಕಡ್ಡಾಯವಾಗಿ ಸಭೆ ನಡೆಸಬೇಕೆಂದು ನಿರ್ದೇಶನ ನೀಡಲಾಗಿದೆ' ಎಂದೂ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.



ಪ್ರಿಯಾಂಕ್ ಖರ್ಗೆ

'ಕೇಂದ್ರ ಸರ್ಕಾರ ಜಲಜೀವನ್ ಮಿಷನ್ ಯೋಜನೆಯಡಿ ನೀರಿನ ಗುಣಮಟ್ಟ ಮೇಲ್ವಿಚಾರಣೆ ಮತ್ತು ಕಣ್ಗಾವಲು ಕಾರ್ಯಕ್ರಮಕ್ಕೆ ಶೇ 2ರಷ್ಟು ಅನುದಾನ ಬಿಡುಗಡೆಗೊಳಿಸಬೇಕಿದೆ. ಆದರೆ, ಎರಡು ವರ್ಷದಿಂದ ಕೇಂದ್ರ ಸರ್ಕಾರ ತನ್ನ ಪಾಲಿನ ಅನುದಾನ ಬಿಡುಗಡೆ ಮಾಡಿಲ್ಲ' ಎಂದು ತಿಳಿಸಿದ್ದಾರೆ.

'ಗ್ರಾಮೀಣ ಜನವಸತಿ ಪ್ರದೇಶಗಳಲ್ಲಿನ ಕುಡಿಯುವ ನೀರಿನ ಮೂಲಗಳನ್ನು ನಿಗದಿಪಡಿಸಿರುವ ಮಾರ್ಗಸೂಚಿಗಳಿಗೆ ಅನುಗುಣವಾಗಿ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಈ ಉದ್ದೇಶಕ್ಕೆ ಜಿಲ್ಲಾಮಟ್ಟದ ಪ್ರಯೋಗಾಲಯಗಳು ಮತ್ತು 47 ತಾಲ್ಲೂಕು ಮಟ್ಟದ ಪ್ರಯೋಗಾಲಯಗಳು ಕಾರ್ಯನಿರ್ವಹಿಸುತ್ತಿವೆ' ಎಂದು ಹೇಳಿದ್ದಾರೆ.

'ರಾಜ್ಯದಲ್ಲಿ 2024-25ರಲ್ಲಿ 3.90 ಲಕ್ಷ, 2025-26ರಲ್ಲಿ 2.46 ಲಕ್ಷ ನೀರಿನ ಮಾದರಿಗಳನ್ನು ಸಂಗ್ರಹಿಸಲಾಗಿದೆ. ಈ ಪೈಕಿ, ಕೆಲವು ಮಾದರಿಯಲ್ಲಿ ರಾಸಾಯನಿಕಗಳು, ಬ್ಯಾಕ್ಟೀರಿಯಾ ಪತ್ತೆಯಾಗಿದ್ದವು. ಕಲುಷಿತ ಎಂದು ಕಂಡುಬಂದ 49,309 ನೀರಿನ ಮಾದರಿಗಳಿಗೆ ಪರ್ಯಾಯ ಕ್ರಮಗಳನ್ನು ಕೈಗೊಂಡು ನೀರು ಪೂರೈಸಲಾಗಿದೆ' ಎಂದು ಪ್ರಿಯಾಂಕ್ ವಿವರಿಸಿದ್ದಾರೆ.

'ನೀರಿನ ಗುಣಮಟ್ಟದ ಪರೀಕ್ಷೆ ನಡೆಸಲು ಎನ್‌ಎಬಿಎಲ್ ಮಾನ್ಯತೆ ಪಡೆದಿರುವ ಖಾಸಗಿ ಪ್ರಯೋಗಾಲಯಗಳಲ್ಲಿ 2023-24 ಮತ್ತು 2024-25ನೇ ಸಾಲಿನಲ್ಲಿ ಒಟ್ಟು 66,811 ನೀರಿನ ಮಾದರಿಗಳ ಪರೀಕ್ಷೆ ನಡೆಸಲಾಗಿದೆ. ಅದಕ್ಕೆ ತಗಲಿದ ವೆಚ್ಚವನ್ನು ರಾಜ್ಯ ಸರ್ಕಾರ ಭರಿಸಿದೆ. ಕಲ್ಯಾಣ ಕರ್ನಾಟಕ ಭಾಗಗಳಲ್ಲಿ ನೀರಿನ ಮಾದರಿಗಳ ಗುಣಮಟ್ಟ ಪರೀಕ್ಷೆ ಕೈಗೊಳ್ಳಲು ರಾಯಚೂರು ಕೃಷಿ ವಿಶ್ವವಿದ್ಯಾಲಯದೊಂದಿಗೆ ಕರಾರು ಮಾಡಿಕೊಳ್ಳಲಾಗಿದೆ' ಎಂದೂ ಸಚಿವರು ತಿಳಿಸಿದ್ದಾರೆ.

ಸಫಾರಿ ಸ್ಥಗಿತಕ್ಕೆ ಆಗ್ರಹ: ಅನಿರ್ದಿಷ್ಟ ಧರಣಿ

ರೈತ, ಕನ್ನಡಪರ ಸಂಘಟನೆ, ಸೇವ್ ಕಬಿನಿ ಸಮಿತಿಯಿಂದ ಪ್ರಾತ್ಯಕ್ಷಿಕೆ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಮೈಸೂರು: 'ಕಾಡಂಚಿನ ರೈತರ ರಕ್ಷಣೆಗಾಗಿ ಕಾಡಿನೊಳಗೆ ಸಫಾರಿಯನ್ನು ಕೂಡಲೇ ನಿಲ್ಲಿಸಬೇಕು ಹಾಗೂ ಅಕ್ರಮ ರೆಸಾರ್ಟ್‌ಗಳನ್ನು ತೆರವುಗೊಳಿಸಬೇಕು' ಎಂದು ಒತ್ತಾಯಿಸಿ ವಿವಿಧ ಸಂಘಟನೆಗಳವರು ಇಲ್ಲಿ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಬುಧವಾರದಿಂದ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದರು.

ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘ, ಸಾಮೂಹಿಕ ನಾಯಕತ್ವದ ರೈತ ಸಂಘ, ಕಬ್ಬುಬೆಳೆಗಾರರ ಸಂಘ, ಸೇವ್ ಕಬಿನಿ ಸಮಿತಿ, ದಲಿತಪರ, ಕನ್ನಡ ಪರ ಸಂಘಟನೆಗಳು ಧರಣಿ ಆರಂಭಿಸಿವೆ.

ಗನ್ ಹೌಸ್ ವೃತ್ತದಲ್ಲಿ ಸೇರಿದ ಪ್ರತಿಭಟನಕಾರರು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಜಿಲ್ಲಾಧಿಕಾರಿ ಕಚೇರಿ ಬಳಿ 'ಹುಲಿಯೊಂದು ರೈತನ ಎದೆ ಬಗಿಯುವ' ಪ್ರಾತ್ಯಕ್ಷಿಕೆ ಮಾಡಿ ಆಕ್ರೋಶ ವ್ಯಕ್ತಪಡಿಸಿದರು.

ಸಂಘಟನೆ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, 'ಸಫಾರಿ ನಿಲ್ಲಿಸಿದ್ದರಿಂದ ಕಾಡಿನಲ್ಲಿ ವನ್ಯ ಮೃಗಗಳ ಸಂಖ್ಯೆ ಹೆಚ್ಚಾಗಿದೆ ಎಂದು ಅರಣ್ಯ ಇಲಾಖೆ ವರದಿಯೇ ಹೇಳಿದೆ. ಕಾಡುಪ್ರಾಣಿಗಳಿಂದ ಯಾರಿಗೂ ಹಾನಿಯಾಗಿಲ್ಲ. ಹೀಗಿದ್ದರೂ ಸಫಾರಿ ಮರುಆರಂಭ ಆತಂಕ ಮೂಡಿಸಿದೆ' ಎಂದರು.



'ಕಾಡಂಚಿನ ರೈತರ ರಕ್ಷಣೆಗಾಗಿ ಕಾಡಿನೊಳಗೆ ಸಫಾರಿ ನಿಲ್ಲಿಸಬೇಕು' ಎಂದು ಒತ್ತಾಯಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ಸದಸ್ಯರು ಬುಧವಾರ ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಬುಧವಾರ ಪ್ರತಿಭಟಿಸಿದ ವೇಳೆ 'ಹುಲಿಯು ರೈತನ ಎದೆ ಬಗಿಯುವ' ಪ್ರಾತ್ಯಕ್ಷಿಕೆ ಪ್ರದರ್ಶಿಸಿ ಆಕ್ರೋಶ ವ್ಯಕ್ತಪಡಿಸಿದರು

'ಕಾಡಿನೊಳಗಿನ ರೆಸಾರ್ಟ್ ಮಾಲೀಕರು ಪ್ರಭಾವಿಗಳಾಗಿರುವ ಕಾರಣಕ್ಕೆ ಸರ್ಕಾರದ ಮೇಲೆ ಒತ್ತಡ ತಂದಿದ್ದಾರೆ. ಮೋಜಿಗಾಗಿ, ಹಣ ಸಂಪಾದನೆಗಾಗಿ ಜನವಿರೋಧಿ ನೀತಿ ಜಾರಿಗೊಳಿಸುವುದು ಖಂಡನೀಯ. ಸರ್ಕಾರ ತಕ್ಷಣವೇ ಸಫಾರಿ ನಿಲ್ಲಿಸಿ, ಕಾಡಿನೊಳಗೆ ಅಕ್ರಮವಾಗಿ ನಿರ್ಮಿಸಿರುವ ರೆಸಾರ್ಟ್ ಮುಚ್ಚಿಸಬೇಕು' ಎಂದು ಒತ್ತಾಯಿಸಿದರು.

ನಷ್ಟವನ್ನು ತಾಳಿಕೊಳ್ಳುವ ಸಾಮರ್ಥ್ಯ ಇಲ್ಲದಿದ್ದರೆ ಷೇರು ಮಾರುಕಟ್ಟೆಯಲ್ಲಿ ಲಾಭ ಗಳಿಸಲು ಸಾಧ್ಯವಿಲ್ಲ
ರಾಕೇಶ್ ಜುಂಝುನ್‌ವಾಲಾ, ಹೂಡಿಕೆದಾರ

ದುಡ್ಡಿನಂಥಾ ಮಾತು

ಸ್ಥಿರತೆಯ ಕಡೆ ಹೆಜ್ಜೆ ಇರಿಸೋಣವೇ?

● ಅಪರ್ಣಾ ಶಂಕರ್

ಕಳೆದ ಒಂದು ವರ್ಷದ ಅವಧಿಯಲ್ಲಿ ಹೂಡಿಕೆಯ ಜಗತ್ತಿನ ವಿದ್ಯಮಾನಗಳು ಒಂದು ಸರಳ ಸತ್ಯವನ್ನು ಮತ್ತೊಮ್ಮೆ ಹೇಳಿವೆ. ಲಾಭ ಗಳಿಕೆ ಮುಖ್ಯ; ಆದರೆ, ಕಷ್ಟದ ಸಂದರ್ಭಗಳನ್ನು ತಾಳಿಕೊಳ್ಳುವ ಶಕ್ತಿ ಅದಕ್ಕಿಂತ ಹೆಚ್ಚು ಮುಖ್ಯ ಎಂಬುದು ಆ ಸತ್ಯ.

ಈಚಿನ ವರ್ಷಗಳಲ್ಲಿ ಜಾಗತಿಕ ಮಟ್ಟದಲ್ಲಿನ ಬಿಕ್ಕಟ್ಟುಗಳು ತೀವ್ರವಾಗಿದ್ದುದು, ಬಡ್ಡಿ ದರದಲ್ಲಿ ಏರಿಳಿತಗಳು ಇದ್ದಿದ್ದು, ಹಣದುಬ್ಬರದ ಸಮಸ್ಯೆ ಮತ್ತು ಷೇರುಪೇಟೆಯಲ್ಲಿನ ಏರಿಳಿತಗಳು ಸಣ್ಣ ಹೂಡಿಕೆದಾರರ ವರ್ತನೆಯಲ್ಲಿ ಬದಲಾವಣೆ ತಂದಿವೆ. ಲಾಭದ ಹಿಂದೆ ಓಡುವುದಕ್ಕಿಂತಲೂ ಬಂಡವಾಳದ ರಕ್ಷಣೆಗೆ ಆದ್ಯತೆ ನೀಡುವುದರತ್ತ ಗಮನ ನೀಡಿದ ಅರ್ಥಪೂರ್ಣ ಬದಲಾವಣೆಗೆ 2025ರಲ್ಲಿ ನಾವು ಸಾಕ್ಷಿಯಾದೆವು. ಅಮೂಲ್ಯ ಲೋಹಗಳ ಬೆಲೆಯಲ್ಲಿನ ತೀವ್ರ ಏರಿಕೆಯು ಇದನ್ನೇ ಹೇಳುತ್ತಿತ್ತು. ಚಿನ್ನದ ಬೆಲೆಯು ಕಳೆದ ವರ್ಷದಲ್ಲಿ ಸರಿಸುಮಾರು ಶೇ 70ರಿಂದ ಶೇ 75ರವರೆಗೆ ಹಾಗೂ ಬೆಳ್ಳಿಯ ಬೆಲೆಯು ಶೇ 150ರಿಂದ ಶೇ 172ರವರೆಗೆ ಹೆಚ್ಚಳ ಕಂಡಿತು.

ಇವು ಅಸಾಮಾನ್ಯ ಪ್ರಮಾಣದ ಗಳಿಕೆ, ನಿಜ. ಆದರೆ ಈ ಪ್ರಮಾಣದ ಗಳಿಕೆಯು ಮಹತ್ವದ ಪಾಠವೊಂದನ್ನು ಹೇಳುತ್ತಿದೆ. ಎಲ್ಲ ಸಂದರ್ಭಗಳಲ್ಲಿಯೂ ಒಂದೇ ಬಗೆಯ ಹೂಡಿಕೆಯು ಮುಂಚೂಣಿಯಲ್ಲಿ ಇರುವುದಿಲ್ಲ. ಲಾಭ ನೀಡುವಲ್ಲಿ ನಾಯಕನ ಸ್ಥಾನವು ಬದಲಾಗುತ್ತಿರುತ್ತದೆ. ಯಾವುದರ ಮೇಲಿನ ಹೂಡಿಕೆಯು ಅತ್ಯಂತ ಹೆಚ್ಚಿನ ಲಾಭ ನೀಡುತ್ತದೆ ಎಂಬುದನ್ನು ಊಹಿಸುವುದು ಬಹಳ ಕಷ್ಟದ ಕೆಲಸ. ಮಲ್ಟಿ ಅಸೆಟ್ ಫಂಡ್‌ಗಳು ಮಹತ್ವ ಪಡೆದುಕೊಳ್ಳುವುದೇ ಈ ಕಾರಣದಿಂದಾಗಿ.

ಮಲ್ಟಿ ಅಸೆಟ್ ಫಂಡ್‌ಗಳ ಪ್ರಾಮುಖ್ಯ: ಮಲ್ಟಿ ಅಸೆಟ್ ಫಂಡ್‌ಗಳು ಮೂರು ಅಥವಾ ಅದಕ್ಕಿಂತ ಹೆಚ್ಚಿನ ಕಡೆಗಳಲ್ಲಿ ಹಣ ತೊಡಗಿಸುತ್ತವೆ. ಸಾಮಾನ್ಯವಾಗಿ ಅವು ಷೇರುಗಳಲ್ಲಿ, ಸಾಲಪತ್ರಗಳಲ್ಲಿ, ಚಿನ್ನ ಮತ್ತು ಬೆಳ್ಳಿಯ ಮೇಲೆ ಹಾಗೂ ಕೆಲವು ಸಂದರ್ಭಗಳಲ್ಲಿ ರಿಯಲ್ ಎಸ್ಟೇಟ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್‌ಗಳ (ಆರ್‌ಇಐಟಿ) ಮೇಲೆ ಹಣ ಹೂಡಿಕೆ ಮಾಡುತ್ತವೆ. ಇನ್ನೂ ಇತರ ಕೆಲವು ಕಡೆಗಳಲ್ಲಿ ಹಣ ತೊಡಗಿಸಿ, ಹೂಡಿಕೆಯಲ್ಲಿ ವೈವಿಧ್ಯ ಸಾಧಿಸುವುದೂ ಇದೆ. ಇಲ್ಲಿ ಉದ್ದೇಶವು ಅಲ್ಪಾವಧಿಯಲ್ಲಿ ಒಂದು ಬಗೆಯ ಹೂಡಿಕೆಯಿಂದ ಹೆಚ್ಚಿನ ಪ್ರಮಾಣದಲ್ಲಿ ಲಾಭ ಗಳಿಸುವುದಲ್ಲ; ಅದರ ಬದಲಿಗೆ, ಮಾರುಕಟ್ಟೆಯಲ್ಲಿನ ಏರಿಳಿತಗಳ ನಡುವೆ ರಿಸ್ಕ್‌ಗೆ ಹೋಲಿಕೆ ಮಾಡಿ ನೋಡಿದಾಗ ಹೆಚ್ಚಿನ ಪ್ರಮಾಣದ ಲಾಭ ತಂದುಕೊಡುವುದು ಇವುಗಳ ಉದ್ದೇಶ.

ಇಲ್ಲಿ ಪ್ರತಿಯೊಂದು ಬಗೆಯ ಹೂಡಿಕೆಯೂ ಭಿನ್ನವಾಗಿ ಕೆಲಸ ಮಾಡುತ್ತದೆ

- ಬೆಳವಣಿಗೆ ಚೆನ್ನಾಗಿರುವಾಗ ಹಾಗೂ ಕಂಪನಿಗಳ ಗಳಿಕೆಯು ವಿಸ್ತರಣೆ ಕಾಣುತ್ತಿರುವಾಗ ಈಕ್ವಿಟಿ ಮೇಲಿನ ಹೂಡಿಕೆಯು ಒಳ್ಳೆಯ ಲಾಭ ತಂದುಕೊಡುತ್ತದೆ.
- ಹೂಡಿಕೆದಾರರು ಹೆಚ್ಚಿನ ರಿಸ್ಕ್ ತೆಗೆದುಕೊಳ್ಳಲು ಸಿದ್ಧವಿಲ್ಲದ ಸಂದರ್ಭಗಳಲ್ಲಿ, ಹಣದುಬ್ಬರದ ಸಮಸ್ಯೆ ಇರುವ ಹೊತ್ತಿನಲ್ಲಿ ಚಿನ್ನ ಮತ್ತು ಬೆಳ್ಳಿ ಮೇಲಿನ ಹೂಡಿಕೆಗಳು ಹೆಚ್ಚು ಲಾಭ ನೀಡುತ್ತವೆ.
- ಸಾಲಪತ್ರಗಳ ಮೇಲಿನ ಹೂಡಿಕೆಯು ವರಮಾನದಲ್ಲಿ ಸ್ಥಿರತೆ ನೀಡುತ್ತದೆ, ಏರಿಳಿತಗಳನ್ನು ಕಡಿಮೆ ಮಾಡುತ್ತದೆ
- ಆರ್‌ಇಐಟಿಗಳು ವಾಣಿಜ್ಯ ಉದ್ದೇಶದ ರಿಯಲ್ ಎಸ್ಟೇಟ್ ಆಸ್ತಿಗಳಲ್ಲಿ, ವರಮಾನ ತಂದುಕೊಡುವ ಆಸ್ತಿಗಳಲ್ಲಿ ಹೂಡಿಕೆ ಮಾಡುತ್ತವೆ.



ಪ್ರತ್ಯೇಕವಾಗಿಯೇ ಹೂಡಿಕೆ ಮಾಡಬಹುದಲ್ಲ?

ಮಲ್ಟಿ ಅಸೆಟ್ ಫಂಡ್‌ಗಳಲ್ಲಿನ ಹೂಡಿಕೆಯನ್ನು ತಾವೇ ಅನುಕರಿಸಲು ಕೆಲವು ಹೂಡಿಕೆದಾರರು ಮುಂದಾಗುತ್ತಾರೆ. ಅವರು ಈಕ್ವಿಟಿ ಫಂಡ್‌ಗಳಲ್ಲಿ, ಚಿನ್ನದ ಇಟಿಎಫ್‌ಗಳಲ್ಲಿ, ಬೆಳ್ಳಿಯ ಮೇಲೆ ಹೂಡಿಕೆ ಮಾಡುವ ಫಂಡ್‌ಗಳಲ್ಲಿ, ಸಾಲಪತ್ರ ಆಧಾರಿತ ಹೂಡಿಕೆ ಉತ್ಪನ್ನಗಳಲ್ಲಿ, ಆರ್‌ಇಐಟಿಗಳಲ್ಲಿ ಪ್ರತ್ಯೇಕವಾಗಿ ಹಣ ತೊಡಗಿಸುತ್ತಾರೆ. ತಾತ್ತ್ವಿಕವಾಗಿ ನೋಡಿದಾಗ ಇದು ಒಂದು ಸಮಗ್ರವಾದ ಹೆಜ್ಜೆ ಎಂದು ಅನ್ನಿಸಬಹುದು. ಆದರೆ ವಾಸ್ತವದಲ್ಲಿ ಇದು ಪರಿಣಾಮಕಾರಿ ಆಗುವುದಿಲ್ಲ. ಏಕೆಂದರೆ...

1) ಯಾವುದರ ಮೇಲೆ ಎಷ್ಟು ಹೂಡಿಕೆ ಮಾಡಬೇಕು ಎಂಬುದನ್ನು ತೀರ್ಮಾನಿಸುವಾಗ, ಹೂಡಿಕೆ ಮಾಡಬೇಕಾದವುಗಳ ಮೌಲ್ಯದ ಮೇಲೆ ನಿರಂತರ ನಿಗಾ ಇರಿಸಬೇಕಾಗುತ್ತದೆ. ಅರ್ಥ ವ್ಯವಸ್ಥೆಗೆ ಸಂಬಂಧಿಸಿದ ಅಂಕಿ–ಅಂಶಗಳನ್ನು, ಕಂಪನಿಗಳ ವರಮಾನದ ಗತಿಯನ್ನು ಗಮನಿಸುತ್ತಿರಬೇಕಾಗುತ್ತದೆ. ಸಣ್ಣ ಹೂಡಿಕೆದಾರರಲ್ಲಿ ಹೆಚ್ಚಿನವರಿಗೆ ಇಷ್ಟೆಲ್ಲ ಗಮನಿಸಲು ಸಮಯ ಇರುವುದಿಲ್ಲ, ಇವನ್ನೆಲ್ಲ ಅನುಷ್ಠಾನಕ್ಕೆ ತರಲು ಅಗತ್ಯ ಅನುಕೂಲ ಇರುವುದಿಲ್ಲ.

2) ಹೂಡಿಕೆಗಳಲ್ಲಿ ಮರುಹೊಂದಾಣಿಕೆ ಮಾಡಿಕೊಳ್ಳುತ್ತ ಇರುವುದು ಸುಲಭದ ಕೆಲಸವೇನೂ ಅಲ್ಲ. ಹೂಡಿಕೆದಾರರು ಈಚಿನ ದಿನಗಳಲ್ಲಿ ಹೆಚ್ಚು ಲಾಭ ನೀಡಿರುವ ಆಸ್ತಿಯ ಮೇಲೆ ಹೆಚ್ಚಿನ ಹೂಡಿಕೆ ಮಾಡುತ್ತಾರೆ, ಲಾಭ ನೀಡುವಲ್ಲಿ ಹಿಂದೆಬಿದ್ದ ಆಸ್ತಿಯ ಮೇಲಿನ ಹೂಡಿಕೆ ಕಡಿಮೆ ಮಾಡುತ್ತಾರೆ. ಆದರೆ ಹೀಗೆ ಮಾಡುವುದರಿಂದ ಕೆಲವು ವೇಳೆ ದುಬಾರಿ ಬೆಲೆಗೆ ಖರೀದಿ ಮಾಡಿ, ಕಡಿಮೆ ಬೆಲೆಗೆ ಮಾರಾಟ ಮಾಡಬೇಕಾದ ಸ್ಥಿತಿಯೂ ಸೃಷ್ಟಿಯಾಗುತ್ತದೆ.

3) ಹಲವಾರು ಹೂಡಿಕೆ ಆಯ್ಕೆಗಳನ್ನು ಒಬ್ಬರೇ ನಿರ್ವಹಿಸುವಾಗ ಸಂಕೀರ್ಣತೆಗಳು ಹೆಚ್ಚುತ್ತವೆ, ಎಲ್ಲ ಹೂಡಿಕೆ ಆಯ್ಕೆಗಳ ಮೇಲೆ ನಿಗಾ ಇರಿಸಬೇಕಾಗುತ್ತದೆ. ಪೋರ್ಟ್‌ಫೋಲಿಯೊದಲ್ಲಿ ಮತ್ತೆ ಮತ್ತೆ ಬದಲಾವಣೆ ತರುತ್ತ ಇದ್ದರೆ ಅಲ್ಪಾವಧಿ ಬಂಡವಾಳ ವೃದ್ಧಿ ತೆರಿಗೆಯ ಹೊರೆ ಬೀಳುತ್ತದೆ.

ಆದರೆ, ಮಲ್ಟಿ ಅಸೆಟ್ ಫಂಡ್‌ಗಳು ಈ ಮೂರೂ ಕೆಲಸಗಳನ್ನು – ಹೂಡಿಕೆ ಹಂಚಿಕೆ, ಅದರಲ್ಲಿ ಮರುಹೊಂದಾಣಿಕೆ ಮತ್ತು ರಿಸ್ಕ್‌ನ ನಿರ್ವಹಣೆ – ಸಾಂಸ್ಥಿಕ ಚೌಕಟ್ಟಿನಲ್ಲಿ ಮಾಡಿಕೊಡುತ್ತವೆ. ತೆಗೆದುಕೊಳ್ಳುವ ರಿಸ್ಕ್‌ಗೆ ಎಷ್ಟರಮಟ್ಟಿಗೆ ಲಾಭ ಸಿಗುತ್ತದೆ, ಯಾವ ಮೌಲ್ಯಕ್ಕೆ ಹೂಡಿಕೆ ಆಗುತ್ತದೆ ಎಂಬುದನ್ನು ಆಧರಿಸಿ ಪೋರ್ಟ್‌ಫೋಲಿಯೊದಲ್ಲಿ ಬದಲಾವಣೆ ತರಲಾಗುತ್ತದೆ. ಕೇವಲ ಭಾವನೆಗಳ ಆಧಾರದಲ್ಲಿ ಬದಲಾವಣೆ ತರುವುದಿಲ್ಲ. ಹೂಡಿಕೆದಾರರಿಗೆ ವೃತ್ತಿಪರವಾದ ಸೇವೆ ಸಿಗುತ್ತದೆ. ಅಂದರೆ, ಹೂಡಿಕೆಯ ಮೊತ್ತವನ್ನು ಸೂಕ್ತವಾಗಿ ಹಂಚಿಕೆ ಮಾಡುವ ಕೆಲಸವನ್ನು ಈ ಫಂಡ್‌ಗಳು ವ್ಯವಸ್ಥಿತ ಪ್ರಕ್ರಿಯೆ ಆಗಿಸುತ್ತವೆ.

ಈ ಎಲ್ಲ ಹೂಡಿಕೆಗಳ ನಡುವೆ ಪರಸ್ಪರ ನಿಖರ ಸಂಬಂಧ ಇರುವುದಿಲ್ಲ. ಆದರೆ ಇವುಗಳೆಲ್ಲವನ್ನು ಒಂದೆಡೆ ತರುವ ಮೂಲಕ, ಒಂದೇ ಪೋರ್ಟ್‌ಫೋಲಿಯೊದಲ್ಲಿ ಇವೆಲ್ಲವನ್ನೂ ಅಡಕವಾಗಿಸುವ ಮೂಲಕ ಹೂಡಿಕೆದಾರರಿಗೆ ಮಾರುಕಟ್ಟೆಯಲ್ಲಿ ಹಲವು ಬಗೆಯ ಹೂಡಿಕೆ ಆಯ್ಕೆಗಳು ಲಭ್ಯವಾಗುತ್ತವೆ. ಈ ಬಗೆಯ ಫಂಡ್‌ನಲ್ಲಿ ಹೂಡಿಕೆ ಮಾಡಿದಾಗ ಹೂಡಿಕೆದಾರರು ಮಾರುಕಟ್ಟೆಯಲ್ಲಿ ಸೂಕ್ತ ಸಮಯ ಯಾವುದು ಎಂಬುದನ್ನು ಕಾಯುತ್ತ ಕುಳಿತಿರಬೇಕಾಗಿಲ್ಲ. ಸಣ್ಣ ಹೂಡಿಕೆದಾರರ ಪಾಲಿಗೆ ಇದು ತಮ್ಮ ಹೂಡಿಕೆಯನ್ನು ಬಹಳ ವ್ಯವಸ್ಥಿತವಾದ ಬಗೆಯಲ್ಲಿ ವೈವಿಧ್ಯಮಯ ಆಗಿಸಿಕೊಳ್ಳುವ ಹಾದಿ.

ರಿಸ್ಕ್‌ನ ನಿರ್ವಹಣೆ ಹಾಗೂ ಪ್ರಯೋಜನ: ಹೂಡಿಕೆದಾರರ ವರ್ತನೆಯಲ್ಲಿ ಸ್ಥಿರತೆಯನ್ನು ತಂದುಕೊಡುವುದು ಮಲ್ಟಿ ಅಸೆಟ್ ಫಂಡ್‌ಗಳಲ್ಲಿನ ಬಹಳ ಮುಖ್ಯವಾದ ಅನುಕೂಲಗಳಲ್ಲಿ ಒಂದು. ಆದರೆ ಈ ಅನುಕೂಲದ ಬಗ್ಗೆ ಹೆಚ್ಚಿನ ಜನರಿಗೆ ಗೊತ್ತಿಲ್ಲ. ಷೇರುಪೇಟೆಯಲ್ಲಿ ವಹಿವಾಟು ತೇಜಿ ಇಲ್ಲದಿದ್ದಾಗ, ಚಿನ್ನ ಹಾಗೂ ಸಾಲಪತ್ರಗಳ ಮೇಲಿನ ಹೂಡಿಕೆಯು ಸಮತೋಲನ ಕಾಯ್ದುಕೊಳ್ಳಲು ನೆರವಾಗುತ್ತವೆ. ಅದೇ ರೀತಿ, ರಿಸ್ಕ್ ತೆಗೆದುಕೊಳ್ಳುವ ಅಭಿಲಾಷೆ ಹೆಚ್ಚಿದ್ದಾಗ ಈಕ್ವಿಟಿಗಳ ಮೇಲಿನ ಹೂಡಿಕೆಯು ಹೆಚ್ಚಿನ ಲಾಭ ತಂದುಕೊಡುತ್ತದೆ. ಈ ಬಗೆಯ ಲಾಭವು, ಹೂಡಿಕೆದಾರರು ಆತಂಕಕ್ಕೆ ಒಳಗಾಗಿ ಹೂಡಿಕೆ ಹಿಂಪಡೆಯುವುದನ್ನು ಕಡಿಮೆ ಮಾಡುತ್ತದೆ. ದೀರ್ಘಾವಧಿಯಲ್ಲಿ ಉತ್ತಮ ಲಾಭ ಅವರಿಗೆ ಸಿಗುವ ಸಾಧ್ಯತೆಯನ್ನು ಹೆಚ್ಚಿಸುತ್ತದೆ. ಸಣ್ಣ ಹೂಡಿಕೆದಾರರ ಪೈಕಿ ಹೆಚ್ಚಿನವರು ಪ್ರತಿ ವರ್ಷ ಅತಿಹೆಚ್ಚಿನ ಪ್ರಮಾಣದಲ್ಲಿ ಲಾಭ ಕೊಡುವ ಹೂಡಿಕೆಯನ್ನು ಹುಡುಕುವುದಕ್ಕಿಂತ ಮಹತ್ವದ ಹೆಜ್ಜೆ ಅಂದರೆ ಹೂಡಿಕೆಯನ್ನು ಮುಂದುವರಿಸುವುದು.

ಫ್ಲೆಕ್ಸಿಕ್ಯಾಪ್, ಸ್ಮಾಲ್‌ಕ್ಯಾಪ್‌ಗಳಿಗಿಂತ ಇವು ಉತ್ತಮವೇ?: ಈ ಪ್ರಶ್ನೆಗೆ ಉತ್ತರಿಸುವ ಮೊದಲು ಕೆಲವು ವಿಷಯಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು. ಫ್ಲೆಕ್ಸಿಕ್ಯಾಪ್ ಹಾಗೂ ಸ್ಮಾಲ್‌ಕ್ಯಾಪ್–ಮಿಡ್‌ಕ್ಯಾಪ್ ಫಂಡ್‌ಗಳೂ ಸಂಪೂರ್ಣವಾಗಿ ಈಕ್ವಿಟಿ ಆಧಾರಿತವಾದವು. ದೀರ್ಘಾವಧಿಯಲ್ಲಿ ಹೆಚ್ಚಿನ ಗಳಿಕೆಯನ್ನು ತಂದುಕೊಡುವುದು ಈ ಫಂಡ್‌ಗಳ ಉದ್ದೇಶ. ಅತ್ಯಂತ ಹೆಚ್ಚಿನ ಲಾಭ ಗಳಿಸುವ ಸಾಧ್ಯತೆಯನ್ನು ಇವು ಒದಗಿಸುತ್ತವೆ. ಜೊತೆಯಲ್ಲೇ ಅತ್ಯಂತ ಹೆಚ್ಚಿನ ಚಂಚಲತೆಯನ್ನೂ ಇವು ಒಳಗೊಂಡಿರುತ್ತವೆ. ಆದರೆ ಮಲ್ಟಿ ಅಸೆಟ್ ಫಂಡ್‌ಗಳನ್ನು ರೂಪಿಸಿರುವುದು ಬೇರೆಯದೇ ಬಗೆಯಲ್ಲಿ. ಸಂಪತ್ತು ಸೃಷ್ಟಿಯು ಸಮತೋಲನದಿಂದ ಆಗಬೇಕು, ರಿಸ್ಕ್‌ನ ಮೇಲೆ ನಿಯಂತ್ರಣ ಇರಬೇಕು ಎಂಬುದು ಇವುಗಳ ಮುಖ್ಯ ಉದ್ದೇಶ. ಹೀಗಾಗಿ ಇಲ್ಲಿ ಪ್ರಶ್ನೆ ಇರಬೇಕಾದುದು ಯಾವುದು ಉತ್ತಮ ಎಂಬುದಾಗಿ ಅಲ್ಲ. ಬದಲಿಗೆ, ಈ ಬಗೆಯ ಫಂಡ್‌ಗಳು ವಹಿಸುವ ಪಾತ್ರ ಏನು ಎಂಬುದು ಇಲ್ಲಿ ಕೇಳಬೇಕಾದ ಪ್ರಶ್ನೆ.

ಹೆಚ್ಚಿನ ರಿಸ್ಕ್ ತೆಗೆದುಕೊಳ್ಳುವ, ಹೆಚ್ಚಿನ ಅವಧಿಗೆ ಹೂಡಿಕೆ ಮಡುವ ಸಾಮರ್ಥ್ಯದ ಹೂಡಿಕೆದಾರರಿಗೆ ಸ್ಮಾಲ್‌ಕ್ಯಾಪ್ ಅಥವಾ ಫ್ಲೆಕ್ಸಿಕ್ಯಾಪ್ ಫಂಡ್‌ಗಳು ಉತ್ತಮವಾಗಬಹುದು. ಆದರೆ ಸಂಪತ್ತು ಸೃಷ್ಟಿಯ ಪಯಣವು ಹೆಚ್ಚಿನ ಏರಿಳಿತಗಳನ್ನು ಕಾಣಬಾರದು, ಹೂಡಿಕೆಯು ಒತ್ತಡ ಸೃಷ್ಟಿಸುವಂತೆ ಆಗಬಾರದು ಎನ್ನುವವರಿಗೆ ಮಲ್ಟಿ ಅಸೆಟ್ ಫಂಡ್‌ಗಳು ಹೆಚ್ಚು ಸೂಕ್ತವಾಗಬಹುದು. ಹೆಚ್ಚಿನ ಅಂಶಗಳನ್ನು ಪರಿಗಣಿಸಿ ರೂಪಿಸಿದ ಪೋರ್ಟ್‌ಫೋಲಿಯೊಗಳಲ್ಲಿ ಮಲ್ಟಿ ಅಸೆಟ್ ಫಂಡ್‌ಗಳು ಹೆಚ್ಚಿನ ಸ್ಥಿರತೆಯನ್ನು ತರುವ ಮೂಲ ಹೂಡಿಕೆಯಂತೆ ಕೆಲಸ ಮಾಡಬಹುದು. ಅಲ್ಲಿ ಶುದ್ಧ ಈಕ್ವಿಟಿ ಆಧಾರಿತ ಫಂಡ್‌ಗಳು ಹೆಚ್ಚಿನ ಬೆಳವಣಿಗೆ ತಂದುಕೊಡುವ ಹೂಡಿಕೆಗಳಾಗಿ ಕೆಲಸ ಮಾಡಬಹುದು.

ಮಲ್ಟಿ ಅಸೆಟ್ ಫಂಡ್‌ಗಳು ವೈವಿಧ್ಯ ಸಾಧಿಸಲು ವೃತ್ತಿಪರ ನೆರವು ನೀಡುತ್ತವೆ, ಮರುಹೊಂದಾಣಿಕೆಗೆ ನೆರವಾಗುತ್ತವೆ. ಚಿನ್ನ, ಬೆಳ್ಳಿ, ಷೇರುಗಳು, ಆರ್‌ಇಐಟಿಗಳಲ್ಲಿ ಪ್ರತ್ಯೇಕವಾಗಿ ನೇರವಾಗಿ ಹೂಡಿಕೆ ಮಾಡುವುದಕ್ಕಿಂತ ಮಲ್ಟಿ ಅಸೆಟ್ ಫಂಡ್‌ಗಳ ಮೂಲಕ ಹೂಡಿಕೆ ಮಾಡುವುದರಲ್ಲಿ ಸಣ್ಣ ಹೂಡಿಕೆದಾರರಿಗೆ ಹೆಚ್ಚಿನ ಅನುಕೂಲಗಳಿವೆ.

ಮಲ್ಟಿ ಅಸೆಟ್ ಫಂಡ್‌ಗಳು ಅನಿಶ್ಚಿತ ಕಾಲಕ್ಕಾಗಿನ ರಕ್ಷಣಾತ್ಮಕ ಹೂಡಿಕೆ ಆಯ್ಕೆ ಮಾತ್ರವೇ ಅಲ್ಲ. ಅವು ಪೋರ್ಟ್‌ಫೋಲಿಯೊ ರೂಪಿಸುವ ಪ್ರಕ್ರಿಯೆಯಲ್ಲಿ ಆಗಿರುವ ವಿಕಾಸವನ್ನು ಕೂಡ ಪ್ರತಿನಿಧಿಸುತ್ತವೆ. ಲಾಭ ಗಳಿಕೆ ಎಷ್ಟು ಮುಖ್ಯವೋ, ರಿಸ್ಕ್‌ಗಳನ್ನು ನಿರ್ವಹಿಸುವುದು ಕೂಡ ಅಷ್ಟೇ ಮುಖ್ಯವಾಗಿರುವ ಕಾಲಘಟ್ಟದಲ್ಲಿ ಈ ಬಗೆಯ ಫಂಡ್‌ಗಳ ಕಡೆ ಸಣ್ಣ ಹೂಡಿಕೆದಾರರು ಗಂಭೀರ ನೋಟವೊಂದನ್ನು ಹರಿಸಬೇಕಿದೆ.

ಲೇಖಕಿ ದಿ ವೆಲ್ತ್ ಕಂಪನಿ ಮ್ಯೂಚುವಲ್ ಫಂಡ್‌ನ ಈಕ್ವಿಟಿ ವಿಭಾಗದ ಮುಖ್ಯ ಹೂಡಿಕೆ ಅಧಿಕಾರಿ

ಜೆನ್ ಝೀ ತಲೆಮಾರಿನವರ ಖರೀದಿ ಪ್ರವೃತ್ತಿ ಹೇಗಿದೆ?


1997ರ ನಂತರ 2012ಕ್ಕೆ ಮೊದಲು ಜನಿಸಿದ 'ಜೆನ್ ಝೀ' ತಲೆಮಾರಿನವರು ಹಣವನ್ನು ನೋಡುವ ಬಗೆ ಹೇಗಿದೆ, ಅವರು ಯಾವ ಖರ್ಚುಗಳನ್ನು ಆದ್ಯತೆ ಎಂದು ಕಾಣುತ್ತಿದ್ದಾರೆ? ಇಂತಹ ಕೆಲವು ಪ್ರಶ್ನೆಗಳಿಗೆ ಉತ್ತರಿಸಿದೆ ಎ.ಐ ಆಧಾರಿತ ಗ್ರಾಹಕ ದತ್ತಾಂಶ ವಿಶ್ಲೇಷಣಾ ಸಂಸ್ಥೆ ಜ್ಯುಪಿಟರ್ ಮೆಟಾ ಕಂಪನಿಯ ಹರ್ಕ್ಯುಲೀಸ್ ವೇದಿಕೆ ನಡೆಸಿರುವ ಒಂದು ಅಧ್ಯಯನ

● ಜೆನ್ ಝೀ ತಲೆಮಾರಿನವರು ಪ್ರೀಮಿಯಂ ಗುಣಮಟ್ಟದ ಉತ್ಪನ್ನಗಳ ಖರೀದಿಗಾಗಿ ತಾವು ಮಾಡುವ ಖರ್ಚುಗಳು 'ದುಂದುವೆಚ್ಚ' ಎಂದು ಭಾವಿಸಿಲ್ಲ. ಪ್ರೀಮಿಯಂ ಉತ್ಪನ್ನಗಳು ತಮ್ಮ ಅಸ್ಮಿತೆಯನ್ನು ತೋರಿಸಿಕೊಳ್ಳಲು ಇರುವ ಅಗತ್ಯ ಸೌಲಭ್ಯಗಳು ಎಂದು ಅವರು ಭಾವಿಸಿದ್ದಾರೆ.







ತಂತ್ರಜ್ಞಾನಕ್ಕೆ ಸಂಬಂಧಿಸಿದ ಖರ್ಚುಗಳಿಗಾಗಿ ಜೆನ್ ಝೀ ತಲೆಮಾರಿನ ಇಷ್ಟು ಮಂದಿ ತಿಂಗಳ ಉಳಿತಾಯವನ್ನು ಕಡಿಮೆ ಮಾಡಲು ಕೂಡ ಸಿದ್ಧರಿದ್ದಾರೆ!



ಪ್ರೀಮಿಯಂ ಗುಣಮಟ್ಟದ ಹೆಡ್‌ಫೋನ್‌ಗಳು ಗೇಮಿಂಗ್ ಕನ್ಸೋಲ್‌ನಂತಹ ಎಲೆಕ್ಟ್ರಾನಿಕ್ ಉಪಕರಣ ಖರೀದಿಗೆ ಇಷ್ಟು ಮಂದಿ ತಮ್ಮ ತುರ್ತು ನಿಧಿಗೆ ಕೈಹಾಕಿದ್ದಾರೆ!



ಹಣದುಬ್ಬರ ಇದ್ದಾಗಲೂ ಇಷ್ಟು ಮಂದಿ ಎಲೆಕ್ಟ್ರಾನಿಕ್ಸ್, ಸೌಂದರ್ಯವರ್ಧಕ ಹಾಗೂ ಫ್ಯಾಷನ್ ವಸ್ತುಗಳ ಮೇಲೆ ವರ್ಷದಿಂದ ವರ್ಷಕ್ಕೆ ಹೆಚ್ಚು ಖರ್ಚು ಮಾಡಿದ್ದಾರೆ. ಇವರು ತಮ್ಮ ಉಳಿತಾಯದ ಹಣವನ್ನು ಬೇರೆಡೆ ವಿನಿಯೋಗಿಸಲು ಸಿದ್ಧರಿದ್ದಾರೆ.



ಹಣಕಾಸಿನ ಉತ್ಪನ್ನಗಳು 'ಕೈಗೆಟಕುವ' ವಸ್ತುಗಳ ವ್ಯಾಖ್ಯಾನವನ್ನೇ ಬದಲಾಯಿಸಿವೆ. ಅವುಗಳ ಒಟ್ಟು ಬೆಲೆಯನ್ನು ನೋಡುವ ಬದಲು, ತಿಂಗಳಿಗೆ ಎಷ್ಟು ಮೊತ್ತ ಪಾವತಿಸಿದರೆ ಸಾಕು ಎಂಬುದನ್ನು ನೋಡಲಾಗುತ್ತಿದೆ!

ಒಮ್ಮೆಗೇ ಹಣಕೊಟ್ಟು ತಮ್ಮಿಂದ ಖರೀದಿಸಲು ಸಾಧ್ಯವಿಲ್ಲದ ಪ್ರೀಮಿಯಂ ಉತ್ಪನ್ನಗಳನ್ನು ಖರೀದಿಸಬೇಕು ಎಂಬ ಉತ್ಸಾಹವನ್ನು ಇಎಂಐ ಆಯ್ಕೆಗಳು, 'ಈಗ ಖರೀದಿಸಿ, ಆಮೇಲೆ ಪಾವತಿಸಿ' (ಬಿಎನ್‌ಪಿಎಲ್) ಆಯ್ಕೆಗಳು ತಮಗೆ ನೀಡುತ್ತಿವೆ ಎಂದು ಇಷ್ಟು ಮಂದಿ ಗ್ರಾಹಕರು ಹೇಳುತ್ತಿದ್ದಾರೆ.



ಇಷ್ಟು ಮಂದಿ ಗ್ರಾಹಕರು ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ಖರೀದಿಸಲು ಮಾರಾಟ ಮೇಳಗಳು ಶುರುವಾಗುವವರೆಗೆ ಕಾಯುತ್ತಾರೆ.

ವರದಿಗೆ ಆಧಾರ: ಆರು ಸಾವಿರ ಮಂದಿಯಿಂದ ಪಡೆದಿರುವ ಪ್ರತಿಕ್ರಿಯೆಗಳು

ಎಸ್ಸೆಸ್ಸೆಲ್ಸಿ ಸಮಾಜ ಅಧ್ಯಯನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

Biology

ಎಸ್ಸೆಸ್ಸೆಲ್ಸಿ ದ್ವಿತೀಯ ಭಾಷೆ ಇಂಗ್ಲಿಷ್ ವ್ಯಾಕರಣ ಮಾದರಿ ಪ್ರಶ್ನೋತ್ತರಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಶಂಕರನಾರಾಯಣ್‌ರಾವ್, ನಿವೃತ್ತ ಇಂಗ್ಲಿಷ್ ಅಧ್ಯಾಪಕ

SECOND LANGUAGE- ENGLISH
ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

72) "Satish Gujral became a great artist" Support this statement mentioning a few of his achievements.

Ans : Satish Gujral became a great artist and he was one of the few artist famous for painting, sculpture and architecture. He was also a writer. His works were displayed in prestigious museums like the museum of Modern Art, New York, the Hiroshima collection, Washington and the National Gallery of Modern Art, New Delhi. He had published four books of his works in the various Arts. He was awarded the order of the crown for the best architectural design of 20th century for his design of the Belgian Embassy in New Delhi. He was humoured with "Padma vibhushan"

Read the following extracts and answer the questions that follow:

73. 'A frightful proposition, Swami thought'.

a. What was the frightful proposition?
Ans:- Swami can sleep alone in his father's office room on that night was the frightful proposition, Swami thought.

b. Who made it?
Ans:- Swami's father made it.

c. Why did Swami regard it as 'a frightful proposition' ?
Ans:- He had always slept beside his granny and any change in this arrangement kept him trembling and awake all the night. So he regarded it as a frightful proposition.

74. 'I'am new to Mumbai, but I have noticed that people here are afraid'.

a. Who is the speaker?
Ans:- Baleshwar is the speaker.

b. Why had the speaker come to Mumbai?
Ans:- The speaker Baleshwar came to Mumbai to hunt (seek) the job.

c. Why were the people afraid?
Ans:- The people were afraid because if they are getting trapped in the courts or with Police.

75. 'Tomorrow morning we perform for the boy-yes?' he said.

a. Who is the speaker?
Ans:- Ustad Sahib or Ustad Allah Rakha is the speaker.

b. Who is the 'boy' here?
Ans:- Here the boy is Ananth, the sick boy.

c. Why would they perform for the boy?
Ans:- They would perform for the boy because he was in death-bed and this was his lost desire.

76. 'We were crowded in the cabin' Nota soul would dare to sleep'.

a. Who does the word 'we' refer to here?
Ans: Here we means all the Sailors in the Ship.

b. Why were they crowded in the cabin?
Ans: They were crowded in the Cabin because the ship was cought by the storm.

c. Not a soul would dare to sleep' – why was it so?
Ans: Because all were frightened so much what would happen next, they don't know. The hungry sea was roaring like a hungry lion.

X. Quote from memory :
77. The throned monarch ....
....
.... fear of kings.
OR
My day or night ....
....
.... always day.

Ans. :
The throned monarch better than his crown,
His sceptre shows the force of temporal power,
The attribute to awe and majesty,
Wherein doth sit the dread and fear of kings.
OR
My day or night myself I make,
When'ver I sleep or play ;
And could I ever keep awake
With me 'twere always day.

Read the passage and answer the Question (78-81)

(A) Charlie Chaplin (Charles spencer chaplin) was born on 16th April at Kennington in London. At an early age, Charlie performed on stage with his father and brother, Sydney . By the age of eighth, charlie chaplin was already a seasoned stage performer. His skill as a comedian developed under the guidance of Fred Karno.

78. Who is the paragraph about ?
79. Which sentence in the paragraph suggests that he was born in a family of actors. Write that sentence
80. Charlie Chaplin was a great comedian (true/false) tick the right one
81. Who was his tutor in the art of acting ?

Answer

78. Who is the paragraph about?
Ans: The paragraph describes about charley Chaplin (Charles spencerchaplin)

79. Which sentence in the paragraph suggests that he was born in a family of actors. Write that sentence.
Ans : At an early age, Charlie performed stage with his father and brother.'

80. Charlie Chaplin was a great comedian (true/false) tick the right one.
Ans : true.

81. Who was his tutor in the art of acting ?
Ans : Fred karno was the tutor of Charlie Chaplin in the art if acting. (Contd…….)


REVISION : MODEL QUESTIONS

44). What are homologous organs? Give example.
Ans: Organs having a similar structure and origin but perform different functions are called homologous organs.
Example in plants :- The thorns of Bougainvillea and tendrils of cucurbita are thom axillary bud but performs different functions,
Example in animals: The fore limbs of whales, bats, cheetah and human.

45). Mention the four barriers of innate immunity with an example for each.
Ans.(1) **Physical barrier**: Eg: Skin/Mucuscoating of epithelum lining of the respiratory ete.
(2) **Physiological barriers:** Eg: Acid in stomach/saliva in the mouth/tears from eyes.
(3) **Cellular barrier** Eg: Leukocytes (WBC) / Natural killes cells/Macrophages,
(4) **Cytokine barrier**: Eg: Interferons.

46). Describe the structure of DNA with a neat labelled diagram.
Ans:- James D. Watson and F.H.C. Crick proposed the Double helix model of DNA in 1953.

According to which the DNA molecule is composed of 2 polynucleotide strands running anti parallel to each other. They are inter twined like a twisted ladder and each strand is helically coiled to the other. The outer edge of the helix is made up of deoxyribose and phosphate molecules all along. This becomes the back bone of the helix comparable to the limb of a ladder. The nitrogen bases of both the strands face each other and is arranged at right angles to the backbone similar to the steps of a ladder. There is a specific pairing of nitrogen bases. A specific purine pairs with a specific pyrimidine. Adenine pairs with Thymine with two hydrogen bonds (A=T) whereas Guanine pairs with Cytosine with 3 hydrogen bonds (G ≡ C).



This specific base pairing is called complementary base pairing. The stability of the helix is due to the interaction between hydrophobic base pairs. Hence, the two polynucleotide strands are complementary to each other. According to Watson and Crick, the DNA helix has a diameter of 20 Å. The helix makes one complete turn at every 34 Å along its length containing 10 nucleotides. Therefore, the distance between 2 nucleotides in a helix is 3.4 Å. The length of the DNA molecule varies from chromosome to chromosome and species to species If the double helix is coiled in a right handed direction it is B – DNA and if the double helix is coiled in a left handed direction it is Z – DNA. The Z – DNA is 18 – 19 Å in width & is rich in the base pairs G ≡ C.

47) Write a short note on Neanderthal man.
Ans:- A Neanderthal man, scientifically known as "Homo neanderthalensis," was an extinct human species that lived in Europe and parts of Western Asia between 400,000 and 40,000 years ago. They were characterized by a robust build with short limbs, large brains comparable to modern humans, prominent brow ridges, and a receding forehead, likely adaptations to cold climates. Neanderthals were skilled hunters, using sophisticated stone tools, and exhibited complex social behaviors including the burial of their dead, suggesting a level of symbolic thought. Their name comes from the Neander Valley in Germany where the first Neanderthal fossils were discovered.

<u>**Key characteristics of Neanderthals**</u>:

Physical features: Stocky body with short limbs, large nose, prominent brow ridge, receding forehead, large cranial capacity (brain size similar to modern humans).

Habitat: Primarily lived in cold regions of Europe and Western Asia.

Diet: Primarily meat from hunting large animals, supplemented with plants and possibly some shellfish.

Tool use: Developed complex stone tools, including "Mousterian" technology.

Social behavior: Evidence of burial practices with grave goods, suggesting symbolic thought and potential ritualistic behavior.

‘ಹಿಮೋಫಿಲಿಯಾ ಚಿಕಿತ್ಸೆ, ಔಷಧಕ್ಕೆ ₹50 ಕೋಟಿ’

ಕುಸುಮ ಸಂಜೀವಿನಿ ರೋಗ ನಿರೋಧಕ ಚಿಕಿತ್ಸೆ, 108 ಆಂಬುಲೆನ್ಸ್ ಸೇವೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಮೋಫಿಲಿಯಾ ರೋಗಿಗಳ ಚಿಕಿತ್ಸೆ ಹಾಗೂ ಔಷಧಕ್ಕಾಗಿ ಸರ್ಕಾರದಲ್ಲಿ ಹಣಕಾಸು ಕೊರತೆಯಿಲ್ಲ. ಇದಕ್ಕಾಗಿ ₹50 ಕೋಟಿ ಮೀಸಲಿಡಲಾಗುವುದು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ನಗರದ ನೆಹರು ತಾರಾಲಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ‘ಕುಸುಮ ಸಂಜೀವಿನಿ’ ಯೋಜನೆಯಡಿ ಹಿಮೋಫಿಲಿಯಾ ರೋಗಿಗಳಿಗೆ ರೋಗ ನಿರೋಧಕ ಚಿಕಿತ್ಸೆ ಹಾಗೂ 108 ಆಂಬುಲೆನ್ಸ್ ಸೇವೆಗಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

‘ಈ ಯೋಜನೆಯಡಿ ಹಿಮೋಫಿಲಿಯಾ ರೋಗಿಗಳ ಚಿಕಿತ್ಸೆಗೆ 2017ರಲ್ಲಿ ನಮ್ಮದೇ ಸರ್ಕಾರ ಒತ್ತು ನೀಡಿತ್ತು. ಈ ಯೋಜನೆಗೆ ಸರ್ಕಾರದಿಂದ ₹42.55 ಕೋಟಿ ಮೀಸಲಿಡಲಾಗಿದ್ದು, ಔಷಧಕ್ಕಾಗಿಯೇ ₹17 ಕೋಟಿ ಇರಿಸಲಾಗಿದೆ. ಇದನ್ನು ಹೆಚ್ಚಿಸುವುದಕ್ಕೆ ಸಿದ್ಧರಿದ್ದೇವೆ’ ಎಂದು ಹೇಳಿದರು.

ಮುಖ್ಯಾಂಶಗಳು

- ಕರ್ನಾಟಕದಲ್ಲಿ 2,621 ಹಿಮೋಫಿಲಿಯಾ ರೋಗಿಗಳು
- ಒಬ್ಬರಿಗೆ ವಾರ್ಷಿಕ ₹5 ಲಕ್ಷ ವೆಚ್ಚ

‘ಕರ್ನಾಟಕದಲ್ಲಿ 2,621 ಮಂದಿ ಹಿಮೋಫಿಲಿಯಾ ರೋಗಿಗಳಿದ್ದು, ಪ್ರತಿ ವರ್ಷ ಒಬ್ಬರಿಗೆ ₹5 ಲಕ್ಷ ವೆಚ್ಚ ಮಾಡಬೇಕಾಗುತ್ತದೆ. ಇದರಿಂದ ರೋಗಿಗಳಿಗೆ ಅಗತ್ಯ ಚಿಕಿತ್ಸೆ, ಔಷಧ ಕೊಡಿಸಲು ಆರೋಗ್ಯ ಇಲಾಖೆ ಸೇವೆಗಳನ್ನು ವಿಸ್ತರಿಸುತ್ತಿದೆ. 36 ಕೇಂದ್ರಗಳಿಗೆ ಹೋಗಿ ಬರಲು ಉಚಿತ ಆಂಬುಲೆನ್ಸ್ ಸೇವೆಯನ್ನೂ ಆರಂಭಿಸಿದ್ದೇವೆ. ರೋಗ ನಿರೋಧಕ ಚುಚ್ಚುಮದ್ದು ಕೂಡ ಬಂದಿರುವುದು ಪರಿಸ್ಥಿತಿ ಸುಧಾರಿಸಲಿದೆ’ ಎಂದು ತಿಳಿಸಿದರು.

> **ಹಿಮೋಫಿಲಿಯಾ ರೋಗಿಗಳಲ್ಲಿ ರಕ್ತ ಹೆಪ್ಪುಗಟ್ಟುವ ಪ್ರೊಟೀನ್ ಕೊರತೆ ಇರುತ್ತದೆ. ಸರ್ಕಾರ ಇವರಿಗೆ ಆರೋಗ್ಯ ಸೇವೆ ಜತೆಗೆ ಆರ್ಥಿಕ ಬೆಂಬಲವನ್ನೂ ನೀಡಬೇಕು**
> **ಡಾ.ಸುರೇಶ್ ಹನಗವಾಡಿ,** ಅಧ್ಯಕ್ಷ, ಕರ್ನಾಟಕ ಹಿಮೋಫಿಲಿಯಾ ಸೊಸೈಟಿ

ಆತ್ಮವಿಶ್ವಾಸ ಕಳೆದುಕೊಳ್ಳದಿರಿ: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ‘ಹಿಮೋಫಿಲಿಯಾ ಹಾಗೂ ಇತರೇ ಅಪರೂಪದ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳ ಜೊತೆ ಕಾಂಗ್ರೆಸ್ ಸರ್ಕಾರ ನಿಲ್ಲುತ್ತದೆ. ಹಣದ ಬಗ್ಗೆ ಚಿಂತೆ ಮಾಡಬೇಡಿ. ಆದರೆ ಯಾರೂ ಸಹ ಆತ್ಮವಿಶ್ವಾಸ ಕಳೆದುಕೊಳ್ಳಬೇಡಿ. ಇಡೀ ದೇಶದಲ್ಲಿ ನಾವು ಮೊದಲ ಬಾರಿಗೆ ಸಹಾಯಹಸ್ತ ಚಾಚಿದ್ದೇವೆ’ ಎಂದು ಹೇಳಿದರು.

‘ಪ್ರಪಂಚದ ಯಾವುದೇ ದೇಶಕ್ಕೆ ಹೋದರು ನಮ್ಮ ಕರ್ನಾಟಕದ ವೈದ್ಯರು ಅತ್ಯುತ್ತಮ ಸೇವೆ ಸಲ್ಲಿಸುತ್ತಿದ್ದಾರೆ. ಇಡೀ ದೇಶದಲ್ಲಿಯೇ ಕರ್ನಾಟಕ ಅನೇಕ ಕ್ಷೇತ್ರಗಳಲ್ಲಿ ಮುಂದಿದೆ. ಐದು ಗ್ಯಾರಂಟಿಗಳ ಮೂಲಕ ಪ್ರತಿ ಕುಟುಂಬಕ್ಕೆ ₹5 ಸಾವಿರ ಉಳಿತಾಯ ಮಾಡುತ್ತಿದೆ. ಸರ್ಕಾರಕ್ಕೆ ಹೊರೆ ಆಗುತ್ತಿದ್ದರೂ ಜನರ ಮೇಲಿರುವ ಆರ್ಥಿಕ, ಮಾನಸಿಕ ಒತ್ತಡ ಕಡಿಮೆ ಮಾಡಲು ಬೆಂಬಲ ನೀಡುತ್ತೇವೆ’ ಎಂದರು.

ಎನ್‌ಎಚ್‌ಎಂ ನಿರ್ದೇಶಕ ಡಾ.ಅವಿನಾಶ್ ಮೆನನ್ ರಾಜೇಂದ್ರನ್, ನಿರ್ದೇಶಕ ಡಾ.ವಸಂತಕುಮಾರ್, ಉಪನಿರ್ದೇಶಕರಾದ ಡಾ.ಶಕೀಲ, ಡಾ.ರಾಧಾಕೃಷ್ಣ, ಬೆಂಗಳೂರು ಹಿಮೋಫಿಲಿಯಾ ಸೊಸೈಟಿ ಕಾರ್ಯದರ್ಶಿ ಪ್ರೇಮರೂಪ ಆಳ್ವ ಉಪಸ್ಥಿತರಿದ್ದರು.


ಕಾರ್ಯಕ್ರಮದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಡಾ. ಸುರೇಶ್ ಹನಗವಾಡಿ, ಪ್ರೇಮರೂಪ ಆಳ್ವ ಇದ್ದರು

ಡಿಕೆಶಿ ಸಿಎಂ ಘೋಷಣೆ

ಆರೋಗ್ಯ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮದಲ್ಲೂ ‘ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಲಿ’ ಎಂದು ಘೋಷಣೆ ಹಾಕಿದ ಘಟನೆ ನಡೆಯಿತು.

ಶಿವಕುಮಾರ್ ಅವರು ಮಾತನಾಡುವಾಗ, ‘ಕಾರ್ಯಕ್ರಮದಲ್ಲಿ ಕೊಂಚ ನಿದ್ದೆ ಬಂದಿತ್ತು’ ಎಂದು ಪ್ರಸ್ತಾಪಿಸಿದರು. ‘ನೀವು ಮುಖ್ಯಮಂತ್ರಿಯಾಗುವವರೆಗೂ ನಿದ್ರೆ ಮಾಡಲು ಬಿಡುವುದಿಲ್ಲ’ ಎಂದು ಕೆಲವರು ಹೇಳಿದರು.

‘ಆಯ್ತು ಸುಮ್ಮನೇ ಕುಳಿತುಕೊಳ್ಳಿ’ ಎಂದು ಗದರಿಸಿದ ಡಿಕೆಶಿ, ‘ಜನರು ಎದ್ದುನಿಂತು ಚಪ್ಪಾಳೆ ಹೊಡೆಯಬೇಡಿ. ಬದಲಾಗಿ ಮತ್ತೆ ಇದೇ ಸರ್ಕಾರ ಅಧಿಕಾರಕ್ಕೆ ಬರಲಿ ಎಂದು ಆಶೀರ್ವದಿಸಿ. ಆಗ ಇನ್ನೂ ಹೆಚ್ಚಿನ ಸೇವೆ ಮಾಡುತ್ತೇವೆ’ ಎಂದರು.

ಬಂತು ಹೊಸ ಚುಚ್ಚುಮದ್ದು

ಹಿಮೋಫಿಲಿಯಾದಿಂದ ಬಳಲುತ್ತಿರುವವರಿಗೆಂದೇ ರೋಗ ನಿರೋಧಕ ಚುಚ್ಚುಮದ್ದನ್ನು ಬಿಡುಗಡೆ ಮಾಡಲಾಗಿದೆ.

ರಕ್ತಸ್ರಾವ ತಡೆಗಟ್ಟಲು ನಾನ್ ಫ್ಯಾಕ್ಟರ್ ಮಾನೊಕ್ಲೊನೆಲ್ ಪ್ರತಿಕಾಯ ಔಷಧ ಎಮಿಝುಮಾಬ್ ಬಳಲಾಗುತ್ತದೆ. ರೋಷೆ ಸಂಸ್ಥೆ ಇದನ್ನು ಅಭಿವೃದ್ಧಿಪಡಿಸಿದೆ. ‘200 ರೋಗಿಗಳಿಗೆ ಇದನ್ನು ಪ್ರಾಯೋಗಿಕ ಬಳಕೆ ಮಾಡಲಾಗಿದ್ದು, ಒಂದು ವರ್ಷದಲ್ಲಿ ಶೂನ್ಯ ರಕ್ತಸ್ರಾವದೊಂದಿಗೆ ಉತ್ತಮ ಫಲಿತಾಂಶವೂ ಬಂದಿದೆ. ತಾಂತ್ರಿಕ ಸಮಿತಿಯ ಶಿಫಾರಸಿನ ಮೇರೆಗೆ ಇದನ್ನು ರಾಜ್ಯದಾದ್ಯಂತ ವಿಸ್ತರಣೆ ಮಾಡಲಾಗುತ್ತದೆ. ಇದರಿಂದ ರಕ್ತ ಸೋರಿಕೆ ತಗ್ಗಿ ಚಿಕಿತ್ಸೆ ಪ್ರಮಾಣವೂ ಕಡಿಮೆಯಾಗಲಿದೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಉರ್ದು ಭಾಷೆಯ ಆಹ್ವಾನ ಪತ್ರಿಕೆ: ಆರೋಗ್ಯ ಇಲಾಖೆ ಕ್ರಮಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆ ಆಯೋಜಿಸಿದ್ದ ಹಿಮೋಫಿಲಿಯಾ ಕುರಿತ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ಉರ್ದು ಭಾಷೆಯಲ್ಲೂ ಮುದ್ರಿಸಿದ ಬಗ್ಗೆ ಆಕ್ಷೇಪ ವ್ಯಕ್ತವಾಯಿತು.

‘ಕನ್ನಡ ಹೊರತುಪಡಿಸಿ ಇತರೆ ಭಾಷೆಗಳಲ್ಲಿ ಆಹ್ವಾನ ಪತ್ರಿಕೆ ಮುದ್ರಿಸುತ್ತಾ ಹೋಗುವುದು ಸರಿಯಲ್ಲ. ಕನ್ನಡಕ್ಕೆ ಮೊದಲ ಆದ್ಯತೆಯನ್ನು ಕರ್ನಾಟಕದಲ್ಲಿ ನೀಡಬೇಕು’ ಎಂದು ಕನ್ನಡಪರ ಹೋರಾಟಗಾರರು ಒತ್ತಾಯಿಸಿದರು.

ಬಿಜೆಪಿ ಟೀಕೆ: ‘ಓಲೈಕೆ ರಾಜಕಾರಣಕ್ಕಾಗಿ ಕನ್ನಡವನ್ನು ನಾಡದ್ರೋಹಿ ಕಾಂಗ್ರೆಸ್ ಸರ್ಕಾರ ಕಡೆಗಣಿಸುತ್ತಿದೆ. ರೋಗ ನಿರೋಧಕ ಚಿಕಿತ್ಸೆ, ಆಂಬುಲೆನ್ಸ್‌ಗೆ ಚಾಲನೆ ನೀಡಬೇಕಾಗಿದ್ದ ಆಹ್ವಾನ ಪತ್ರಿಕೆಯನ್ನು ಸಂಪೂರ್ಣ ಉರ್ದುವಿನಲ್ಲಿ ಪ್ರಕಟಿಸಿದೆ’ ಎಂದು ಕರ್ನಾಟಕ ಬಿಜೆಪಿ ಘಟಕ ‘ಎಕ್ಸ್’ ಪೋಸ್ಟ್ ಮೂಲಕ ಟೀಕಿಸಿದೆ.

‘ಸಿಎಂ, ಡಿಸಿಎಂ ಅವರೇ, ಕರ್ನಾಟಕದ ಆಡಳಿತ ಭಾಷೆ ಕನ್ನಡವೋ ಅಥವಾ ಉರ್ದುವೋ, ದಿನೇಶ್ ಗುಂಡೂರಾವ್ ಅವರ ಮನೆಯಲ್ಲಿ ನೀವು ಉರ್ದು ಮಾತನಾಡುತ್ತಾರೆ ಎಂಬ ಕಾರಣಕ್ಕೆ ಸರ್ಕಾರದ ಅಧಿಕೃತ ಆಹ್ವಾನ ಪತ್ರಿಕೆಯನ್ನು ಉರ್ದುವಿನಲ್ಲಿ ಪ್ರಕಟಿಸಲು ಅಧಿಕಾರ ಕೊಟ್ಟವರಾರು’ ಎಂದಿದೆ.

ದಿನೇಶ್ ಪ್ರತ್ಯುತ್ತರ: ‘ಅಧಿಕೃತ ಆಮಂತ್ರಣ ಪತ್ರಿಕೆಗೂ ಮತ್ತು ಪತ್ರಿಕಾ ಜಾಹೀರಾತಿಗೂ ವ್ಯತ್ಯಾಸ ತಿಳಿಯದಷ್ಟು ಬಿಜೆಪಿ ನಾಯಕರ ಬುದ್ಧಿ ಮಂಕಾಗಿದೆಯೇ? ಅಥವಾ ಜನರನ್ನು ದಾರಿ ತಪ್ಪಿಸಲೇಬೇಕು ಎನ್ನುವ ಹಠಕ್ಕೆ ಬಿದ್ದಿದ್ದೀರಾ?’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ‘ಎಕ್ಸ್’ ಮೂಲಕವೇ ಪ್ರತ್ಯುತ್ತರ ನೀಡಿದರು. ‘ಜಾಹೀರಾತು ಹಿಡಿದು ನಾಡದ್ರೋಹಿ ಎಂದು ಬೊಬ್ಬೆ ಹೊಡೆಯುತ್ತಿರುವ ಬಿಜೆಪಿಗರು ವಿಶ್ವ ಗುರು ಫೋಟೊ ಸೇರಿಸಿ ನಿಮ್ಮದೇ ಅಧಿಕಾರಾವಧಿಯ ಎಷ್ಟು ಜಾಹೀರಾತು ನೀಡಿದ್ದೀರಿ ಅಂತ ಒಮ್ಮೆ ತಿರುಗಿ ನೋಡಲಿ’ ಎಂದು ಟೀಕಿಸಿದ್ದಾರೆ

‘ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಅವರು ಅಧಿಕಾರದಲ್ಲಿದ್ದಾಗ ಉರ್ದು ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟವಾಗಿದ್ದವು. ಅವರೂ ನಾಡದ್ರೋಹಿಗಳಾ, ಯಾವುದೇ ಆಮಂತ್ರಣ ಪತ್ರಿಕೆ ಉರ್ದುವಿನಲ್ಲಿಲ್ಲ; ಆಯಾ ಭಾಷೆಯ ಓದುಗರಿಗೆ ಮಾಹಿತಿ ತಲುಪಿಸಲು ಪತ್ರಿಕೆಗಳ ಭಾಷೆಯಲ್ಲೇ ಜಾಹೀರಾತು ನೀಡುವುದು ಆಡಳಿತದ ಸಾಮಾನ್ಯ ಪ್ರಕ್ರಿಯೆ’ ಎಂದು ಉತ್ತರಿಸಿದ್ದಾರೆ.

> **ಉರ್ದು ಪತ್ರಿಕೆಗಳಿಗೂ ಜಾಹೀರಾತು ಕೊಡಬೇಕಲ್ಲವೇ? ಆಗ ಅದು ಉರ್ದು ಭಾಷೆಯಲ್ಲೇ ಇರಬೇಕಲ್ಲವೇ?**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಪಿಜಿ ಮೆಡಿಕಲ್: ಫಲಿತಾಂಶ ಪ್ರಕಟ

ಬೆಂಗಳೂರು: ಸ್ನಾತಕೋತ್ತರ ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ಸಂಬಂಧಿಸಿದಂತೆ 3ನೇ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ಸೇವಾ ನಿರತ ಮತ್ತು ಸೇವಾ ನಿರತರಲ್ಲದ ಅಭ್ಯರ್ಥಿಗಳ ಸೀಟು ಹಂಚಿಕೆಯ ಫಲಿತಾಂಶ ಇದಾಗಿದೆ. ಅಂತಿಮ ಫಲಿತಾಂಶವನ್ನು ಫೆ.26 ರಂದು ಪ್ರಕಟಿಸಲಿದೆ ಎಂದು ಪ್ರಾಧಿಕಾರದ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸೀಟು ಹಂಚಿಕೆಯಾದವರು ಮಾರ್ಚ್ 3ರೊಳಗೆ ಶುಲ್ಕ ಪಾವತಿಸಿ, ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳಬೇಕು. ಮಾರ್ಚ್ 4ರೊಳಗೆ ಸಂಬಂಧಪಟ್ಟ ಕಾಲೇಜುಗಳಲ್ಲಿ ವರದಿ ಮಾಡಿಕೊಳ್ಳಬೇಕು ಎಂದು ಅವರು ತಿಳಿಸಿದ್ದಾರೆ.

ಸಿ.ಎಂ.ಇಬ್ರಾಹಿಂ ವಿರುದ್ಧ ಎಫ್‌ಐಆರ್

ಬೆಂಗಳೂರು: ಅತಿಕ್ರಮವಾಗಿ ಪ್ರವೇಶಿಸಿ, ನಿರ್ಮಾಣ ಹಂತದ ಕಟ್ಟಡ ತೆರವು ಪ್ರಕರಣದಲ್ಲಿ ಮಾಜಿ ಸಚಿವ ಸಿ.ಎಂ.ಇಬ್ರಾಹಿಂ ಅವರ ವಿರುದ್ಧ ಗೋವಿಂದಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಉಮರ್ ನಗರದ ಮಹಮ್ಮದ್ ಇಮಾಮ್ ಸಾಹೇಬ್ ಅವರು ನೀಡಿದ ದೂರಿನ ಮೇರೆಗೆ ಸಿ.ಎಂ.ಇಬ್ರಾಹಿಂ ಹಾಗೂ ದಿ ಮ್ಯಾನೇಜ್‌ಮೆಂಟ್ ಆಫ್ ಎಚ್‌ಕೆಬಿಕೆ ಕಾಲೇಜು ಆಡಳಿತ ಮಂಡಳಿಯ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ಹೇಳಿದರು.

ನಾಗವಾರದ ಸರ್ವೆ ನಂಬರ್ 23/3, 23/4ರಲ್ಲಿ ನಿವೇಶನ ಸಂಖ್ಯೆ 64, 65, 66ರಲ್ಲಿ ಸ್ವತ್ತನ್ನು ದೂರುದಾರರು ಖರೀದಿಸಿದ್ದರು. ತಮ್ಮ ಸ್ವಾಧೀನ ಅನುಭವದಲ್ಲಿ ಇಟ್ಟುಕೊಂಡಿದ್ದರು. ಮಹಮ್ಮದ್ ಇಮಾಮ್ ಸಾಹೇಬ್ ಅವರ ಸ್ವತ್ತಿಗೆ ಆರೋಪಿಗಳು ಅತಿಕ್ರಮ ಪ್ರವೇಶ ಮಾಡಿ, ನಿರ್ಮಾಣ ಹಂತದ ಕಟ್ಟಡವನ್ನು ಕೆಡವಿದ್ದರು’ ಎಂದು ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲು ಮಾಡಲಾಗಿದೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ನಿರಾವಲಂಬಿಯಾದ ತತ್ತ್ವ ಪ್ರತಿಪಾದನೆ ಮಡದಿಯಿಲ್ಲದೆ ಮಾಡಲೆಳಸುವ ಮಧುಚಂದ್ರಕ್ಕೆ ಸಮ.

-ಕೆ.ಎಸ್. ನಿಸಾರ್ ಅಹಮದ್

ಸಂಪಾದಕೀಯ

ಯುವಜನರ ದನಿ ನಿರ್ಲಕ್ಷಿಸದಿರಿ ದುಡಿಯುವ ಕೈಗೆ ಕೆಲಸ ಕೊಡಿ

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆ ಹೊರಡಿಸುವಂತೆ ‘ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘಟನೆ’ (ಅಕ್ಸಾ) ಫೆ. 24ರಂದು ಧಾರವಾಡದಲ್ಲಿ ನಡೆಸಿದ ಬೃಹತ್ ಪ್ರತಿಭಟನೆ, ಯುವಜನರ ಉದ್ಯೋಗದ ನಿರೀಕ್ಷೆಗಳಿಗೆ ಸ್ಪಂದಿಸದಿರುವ ರಾಜ್ಯ ಸರ್ಕಾರದ ವೈಫಲ್ಯಕ್ಕೆ ಹಿಡಿದಿರುವ ಕನ್ನಡಿಯಾಗಿದೆ. ಸಾವಿರಾರು ಉದ್ಯೋಗಾಕಾಂಕ್ಷಿಗಳು ನಡೆಸಿದ ಪ್ರತಿಭಟನೆ, ಈ ಹೊತ್ತಿನ ಬಹು ಮುಖ್ಯ ಸಮಸ್ಯೆಯೊಂದರ ಬಗ್ಗೆ ಯುವಜನ ಜಾಗೃತಗೊಂಡಿರುವುದರ ಸಂಕೇತವಾಗಿದೆ. ಅದು ಏಕಾಏಕಿ ರೂಪುಗೊಂಡ ವಿದ್ಯಮಾನವಾಗಿರದೆ, ಕಳೆದ ಆರು ತಿಂಗಳಿನಿಂದಲೂ ಹೊಗೆಯಾಡುತ್ತಿದ್ದ ಅಸಮಾಧಾನದ ವ್ಯಕ್ತರೂಪವಾಗಿದೆ. ಖಾಲಿ ಹುದ್ದೆಗಳನ್ನು ತುಂಬುವಂತೆ ಒತ್ತಾಯಿಸಿ ವಿದ್ಯಾರ್ಥಿಗಳು, ಯುವಜನರು ಕಳೆದ ಸೆಪ್ಟೆಂಬರ್, ಅಕ್ಟೋಬರ್‌ನಲ್ಲಿಯೂ ಪ್ರತಿಭಟನೆ ನಡೆಸಿದ್ದರು. ಆ ಪ್ರತಿಭಟನೆಯ ಸೊಲ್ಲು ಈಗ ಮತ್ತಷ್ಟು ಬಲವಾಗಿದೆ. 50 ಸಾವಿರ ಹುದ್ದೆಗಳ ನೇಮಕಾತಿಗೆ ಹಣಕಾಸು ಇಲಾಖೆ ಅನುಮೋದನೆ ನೀಡಿದ್ದು, ಸರ್ಕಾರ ಅಧಿಸೂಚನೆ ಹೊರಡಿಸದಿದ್ದರೆ ಬೆಂಗಳೂರಿಗೆ ಪಾದಯಾತ್ರೆ ಹಮ್ಮಿಕೊಳ್ಳುತ್ತೇವೆ ಎಂದು ‘ಅಕ್ಸಾ’ ಅಧ್ಯಕ್ಷ ಕಾಂತಕುಮಾರ್ ಹೇಳಿದ್ದಾರೆ. ‘ಭ್ರಷ್ಟಾಚಾರ ಮುಕ್ತವಾಗಿ ನೇಮಕಾತಿ ನಡೆಸಿ’, ‘ಯುವಜನರಿಗೆ ಕೆಲಸ ಕೊಡಿ’ ಎನ್ನುವ ಉದ್ಯೋಗಾಕಾಂಕ್ಷಿಗಳ ಬೇಡಿಕೆ ಮತ್ತಷ್ಟು ದೊಡ್ಡದಾಗುವ ಮುನ್ನ ಸರ್ಕಾರ ಎಚ್ಚರಗೊಳ್ಳಬೇಕಾಗಿದೆ. ನಾಡಿನ ಎಲ್ಲ ಭಾಗಗಳ ನಿರುದ್ಯೋಗಿ ಯುವಜನರ ಸಂಕಟ ಹಾಗೂ ಹತಾಶೆಯ ರೂಪದಲ್ಲಿ ನೋಡಬಹುದಾದ ಪ್ರತಿಭಟನೆಯನ್ನು ಸರ್ಕಾರ ಇನ್ನಾದರೂ ಗಂಭೀರವಾಗಿ ಪರಿಗಣಿಸಬೇಕಾಗಿದೆ.



ಖಾಲಿ ಹುದ್ದೆಗಳನ್ನು ತುಂಬುವಲ್ಲಿನ ಸರ್ಕಾರದ ವಿಳಂಬ ತಂತ್ರ ಉದ್ಯೋಗಾಕಾಂಕ್ಷಿಗಳಿಗೆ ಎಸಗುವ ವಂಚನೆ. ಯುವಜನರಿಗೆ ಉದ್ಯೋಗ ನೀಡುವುದಕ್ಕಿಂತಲೂ ಮಿಗಿಲಾದ ‘ಗ್ಯಾರಂಟಿ’ ಮತ್ತೊಂದಿಲ್ಲ.

ಶಾಲಾ ಶಿಕ್ಷಣ ಇಲಾಖೆಯಲ್ಲಿನ 79,694 ಹುದ್ದೆಗಳು ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಖಾಲಿ ಉಳಿದಿರುವ ಒಟ್ಟು 2,84,881 ಹುದ್ದೆಗಳನ್ನು ಸರ್ಕಾರ ತುಂಬಬೇಕಾಗಿದೆ. ಈ ಹುದ್ದೆಗಳನ್ನು ವರ್ಷಗಟ್ಟಲೆ ತುಂಬದೆ ಉಳಿಸಿಕೊಂಡಿರುವ ಸರ್ಕಾರದ ಧೋರಣೆಯು ಯುವಜನರನ್ನು ಉದ್ಯೋಗದ ಹಕ್ಕಿನಿಂದ ವಂಚಿಸಿದೆ ಹಾಗೂ ಆಡಳಿತಯಂತ್ರ ದುರ್ಬಲಗೊಳ್ಳಲು ಕಾರಣವಾಗಿದೆ. ವಿವಿಧ ಇಲಾಖೆಗಳಲ್ಲಿ ಖಾಲಿ ಉಳಿದಿರುವ ಹುದ್ದೆಗಳ ಆಧಾರದಲ್ಲಿ, ಆ ಇಲಾಖೆ ಎಷ್ಟರಮಟ್ಟಿಗೆ ದುರ್ಬಲಗೊಂಡಿರಬಹುದು ಎನ್ನುವುದನ್ನು ಊಹಿಸಬಹುದಾಗಿದೆ. ವೆಚ್ಚವನ್ನು ತಗ್ಗಿಸಿಕೊಳ್ಳುವ ಉದ್ದೇಶದಿಂದ ಸರ್ಕಾರ ಇತ್ತೀಚಿನ ವರ್ಷಗಳಲ್ಲಿ ಹುದ್ದೆಗಳ ಸಂಖ್ಯೆಯನ್ನು ಕಡಿಮೆ ಮಾಡಿದೆ ಹಾಗೂ ಖಾಲಿ ಇರುವ ಹುದ್ದೆಗಳನ್ನು ತುಂಬಲು ಉತ್ಸುಕವಾಗಿಲ್ಲ. ‘ಗ್ಯಾರಂಟಿ ಯೋಜನೆ’ಗಳ ಮೂಲಕ ನಾಡಿನ ಜನರ ಬದುಕಿನಲ್ಲಿ ಬದಲಾವಣೆ ತಂದಿರುವುದಾಗಿ ಬಿಂಬಿಸಿಕೊಳ್ಳುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ತನ್ನನ್ನು ‘ಗ್ಯಾರಂಟಿ ಸರ್ಕಾರ’ ಎಂದೂ ಕರೆದುಕೊಳ್ಳುತ್ತಿದೆ. ಸರ್ಕಾರದ ಗ್ಯಾರಂಟಿಗಳಲ್ಲಿ ನಿರುದ್ಯೋಗ ಭತ್ಯೆ ನೀಡುವ ‘ಯುವನಿಧಿ’ಯೂ ಒಂದಾಗಿದೆ. ಆದರೆ, ಗ್ಯಾರಂಟಿ ಯೋಜನೆಗಳ ಬದಲಾವಣೆ ದೀರ್ಘವಾದುದಲ್ಲ ಹಾಗೂ ಆ ಯೋಜನೆಗಳು ಶಾಶ್ವತ ಫಲಿತಾಂಶವನ್ನೂ ನೀಡಲಾರವು. ಬದಲಾವಣೆ ಶಾಶ್ವತವಾಗಿ ಉಳಿಯಬೇಕಾದರೆ ಯುವಜನರಿಗೆ ಉದ್ಯೋಗ ನೀಡುವುದು ಅಗತ್ಯ ಎನ್ನುವುದನ್ನು ಸರ್ಕಾರ ಮರೆಯಬಾರದು. ಒಂದು ಉದ್ಯೋಗ ಇಡೀ ಕುಟುಂಬದ ದಿಕ್ಕುದೆಸೆ ಬದಲಿಸುವ ಸಾಮರ್ಥ್ಯ ಹೊಂದಿರುತ್ತದೆ. ಉದ್ಯೋಗಾಕಾಂಕ್ಷಿಗಳ ಪ್ರತಿಭಟನೆಯನ್ನು ಪೊಲೀಸರ ಮೂಲಕ ಹತ್ತಿಕ್ಕುವ ಪ್ರಯತ್ನವೂ ನಡೆದಂತಿದೆ. ಇಂಥ ಅಸೂಕ್ಷ್ಮ ನಡವಳಿಕೆ ಸರ್ಕಾರಕ್ಕೆ ಶೋಭೆ ತರುವಂತಹದ್ದಲ್ಲ. ಪ್ರತಿಭಟನಾಕಾರರ ಭಾವನೆಗಳಿಗೆ ಸರ್ಕಾರ ಸಹಾನುಭೂತಿಯಿಂದ ಸ್ಪಂದಿಸಬೇಕು.

ನೇಮಕಾತಿ ಪ್ರಕ್ರಿಯೆ ಮುಂದೆ ಹೋದಷ್ಟೂ ಉದ್ಯೋಗಾಕಾಂಕ್ಷಿಗಳ ಹತಾಶೆ ಹೆಚ್ಚುತ್ತದೆ, ಅವರನ್ನು ನೆಚ್ಚಿಕೊಂಡ ಕುಟುಂಬಗಳ ಸಂಕಷ್ಟವೂ ಮುಂದುವರಿಯುತ್ತದೆ. ನಿರುದ್ಯೋಗ ಸಮಸ್ಯೆ ಉಲ್ಬಣಗೊಳ್ಳಲು ರಾಜಕೀಯ ಪಕ್ಷಗಳು ನೇರ ಹೊಣೆಯಾಗಿವೆ. ಖಾಲಿ ಹುದ್ದೆಗಳನ್ನು ತುಂಬುವುದು ಹಾಗೂ ಹೊಸ ಉದ್ಯೋಗಗಳನ್ನು ಸೃಷ್ಟಿಸುವುದು ಯಾವ ಪಕ್ಷಕ್ಕೂ ಆದ್ಯತೆಯ ವಿಷಯವಾಗಿಲ್ಲ. ರಾಜ್ಯದಲ್ಲಿ ಲಕ್ಷಾಂತರ ಸರ್ಕಾರಿ ಹುದ್ದೆಗಳು ಭರ್ತಿ ಆಗದಿರುವುದರಲ್ಲಿ ಆಡಳಿತ ಪಕ್ಷದಷ್ಟೇ ವಿರೋಧಪಕ್ಷದ ಹೊಣೆಗಾರಿಕೆಯೂ ಇದೆ. ನೇಮಕಾತಿಗಳು ನನೆಗುದಿಗೆ ಬಿದ್ದಿರುವುದಕ್ಕೆ ಸಿದ್ದರಾಮಯ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುವ ರಾಜ್ಯ ಬಿಜೆಪಿ, ಅದೇ ಪ್ರಶ್ನೆಯನ್ನು ಕೇಂದ್ರ ಸರ್ಕಾರಕ್ಕೆ ಕೇಳುವುದಿಲ್ಲ. ಯುವಜನರನ್ನು ಓಟ್‌ಬ್ಯಾಂಕ್ ರೂಪದಲ್ಲಷ್ಟೇ ನೋಡುವ ರಾಜಕೀಯ ಪಕ್ಷಗಳು, ನಿರುದ್ಯೋಗದ ಸಮಸ್ಯೆಯನ್ನು ಮರೆಮಾಚಲಿಕ್ಕಾಗಿ ಯುವಜನರನ್ನು ದಾರಿತಪ್ಪಿಸಲು ಪ್ರಯತ್ನಿಸಿವೆ. ನಿರುದ್ಯೋಗ ಸಮಸ್ಯೆ ಆರ್ಥಿಕ ಸಮಸ್ಯೆಯಾಗಿಯಷ್ಟೇ ಉಳಿಯದೆ ಸಾಮಾಜಿಕ ಬಿಕ್ಕಟ್ಟಾಗಿಯೂ ಪರಿಣಮಿಸಿರುವ ಸಂದರ್ಭದಲ್ಲಿ, ವಿಭಜಕ ರಾಜಕಾರಣಕ್ಕಿಂತಲೂ ಜೀವನ ನಿರ್ವಹಣೆಗೆ ಉದ್ಯೋಗ ಅಗತ್ಯ ಎನ್ನುವ ಅರಿವು ಜಾಗೃತಗೊಂಡಿರುವ ರೂಪದಲ್ಲೂ ಧಾರವಾಡದಲ್ಲಿ ನಡೆದ ಬೃಹತ್ ಪ್ರತಿಭಟನೆಯನ್ನು ನೋಡಬಹುದಾಗಿದೆ. ಒಳಮೀಸಲಾತಿ ಕಾರಣದಿಂದಾಗಿ ನೇಮಕಾತಿಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕಾಯಿತು; ಖಾಲಿ ಇರುವ ಹುದ್ದೆಗಳನ್ನು ಕಾಲಮಿತಿಯೊಳಗೆ ಪಾರದರ್ಶಕವಾಗಿ ತುಂಬಲಾಗುವುದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಅವರ ಮಾತು ಆದಷ್ಟು ಬೇಗ ಕ್ರಿಯೆಯಾಗಿ ಬದಲಾಗಬೇಕಿದೆ.

ಕಾಡಿಗೆ ಕನ್ನ, ಭವಿಷ್ಯಕ್ಕೆ ಸುಣ್ಣ!



ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

‘ಪರಿಭಾವಿತ ಅರಣ್ಯ’ ಪ್ರದೇಶವನ್ನು ‘ಅರಣ್ಯ’ದ ಪರಿಕಲ್ಪನೆಯಿಂದ ಹೊರಗಿಡುವ ಪ್ರಯತ್ನಗಳು ರಾಜ್ಯದಲ್ಲಿ ನಡೆಯುತ್ತಿವೆ. ಕಾಡನ್ನು ಒತ್ತುವರಿ ಮಾಡಿಕೊಳ್ಳುವ ಪ್ರಯತ್ನಗಳಿಗೆ ಪಕ್ಷಾತೀತ ಬೆಂಬಲವಿದೆ. ಸುಪ್ರೀಂ ಕೋರ್ಟ್ ತೀರ್ಪಿಗೆ ವಿರುದ್ಧವಾದ ಇಂಥ ಬೆಳವಣಿಗೆಗಳ ಬಗ್ಗೆ ಸರ್ಕಾರ ಎಚ್ಚರಿಕೆ ವಹಿಸಬೇಕು.

ಮಲೆನಾಡಿನಲ್ಲಿ ಒತ್ತುವರಿ ದಂಧೆ ಜೋರಾಗಿಯೇ ನಡೆಯುತ್ತಿದೆ. ಅತಿಹೆಚ್ಚು ಅರಣ್ಯ ಒತ್ತುವರಿಯಾದ ಜಿಲ್ಲೆ ಶಿವಮೊಗ್ಗ ಎಂದು ಅಂಕಿಅಂಶಗಳು ಹೇಳುತ್ತವೆ. ಈ ಪ್ರಮಾಣದ ಒತ್ತುವರಿಗೆ ಓಟು ಆಧಾರಿತ ರಾಜಕಾರಣವೇ ಮುಖ್ಯ ಕಾರಣ ಎಂಬುದು ಗುಟ್ಟಾಗಿ ಉಳಿದಿಲ್ಲ. ಒತ್ತುವರಿ ಹೇಗೆಲ್ಲಾ ಆಗಬಹುದು ಎನ್ನುವುದಕ್ಕೆ ಉತ್ತಮ ಉದಾಹರಣೆ, ಸೊಪ್ಪಿನಗುಡ್ಡದ್ದು.

ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಕುಪ್ಪಗಡ್ಡೆ ಹೋಬಳಿಯ ನಿಟ್ಟಕ್ಕಿ ಗ್ರಾಮದ ಸರ್ವೆ ನಂಬರ್ 33, 145 ಎಕರೆಯ ಅತ್ಯಂತ ನಿಬಿಡ ಅರಣ್ಯಪ್ರದೇಶವಾಗಿತ್ತು. ಕಂದಾಯ ದಾಖಲೆಯಲ್ಲಿ ಅದು ಸೊಪ್ಪಿನಬೆಟ್ಟವೆಂದು ನಮೂದಾಗಿತ್ತು. ಆ ಪ್ರದೇಶವನ್ನು ಪರಿಭಾವಿತ ಅರಣ್ಯವಾಗಿ ಪರಿಗಣಿಸಬೇಕು ಎಂದು ಅರಣ್ಯ ಇಲಾಖೆ ಶಿಫಾರಸು ಮಾಡಿತ್ತು. ಆದರೆ, ಆ ಪರಿಸರದಲ್ಲಿ 29 ಜನರು 87 ಎಕರೆಯಷ್ಟು ಪ್ರದೇಶವನ್ನು ಅನಧಿಕೃತವಾಗಿ ಸಾಗುವಳಿ ಮಾಡುವ ಸಲುವಾಗಿ ಅರಣ್ಯ ನಾಶ ಮಾಡಿದ್ದರು. ಪಹಣಿಯಲ್ಲಿಯೂ ಕೆಲವರ ಹೆಸರು ದಾಖಲಾಗಿತ್ತು. ಅನಧಿಕೃತ ಸಾಗುವಳಿ ಪ್ರದೇಶವನ್ನು ತೆರವುಗೊಳಿಸುವ ಪ್ರಕ್ರಿಯೆಗೆ ಅರಣ್ಯ ಇಲಾಖೆ ಮುಂದಾದಾಗ, ಅನಧಿಕೃತ ಸಾಗುವಳಿದಾರರು ಹಾಗೂ ಅರಣ್ಯ ಇಲಾಖೆ ನಡುವೆ ಜಟಾಪಟಿ ಶುರುವಾಯಿತು.

ಮುಂದಿನ ಕಥೆ ಕೇಳಿ. ಅರಣ್ಯ ಇಲಾಖೆ ಕಾನೂನು ಹೋರಾಟಕ್ಕೆ ಮುಂದಾಯಿತು. ಅಕ್ರಮವಾಗಿ ಒತ್ತುವರಿ ಮಾಡಿಕೊಂಡ ಪ್ರದೇಶವು ಅರಣ್ಯ ಇಲಾಖೆಗೆ ಸೇರಿದ್ದೇ? ಅರಣ್ಯವನ್ನು ಒತ್ತುವರಿ ಮಾಡಿ ಕಾನೂನು ಉಲ್ಲಂಘನೆ ಮಾಡಲಾಗಿದೆಯೆ? ಒತ್ತುವರಿದಾರರಿಗೆ ಸದರಿ ಭೂಮಿಯ ಮೇಲೆ ಹಕ್ಕು ಇದೆಯೆ? ಒತ್ತುವರಿದಾರರಿಗೆ ಸಮಜಾಯಿಷಿ ನೀಡಲು ಸೂಕ್ತ ಅವಕಾಶ ನೀಡಲಾಗಿದೆಯೆ? ಈ ನಾಲ್ಕು ಅಂಶಗಳನ್ನು ಪ್ರಾಥಮಿಕವಾಗಿ ಪರಿಗಣಿಸಲಾಯಿತು. ಅರಣ್ಯ ಹಾಗೂ ಪರಿಸರ ಸಂರಕ್ಷಣೆಯು ಸಾರ್ವಜನಿಕ ಹಿತಾಸಕ್ತಿಯ ವಿಷಯವಾಗಿದೆ, ಬಹುಸಂಖ್ಯೆಯ ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡಲ್ಲಿ, ವೈಯಕ್ತಿಕ ಹಿತಾಸಕ್ತಿಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಯಿತು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಒತ್ತುವರಿದಾರರು ತೀರಾ ಇತ್ತೀಚೆಗೆ ಒತ್ತುವರಿ ಮಾಡಿರುತ್ತಾರೆ ಎಂಬುದನ್ನು ‘ಗೂಗಲ್ ಚಿತ್ರಗಳು’ ಸಾಬೀತುಪಡಿಸಿವೆ.

ಮೊಕದ್ದಮೆ ಕರ್ನಾಟಕ ಮೇಲ್ಮನವಿ ನ್ಯಾಯ ಮಂಡಳಿಯ ಮುಂದೆ ಹೋಯಿತು. ಸೊಪ್ಪಿನಬೆಟ್ಟ ಅಥವಾ ಯಾವುದೇ ರೀತಿಯ ಸರ್ಕಾರಿ ಸ್ವತ್ತನ್ನು ಖಾಸಗಿ ವ್ಯಕ್ತಿಗಳಿಗೆ ಮಂಜೂರು ಮಾಡುವುದಕ್ಕಾಗಲಿ, ಅನಧಿಕೃತ ಸಾಗುವಳಿ ಮಾಡುವುದಕ್ಕಾಗಲಿ ಅವಕಾಶವಿಲ್ಲ ಎಂದು ತೀರ್ಪು ಬಂದಿತು. ಇದನ್ನು ಪ್ರಶ್ನಿಸಿದ ಒತ್ತುವರಿದಾರರು ಹೈಕೋರ್ಟ್ ಮೊರೆ ಹೋದರು. ಅಲ್ಲಿಯೂ ಅವರಿಗೆ ಜಯ ಲಭಿಸಲಿಲ್ಲ.

ಸುಪ್ರೀಂ ಕೋರ್ಟ್‌ನ ರಿಟ್ ಅರ್ಜಿ ಸಂಖ್ಯೆ 202/1995ರ ವಿಚಾರಣೋತ್ತರ ಆದೇಶ ಡಿ.12, 1996ರ ಪ್ರಕಾರ, ಅರಣ್ಯಗಳನ್ನು ಗುರ್ತಿಸಲು ತಜ್ಞರ ಸಮಿತಿಯೊಂದನ್ನು ರಚಿಸಬೇಕು; ಅರಣ್ಯಗಳ ವಿಸ್ತೀರ್ಣದ ಬಗ್ಗೆ ನ್ಯಾಯಾಲಯದ ಮುಂದೆ ವಸ್ತುಸ್ಥಿತಿ ಕುರಿತ ಪ್ರಮಾಣಪತ್ರ ಸಲ್ಲಿಸಬೇಕು ಎಂಬ ನಿರ್ದೇಶನವನ್ನು ಎಲ್ಲಾ ರಾಜ್ಯ ಸರ್ಕಾರಗಳಿಗೂ ನೀಡಲಾಗಿದೆ. ಈ ಪ್ರಕಾರವಾಗಿ ಕರ್ನಾಟಕ ಸರ್ಕಾರವೂ ತಜ್ಞರ ಸಮಿತಿಯನ್ನು ರಚಿಸಿ, ಸಮಿತಿ ನೀಡಿದ ವರದಿಯನ್ನು ಪರಿಶೀಲಿಸಿದ ಸಚಿವ ಸಂಪುಟದ ಅನುಮೋದನೆಯೊಂದಿಗೆ 1997ರ ಏಪ್ರಿಲ್ 2 ಮತ್ತು ಸೆ. 25ರ ದಿನಾಂಕಗಳಲ್ಲಿ ಎರಡು ಪ್ರಮಾಣಪತ್ರಗಳನ್ನು ಸಲ್ಲಿಸಿತು. ಸದರಿ ಪ್ರಮಾಣಪತ್ರದಲ್ಲಿ ಅರಣ್ಯ ಇಲಾಖೆಯ ಸುಪರ್ದಿಯಲ್ಲಿರುವ ‘ಅರಣ್ಯ’ಗಳ ಸರ್ವೆ ಮತ್ತು ಗಡಿ ಗುರುತಿಸುವಿಕೆ ಮುಕ್ತಾಯಗೊಂಡಿದ್ದು, ಅರಣ್ಯವೆಂದು ಪರಿಗಣಿಸಬೇಕಾದ ಜಿಲ್ಲಾವಾರು, ತಾಲ್ಲೂಕುವಾರು ಮತ್ತು ಗ್ರಾಮವಾರು ಸರ್ವೆ ನಂಬರ್‌ಗಳನ್ನು ಗುರ್ತಿಸಬೇಕಾಗಿರುತ್ತದೆ. ಶಾಸನಬದ್ಧ ಅರಣ್ಯ ಪ್ರದೇಶಗಳನ್ನು ಹೊರತುಪಡಿಸಿ, ಇತರೆ ಹೆಚ್ಚುವರಿ ಅರಣ್ಯ ಪ್ರದೇಶಗಳನ್ನು ಗುರುತಿಸಲು ಇನ್ನೂ ಕಾಲಾವಕಾಶ ಬೇಕೆಂದು ಕೇಳಿಕೊಳ್ಳಲಾಗಿತ್ತು.

ಭಾರತದಲ್ಲಿ ಅರಣ್ಯ ಸಂರಕ್ಷಣೆಗೆ ಕಾನೂನುಬದ್ಧ ಬಲ ನೀಡಿದ ಐತಿಹಾಸಿಕ ತೀರ್ಪುಗಳಲ್ಲಿ ಟಿ.ಎನ್. ಗೋದಾವರ್ಮನ್ ತಿರುಮಲಪಾಡ್ ಮೊಕದ್ದಮೆ ಅತ್ಯಂತ ಪ್ರಮುಖವಾದದ್ದು. ಆ ಪ್ರಕರಣದಲ್ಲಿ ಅರಣ್ಯ ಎಂದರೆ ಸರ್ಕಾರ ಅಧಿಸೂಚಿಸಿದ ಭೂಭಾಗ ಮಾತ್ರವಲ್ಲ; ನಿಘಂಟಿನಲ್ಲಿ ವಿವರಿಸಿದ ಅರ್ಥದಲ್ಲಿ ಅರಣ್ಯವೆಂದು ಪರಿಗಣಿಸಬಹುದಾದ ಎಲ್ಲ ಪ್ರದೇಶಗಳೂ ಅರಣ್ಯಗಳೇ ಎಂಬುದನ್ನು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಆ ತೀರ್ಪು, ಅರಣ್ಯ ಸಂರಕ್ಷಣಾ ಕಾಯ್ದೆ 1980ಕ್ಕೆ ಬಲ ತುಂಬಿದ್ದಷ್ಟೇ ಅಲ್ಲ, ರಾಜ್ಯ ಸರ್ಕಾರಗಳ ಅರಣ್ಯ ನೀತಿಗೆ ಸ್ಪಷ್ಟ ಮಾರ್ಗಸೂಚಿಯನ್ನೂ ನೀಡಿದೆ.

ಗೋದಾವರ್ಮನ್ ತೀರ್ಪಿನ ಹಿನ್ನೆಲೆಯಲ್ಲಿ, ದೇಶದ ಎಲ್ಲ ರಾಜ್ಯಗಳು ಪರಿಭಾವಿತ ಅರಣ್ಯಗಳನ್ನು (ಡೀಮ್ಡ್ ಫಾರೆಸ್ಟ್) ಗುರ್ತಿಸುವ ಹೊಣೆಯನ್ನು ಹೊರಬೇಕಾಯಿತು. ಕರ್ನಾಟಕದಲ್ಲಿ ಈ ಪ್ರಕ್ರಿಯೆ ಪ್ರಾರಂಭವಾಗಿ, ರಾಜ್ಯದ ಅರಣ್ಯ ಇಲಾಖೆ 9,94,881.11 ಹೆಕ್ಟೇರ್ ಪ್ರದೇಶವನ್ನು ಪರಿಭಾವಿತ ಅರಣ್ಯವೆಂದು ಪ್ರಾಥಮಿಕವಾಗಿ ಗುರ್ತಿಸಿತು. ಮರಗಳ ಸಾಂದ್ರತೆ, ನೈಸರ್ಗಿಕ ಅರಣ್ಯ ಸ್ವರೂಪ, ಜೀವವೈವಿಧ್ಯ, ಪರಿಸರ ವ್ಯವಸ್ಥೆಯ ಪಾತ್ರಗಳನ್ನು ಗಮನದಲ್ಲಿಟ್ಟುಕೊಳ್ಳಲಾಗಿತ್ತು. ವಿಶೇಷವಾಗಿ, ಒಂದು ಹೆಕ್ಟೇರ್ ಪ್ರದೇಶದಲ್ಲಿ 50ಕ್ಕಿಂತ ಹೆಚ್ಚು ಮರಗಳಿರುವ ಭೂಭಾಗಗಳನ್ನು ಪರಿಭಾವಿತ ಅರಣ್ಯಗಳೆಂದು ಗುರ್ತಿಸಲಾಗಿತ್ತು.

ಅರಣ್ಯ ಇಲಾಖೆ ಗುರ್ತಿಸಿದ ಪ್ರದೇಶಗಳಲ್ಲಿ ಶಾಲೆಗಳು, ಬಸ್ ನಿಲ್ದಾಣಗಳು, ಗ್ರಾಮೀಣ ವಸತಿಗಳು, ಧಾರ್ಮಿಕ ಕ್ಷೇತ್ರಗಳು ಹಾಗೂ ಖಾಸಗಿ ಜಮೀನುಗಳಿವೆ ಎಂಬ ಕಾರಣಗಳನ್ನು ಮುಂದಿಟ್ಟುಕೊಂಡ ರಾಜ್ಯ ಸರ್ಕಾರ, ಅರಣ್ಯ ಇಲಾಖೆಯ ಪರಿಭಾವಿತ ಅರಣ್ಯದ ಶಿಫಾರಸನ್ನು ತಿರಸ್ಕರಿಸಿತು. ವಾಸ್ತವವಾಗಿ, ಅರಣ್ಯಗಳ ಒಳಗೆ ಮಾನವ ವಾಸಸ್ಥಾನಗಳು ಇರುವುದು ಅಪರೂಪದ ಸಂಗತಿಯಲ್ಲ. ಭಾರತದಲ್ಲಿ ಶತಮಾನಗಳಿಂದ ಕಾಡು ಮತ್ತು ಗ್ರಾಮಗಳ ನಡುವೆ ಸಹಜ ಸಂಬಂಧವಿದೆ. ಈ ಸತ್ಯವನ್ನು ಅರಿತೇ ಸುಪ್ರೀಂ ಕೋರ್ಟ್ ನಿಘಂಟಿನ ಅರ್ಥದಲ್ಲಿನ ಅರಣ್ಯ ಪರಿಕಲ್ಪನೆಯನ್ನು ಮುಂದಿಟ್ಟಿತ್ತು.


ಸರ್ವೆ ನಂಬರ್‌ಗಳ ಪುನರಾವರ್ತನೆ, ಸರ್ವೆ ನಂಬರಿನಲ್ಲಿ ಲಭ್ಯವಿಲ್ಲದ ಸರ್ಕಾರಿ ಪ್ರದೇಶಗಳು, ಖಾಸಗಿ ಪಟ್ಟಾ, ಮೀಸಲು ಅರಣ್ಯ, ಕೆರೆತೀರ, ಸಾಂಸ್ಥಿಕ ಮತ್ತು ಶಾಲಾ ನೆಡುತೋಪು, 2 ಹೆಕ್ಟೇರಿಗಿಂತ ಕಡಿಮೆ ಇರುವ ಪ್ರದೇಶ, ಪ್ರತಿ ಹೆಕ್ಟೇರಿಗೆ 50 ಮರಗಳಿಗಿಂತ ಕಡಿಮೆ ಇರುವುದು, ಇತರೆ ಇಲಾಖೆಗಳಿಗೆ ವರ್ಗಾಯಿಸಿದ ಜಾಗ ಮತ್ತು ವಿವಿಧ ಶಾಸನಬದ್ಧ ನಿಬಂಧನೆಗಳ ಪ್ರಕಾರ ಅರಣ್ಯವಾಗಿರುವುದು, ಇತ್ಯಾದಿ ಕಾರಣಗಳನ್ನು ಮುಂದಿಟ್ಟುಕೊಂಡು 7,73,326 ಹೆಕ್ಟೇರ್ ವ್ಯಾಪ್ತಿಯನ್ನು ಕೈ ಬಿಟ್ಟು, 2,21,554 ಹೆಕ್ಟೇರ್ ಪ್ರದೇಶವನ್ನು ಪರಿಭಾವಿತ ಅರಣ್ಯವೆಂದು ಪರಿಗಣಿಸಿತು. ಜೊತೆಗೆ ಪರಿಭಾವಿತ ಮಾನದಂಡಗಳಿಗೆ ಅನುಗುಣವಾಗಿದ್ದ 1,08,632 ಹೆಕ್ಟೇರ್ ಪ್ರದೇಶವನ್ನು ಸೇರಿಸಿ ಮರುವರದಿಯನ್ನು ಸಲ್ಲಿಸಲಾಗಿದೆ. ಈ ಕಡಿತ ಯಾವ ಸಾರ್ವಜನಿಕ ಚರ್ಚೆಯಿಲ್ಲದೆ, ಯಾವ ಸ್ವತಂತ್ರ ಪರಿಸರ ವಿಜ್ಞಾನಿಗಳ ಸಮಿತಿಯ ಪರಿಶೀಲನೆಯಿಲ್ಲದೆ ನಡೆದಿರುವುದು ಅನುಮಾನಕ್ಕೆ ಕಾರಣವಾಗಿದೆ. ಅರಣ್ಯ ಸಂರಕ್ಷಣೆಯಂತಹ ಸೂಕ್ಷ್ಮ ವಿಷಯದಲ್ಲಿ ಈ ರೀತಿಯ ಕಚೇರಿ ಮಟ್ಟದ ಏಕಮುಖ ನಿರ್ಧಾರಗಳು, ಪರಿಸರ ಸಂರಕ್ಷಣೆಗೆ ಮಾಡುವ ಅಪಚಾರ.

ಗೋದಾವರ್ಮನ್ ತೀರ್ಪು ‘ಅರಣ್ಯ’ ಎಂಬ ಪದಕ್ಕೆ ಕಾನೂನು ಅಧಿಸೂಚನೆಯ ಮಿತಿ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದೆ. ಅರಣ್ಯದ ಲಕ್ಷಣಗಳಿರುವ, ಮರಗಳ ಸಾಂದ್ರತೆ ಇರುವ, ಪರಿಸರ ವ್ಯವಸ್ಥೆಯ ಅವಿಭಾಜ್ಯವಾದ ಭೂಭಾಗಗಳನ್ನು ಕಂದಾಯ ದಾಖಲೆಗಳ ಆಧಾರದ ಮೇಲೆ ಹೊರಗಿಡುವಂತಿಲ್ಲ. ಕರ್ನಾಟಕದಲ್ಲಿ ಸಾವಿರಾರು ಹೆಕ್ಟೇರ್ ಪ್ರದೇಶಗಳು, ಒಂದು ಹೆಕ್ಟೇರ್‌ಗೆ 50ಕ್ಕಿಂತ ಹೆಚ್ಚು ಮರಗಳಿದ್ದರೂ, ಪರಿಭಾವಿತ ಅರಣ್ಯದ ವ್ಯಾಪ್ತಿಗೆ ಸೇರಿಲ್ಲ.

ಪ್ರಸ್ತುತ ಅಂತಿಮಗೊಂಡಿರುವ 3,30,186 ಹೆಕ್ಟೇರ್ ಪರಿಭಾವಿತ ಅರಣ್ಯ ಪ್ರದೇಶವನ್ನು ಆ ಚೌಕಟ್ಟಿನಿಂದ ಕೈಬಿಡಬೇಕೆನ್ನುವುದು ಪಕ್ಷಾತೀತವಾದ ಒತ್ತಡವಾಗಿದೆ. ಅರಣ್ಯ–ಕಂದಾಯ ಇಲಾಖೆಗಳು ಜಂಟಿ ಸರ್ವೆ ಮಾಡಿ ಅಂತಿಮಗೊಳಿಸಬೇಕಾಗಿದೆ. ಇಲ್ಲಿ ಒಂದು ಮೂಲಭೂತ ಪ್ರಶ್ನೆಯಿದೆ. ಈಗಾಗಲೇ ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳನ್ನು ಪಾಲನೆ ಮಾಡದ ಸರ್ಕಾರ, ಜಂಟಿ ಸರ್ವೆಯಲ್ಲಿ ನ್ಯಾಯಯುತ ಮತ್ತು ಪಾರದರ್ಶಕ ಕ್ರಮ ಅನುಸರಿಸುತ್ತದೆ ಎಂದು ಹೇಗೆ ನಂಬುವುದು? ಅರಣ್ಯವನ್ನು ರಕ್ಷಿಸಬೇಕಾದ ವ್ಯವಸ್ಥೆಯೇ ಅರಣ್ಯವನ್ನು ಕುಗ್ಗಿಸುವ ಸಾಧನವಾಗುತ್ತಿರುವುದು ಅಪಾಯಕಾರಿ ಬೆಳವಣಿಗೆ.

ಪರಿಭಾವಿತ ಅರಣ್ಯಗಳನ್ನು ಸರಿಯಾಗಿ ಗುರ್ತಿಸಿ, ರಕ್ಷಿಸದಿದ್ದಲ್ಲಿ ಆಗುವ ದೂರಗಾಮಿ ಪರಿಣಾಮಗಳು ಅನೇಕ. ಈ ಪ್ರದೇಶಗಳು ಅರಣ್ಯ ಸಂರಕ್ಷಣಾ ಕಾಯ್ದೆಯ ವ್ಯಾಪ್ತಿಗೆ ಬಾರದ ಕಾರಣ, ಗಣಿಗಾರಿಕೆ, ದೊಡ್ಡ ಮೂಲಸೌಕರ್ಯ ಯೋಜನೆಗಳು, ವಿದ್ಯುತ್ ಮಾರ್ಗಗಳು, ಕೈಗಾರಿಕಾ ವಿಸ್ತರಣೆ ಮತ್ತು ರಿಯಲ್ ಎಸ್ಟೇಟ್ ಲಾಬಿಗಳಿಗೆ ಸುಲಭವಾಗಿ ಬಲಿಯಾಗಲಿವೆ. ಪರಿಣಾಮ, ನೀರಿನ ಮೂಲಗಳು ಒಣಗುತ್ತವೆ; ಮಣ್ಣಿನ ಸವಕಳಿ ಹೆಚ್ಚುತ್ತದೆ, ಜೀವವೈವಿಧ್ಯ ನಾಶವಾಗುತ್ತದೆ, ಮಾನವ–ವನ್ಯಜೀವಿ ಸಂಘರ್ಷ ಹೆಚ್ಚುತ್ತದೆ.

ಕರ್ನಾಟಕ ಸರ್ಕಾರ ತಕ್ಷಣವೇ ತನ್ನ ನಿರ್ಧಾರವನ್ನು ಮರುಪರಿಶೀಲಿಸಬೇಕು. ಗೋದಾವರ್ಮನ್ ತೀರ್ಪಿನಂತೆ ಅರಣ್ಯ ಪರಿಕಲ್ಪನೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಸ್ವತಂತ್ರ ವೈಜ್ಞಾನಿಕ ಸಮಿತಿಯ ಮೂಲಕ, ಸಾರ್ವಜನಿಕ ಭಾಗವಹಿಸುವಿಕೆಯನ್ನು ಒಳಗೊಂಡು ಪರಿಭಾವಿತ ಅರಣ್ಯಗಳನ್ನು ಮರುಗುರ್ತಿಸಬೇಕು. ಅರಣ್ಯ ಪ್ರದೇಶದ, ಅದು ಪರಿಭಾವಿತ ಅರಣ್ಯವಾಗಿದ್ದರೂ, ಅದರ ವ್ಯಾಪ್ತಿಯನ್ನು ಕಡಿತಗೊಳಿಸುವುದು ಭವಿಷ್ಯದ ಪೀಳಿಗೆಗಳ ಜೀವಿಸುವ ಹಕ್ಕನ್ನು ಕಸಿದುಕೊಂಡಂತೆ ಆಗುತ್ತದೆ. ಸೊರಬ ತಾಲ್ಲೂಕಿನ ನಿಟ್ಟಕ್ಕಿ ಪ್ರಕರಣ ಅಕ್ರಮ ಒತ್ತುವರಿ ಪ್ರಕ್ರಿಯೆಗೆ ಎಚ್ಚರಿಕೆಯ ಪಾಠವಾಗಿದೆ.



ವಾಚಕರ ವಾಣಿ

ಪಿಎಂ–ಕಿಸಾನ್ ಹಣಕ್ಕೆ ಕಾದುಕುಳಿತ ರೈತ

ಪಿಎಂ–ಕಿಸಾನ್ ಯೋಜನೆಯಡಿ ರೈತರ ಬ್ಯಾಂಕ್ ಖಾತೆಗೆ ವಾರ್ಷಿಕವಾಗಿ ₹6 ಸಾವಿರ ಪಾವತಿಸಲಾಗುತ್ತದೆ. ನಾಲ್ಕು ತಿಂಗಳಿಗೊಮ್ಮೆಯಂತೆ ಮೂರು ಕಂತುಗಳಲ್ಲಿ ₹2 ಸಾವಿರ ಜಮೆ ಮಾಡುವುದು ಯೋಜನೆಯ ಉದ್ದೇಶ. ಆರಂಭದಲ್ಲಿ ಸರಿಯಾಗಿಯೇ ಖಾತೆಗಳಿಗೆ ಹಣ ಜಮೆಯಾಗುತ್ತಿತ್ತು. ಕಳೆದ ಆರು ತಿಂಗಳ ಹಿಂದೆ ರೈತರ ಖಾತೆಗೆ ಹಣ ಪಾವತಿಯಾಗಿತ್ತು. ಆ ಬಳಿಕ ಇಲ್ಲಿಯವರೆಗೂ ಹಣ ಪಾವತಿಯಾಗಿಲ್ಲ. ರೈತರು ಈಗ ಯೋಜನೆಯ ಹಣಕ್ಕಾಗಿ ದಾರಿ ಕಾಯುವಂತಾಗಿದೆ. ಕೇಂದ್ರ ಸರ್ಕಾರ ಯೋಜನೆ ರೂಪಿಸಿದರಷ್ಟೆ ಸಾಲದು. ಸಕಾಲದಲ್ಲಿ ಸೌಲಭ್ಯ ತಲಪಿಸುವುದು ಹೊಣೆಗಾರಿಕೆಯೂ ಹೌದು.

ಮಲ್ಲನಗೌಡ ಪಾಟೀಲ ರಂಕಲಕೊಪ್ಪ, ರಾಮದುರ್ಗ

ಪಠ್ಯಪುಸ್ತಕಗಳ ಬೇಡಿಕೆ: ತಂತ್ರಾಂಶ ಕಂಟಕ

ಶಾಲಾ ಶಿಕ್ಷಣ ಇಲಾಖೆಯಿಂದ 2026–27ನೇ ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿದಂತೆ ಪಠ್ಯಪುಸ್ತಕಗಳ ಬೇಡಿಕೆ ಸಲ್ಲಿಸಲು ಸ್ಯಾಟ್ಸ್ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ತಂತ್ರಾಂಶ ಬಳಸಿ ಶಾಲೆಯಲ್ಲಿ ಮುಂದಿನ ಶೈಕ್ಷಣಿಕ ವರ್ಷಕ್ಕೆ ತರಗತಿವಾರು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಬೇಡಿಕೆ ಸಲ್ಲಿಸಬೇಕಿದೆ. ತಂತ್ರಾಂಶದಲ್ಲಿ ಶಾಲೆಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಅಡಕಗೊಳಿಸುವುದು ಕಡ್ಡಾಯ. ಆದರೆ, ಇದರ ಕಾರ್ಯ ನಿರ್ವಹಣೆ ಆಮೆಗತಿಯಲ್ಲಿದೆ. ಐದರಿಂದ ಹತ್ತು ನಿಮಿಷದಲ್ಲಿ ಪೂರ್ಣಗೊಳಿಸಬೇಕಾದ ಪಠ್ಯಪುಸ್ತಕದ ಬೇಡಿಕೆಯಂತಹ ಮಾಹಿತಿಯನ್ನು ತಾಸುಗಟ್ಟಲೆ ಕುಳಿತರೂ ಸಲ್ಲಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ಶಿಕ್ಷಕರು ಒತ್ತಡಕ್ಕೆ ಒಳಗಾಗುವಂತಾಗಿದೆ. ದಿನಗಟ್ಟಲೆ ಮೊಬೈಲ್ ಹಿಡಿದು ಕುಳಿತರೂ ಮಾಹಿತಿ ಭರ್ತಿ ಮಾಡಲಾಗುತ್ತಿಲ್ಲ. ಬಳಕೆದಾರ ಸ್ನೇಹಿಯಾಗಬೇಕಾದ ತಂತ್ರಾಂಶವು ತ್ರಾಸದಾಯಕ ಆಗಿರುವುದು ದುರದೃಷ್ಟಕರ.

ಶಿವಶಂಕರ ಆರ್., ಚಿತ್ರದುರ್ಗ

ಶಿಕ್ಷಣ, ಆರೋಗ್ಯ ಕ್ಷೇತ್ರಗಳ ನಿರ್ಲಕ್ಷ್ಯ

ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಆಘಾತಕಾರಿ ಸುದ್ದಿಗಳು ಬೆಳಕಿಗೆ ಬರುತ್ತಿವೆ. ವೈದ್ಯರಿಗೆ ಸಂಬಳ ಪಾವತಿ ಆಗಿಲ್ಲ. ಕ್ಷಕಿರಣ, ಎಂಆರ್‌ಐ ಮತ್ತು ಸ್ಕ್ಯಾನಿಂಗ್ ಸೌಲಭ್ಯ ಸ್ಥಗಿತ, ಔಷಧ ಸರಬರಾಜು ಸ್ಥಗಿತ ಇತ್ಯಾದಿ ಅಗತ್ಯ ಸೇವೆ ಒದಗಿಸಲು ಸರ್ಕಾರ ವಿಫಲವಾಗಿರುವುದು ಅಕ್ಷಮ್ಯ. ಶಾಲೆ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಬೋಧಕರಿಲ್ಲದೆ ಚಿಂತಾಜನಕ ಸ್ಥಿತಿ ಇದೆ. ಯಾವುದೇ, ಸರ್ಕಾರ ಆರೋಗ್ಯ ಮತ್ತು ಶಿಕ್ಷಣದಂತಹ ಅಗತ್ಯ ಸೌಲಭ್ಯ ಒದಗಿಸುವ ಜವಾಬ್ದಾರಿಯಿಂದ ನುಣುಚಿಕೊಳ್ಳುವುದು ಆತಂಕಕಾರಿ ಬೆಳವಣಿಗೆ.

ಟಿ.ವಿ. ನಾಗರಾಜ, ಬೆಂಗಳೂರು

ಒಳಮೀಸಲು ಗೊಂದಲ: ನೇಮಕಾತಿ ತಡ

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳ ನೇಮಕಾತಿ ವಿಳಂಬ ಆಗುತ್ತಿದೆ. ಸಾವಿರಾರು ಅಭ್ಯರ್ಥಿಗಳು ಸಾಕಷ್ಟು ಬಾರಿ ಬೀದಿಗಿಳಿದು ಪ್ರತಿಭಟಿಸಿದ್ದಾರೆ. ಆದರೆ, ಸರ್ಕಾರದಿಂದ ಯಾವುದೇ ಸಕಾರಾತ್ಮಕ ಸ್ಪಂದನೆ ಸಿಕ್ಕಿಲ್ಲ. ಬೆಂಗಳೂರು, ಧಾರವಾಡ, ವಿಜಯಪುರದಂತಹ ನಗರಗಳಲ್ಲಿ ಹಲವಾರು ವರ್ಷಗಳಿಂದ ಪೋಷಕರನ್ನು ಬಿಟ್ಟು ಸಾಲ ಮಾಡಿ ಓದುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರದ 2013–18ರ ಅವಧಿಯಲ್ಲಿ ಅತಿಹೆಚ್ಚು ನೇಮಕಾತಿ ನಡೆದಿತ್ತು. ಆದರೆ, ಎರಡನೇ ಅವಧಿಯಲ್ಲಿ ನೇಮಕಾತಿಗೆ ನಿರ್ಲಕ್ಷ್ಯ ತಳೆಯಲಾಗಿದೆ. ಹಳೆಯ ಮೀಸಲಾತಿ ನಿಯಮ ಮತ್ತು ರೋಸ್ಟರ್ ಅಡಿಯಲ್ಲಿಯೇ ನೇಮಕಾತಿ ಪ್ರಾರಂಭಿಸಿದರೆ ಆಡಳಿತ ಸುಗಮವಾಗಿ ಚಲಿಸಲಿದೆ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿಯವರು ಪಕ್ಷಾತೀತವಾಗಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಒಳಮೀಸಲಾತಿಗೆ ಸಂಬಂಧಿಸಿದ ತೊಡಕು ನಿವಾರಿಸಿ ನೇಮಕಾತಿಗೆ ಅಧಿಸೂಚನೆ ಪ್ರಕಟಿಸಬೇಕಿದೆ.

ಶಿವರಾಜ್ ನಡಗೇರಿ, ಕಲಬುರಗಿ

ವಿದ್ಯುತ್ ಪ್ರತಿನಿಧಿಗಳಿಗಿಲ್ಲ ಕಾಯಂ ಭಾಗ್ಯ

2004ರಲ್ಲಿ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಾಗ ಗ್ರಾಮೀಣರಿಗೆ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೊಬ್ಬರಂತೆ ಗ್ರಾಮ ವಿದ್ಯುತ್ ಪ್ರತಿನಿಧಿಯನ್ನು (ಜಿವಿಪಿ) ನೇಮಕ ಮಾಡಿಕೊಳ್ಳಲಾಗಿತ್ತು. ಅಂದಿನಿಂದ ಇಂದಿನವರೆಗೂ ಇಎಸ್‌ಐ, ಪಿ.ಎಫ್ ಸೌಲಭ್ಯ ನೀಡದೆ ವಿದ್ಯುತ್ ಸರಬರಾಜು ಕಂಪನಿಗಳು ವಂಚಿಸಿವೆ. ನ್ಯಾಯಕ್ಕಾಗಿ ಹಲವು ಬಾರಿ ಹೋರಾಟ ನಡೆಸಿದರೂ ಪ್ರಯೋಜನವಾಗಿಲ್ಲ. ಹೈಕೋರ್ಟ್ ಕೂಡ ನ್ಯಾಯ ಒದಗಿಸುವಂತೆ ಆದೇಶಿಸಿದೆ. ಆದರೂ, ಆಳುವ ವರ್ಗ ಕಿವಿಗೊಡುತ್ತಿಲ್ಲ. ಇದರಿಂದ ಮೂರು ಸಾವಿರ ಪ್ರತಿನಿಧಿಗಳ ಬದುಕು ಮೂರಾಬಟ್ಟೆಯಾಗಿದೆ. ಕಡಿಮೆ ಸಂಬಳದಿಂದ ಜೀವನ ನಿರ್ವಹಣೆ ಮಾಡಲಾಗದೆ ಹಲವು ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೆಲವರು ಅಪಘಾತದಲ್ಲಿ ಮೃತರಾಗಿದ್ದಾರೆ. ವಯೋನಿವೃತ್ತಿ ಹೊಂದಿರುವವರಿಗೆ ವಿದ್ಯುತ್ ಕಂಪನಿಗಳಿಂದ ಕನಿಷ್ಠ ಇಡುಗಂಟು ಸಿಕ್ಕಿಲ್ಲ. ಇನ್ನಾದರೂ ಸರ್ಕಾರ ಜಿವಿಪಿಗಳ ಸೇವೆ ಕಾಯಂಗೆ ಮುಂದಾಗಬೇಕಿದೆ.

ದಡದಹಳ್ಳಿ ರಮೇಶ್, ಚಾಮರಾಜನಗರ

ಕಲಬುರಗಿಯಲ್ಲಿ ರೆಕ್ಕೆಬಿಚ್ಚದ ಲೋಹದ ಹಕ್ಕಿ

2019ರಲ್ಲಿ ಕಲಬುರಗಿಯ ವಿಮಾನ ನಿಲ್ದಾಣ ಕಾರ್ಯಾರಂಭ ಮಾಡಿತು. ಇದಕ್ಕಾಗಿ ಸುಮಾರು 650 ಎಕರೆ ಕೃಷಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ತೆರಿಗೆದಾರರ ₹300 ಕೋಟಿಯನ್ನು ವ್ಯಯಿಸಲಾಗಿದೆ. ಆದರೆ, ಕಳೆದ ಐದು ತಿಂಗಳಿಂದ ವಿಮಾನ ಸೇವೆ ಇಲ್ಲದೆ ಕೇವಲ ‘ಉಳ್ಳವರ’ ಖಾಸಗಿ ವಿಮಾನಗಳಿಗೆ ನಿಲ್ದಾಣವು ಸೀಮಿತಗೊಂಡಿದೆ. ಕಳೆದ ವರ್ಷ ಇಲ್ಲಿಗೆ ಬಂದಿದ್ದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಇಲ್ಲಿ ವಿಮಾನಗಳ ಸೇವೆ ಹೆಚ್ಚಿಸಲು ಕ್ರಮಕೈಗೊಳ್ಳುವುದಾಗಿ ಹೇಳಿ ಸಭಿಕರಿಂದ ಚಪ್ಪಾಳೆ ಗಿಟ್ಟಿಸಿಕೊಂಡಿದ್ದರು. ಕಳೆದ ವಾರ ಅವರು ಇಲ್ಲಿಗೆ ಬಂದದ್ದು ಖಾಸಗಿ ವಿಮಾನದ ಮೂಲಕ! ಜನಸಾಮಾನ್ಯನಿಗೆ ಮಾತ್ರ ವಿಮಾನ ಸೇವೆಯಿಲ್ಲ. ರಾಜ್ಯದ ಸಂಸದರ ದಿವ್ಯ ಜಡತ್ವಕ್ಕೆ ಈ ನಿಲ್ದಾಣವೇ ಮೂಕಸಾಕ್ಷಿ.

ವೆಂಕಟೇಶ್ ಮುದಗಲ್, ಕಲಬುರಗಿ

ಚುರುಮುರಿ



ಮೊಸಳೆ ಕಣ್ಣೀರು!

• ಗುರು ಪಿ.ಎಸ್.

‘**ಸರ್ಕಾರಿ** ಜಾಬ್‌ಗಾಗಿ ನಮ್ಮ ಯೂಥ್ಸ್ ಹೀಗೆ ಬೀದೀಲಿ ಪ್ರತಿಭಟಿಸೋದು ನೋಡಿದರೆ ಕರುಳು ಚುರ್ ಅನ್ನುತ್ತೆ...’ ಎಂದು ಕಣ್ಣೀರು ಒರೆಸಿಕೊಳ್ಳುತ್ತ ಹೇಳಿದ ಕಮಲ ಪಕ್ಷದ ಮುಖಂಡ ಮುದ್ದಣ್ಣ.

‘ಕ್ಯಾಮೆರಾ ಆಫ್ ಮಾಡಿದ ಮೇಲೂ ಆ್ಯಕ್ಟ್ ಮಾಡೋದು ನಿಲ್ಲಿಸ್ತಿಲ್ವಲ್ಲಯ್ಯ ನೀನು’ ನಗುತ್ತಾ ಹೇಳಿದ ಕೈ ಪಕ್ಷದ ನಾಯಕ ವಿಜಿ.

‘ಇಂತಹ ವಿಷಯ ಚರ್ಚೆಗೆ ಬಂದಾಗ ನಾನು ಫುಲ್ ಇನ್‌ವಾಲ್ವ್ ಆಗಿಬಿಡ್ತೀನಿ’ ಎಂದು ನಗುತ್ತಾ ಎಣ್ಣೆ ಗ್ಲಾಸ್ ಕೈಗೆತ್ತಿಕೊಂಡ ಮುದ್ದಣ್ಣ.

‘ಆದರೂ, ಮೊನ್ನೆ ಯುವಕರು ಪ್ರತಿಭಟನೆ ಮಾಡೋವಾಗ ನೀನು ಇನ್ನಷ್ಟು ಎಮೋಷನಲ್ ಆಗಬೇಕಿತ್ತು. ನಮ್ ಪಕ್ಷಕ್ಕೆ ಸ್ವಲ್ಪ ಜಾಸ್ತೀನೆ ಬೈಬೇಕಿತ್ತು’.

‘ನೀನೂ ಅಷ್ಟೇ, ನೀವು ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸ್ತೀವಿ ಅಂದ್ರಲ್ಲ, ಯಾಕ್ ಮಾಡಿಲ್ಲ ಅಂತ ಹೇಳೋವಾಗ ಕಣ್ಣುಗಳನ್ನು ಇನ್ನಷ್ಟು ಕೆಂಪಗೆ ಮಾಡ್ಕೊಬೇಕಿತ್ತು. ಜೋರಾಗಿ ಹಲ್ಲು ಕಚ್ಚಿ ಹೇಳಿದ್ರೆ ತುಂಬಾ ಎಫೆಕ್ಟಿವ್ ಆಗಿರೋದು’ ಎಂದು ಸಿನಿಮಾ ಡೈರೆಕ್ಟರ್ ರೀತಿ ಹೇಳಿದ ಮುದ್ದಣ್ಣ.

‘ಹೌದು, ನನಗೂ ಹಾಗೇ ಅನಿಸ್ತು. ಆಮೇಲೆ, ನೀನು ಒಳಮೀಸಲಾತಿ ಕಾರಣ ಲೇಟಾಯ್ತು ಅಂತ ನೆಪ ಹೇಳ್ತಿದ್ಯಲ್ಲ, ಅದನ್ನ ನಡುಗುವ ದನಿಯಲ್ಲಿ, ಕಣ್ಣಂಚಲ್ಲಿ ಸ್ವಲ್ಪ ನೀರು ತಂದುಕೊಂಡು ಹೇಳಿದ್ರೆ ಪ್ರತಿಭಟನಾಕಾರರೆಲ್ಲ ಫ್ಲ್ಯಾಟ್ ಆಗಿಬಿಟ್ಟಿರೋರು’.

‘ನಮ್ಮ ನಮ್ಮ ಮಕ್ಕಳನ್ನ ಕಣ್ಮುಂದೆ ತಂದ್ಕೊಂಡ್ರೆ ಹಾಗೆಲ್ಲ ನ್ಯಾಚುರಲ್ ಆಗಿ ಕಣ್ಣಲ್ಲಿ ನೀರು ಬರುತ್ತೆ. ಬೇರೆಯವರ ಮಕ್ಕಳ ಪರವಾಗಿ ಮಾತನಾಡೋವಾಗ ಆ ಎಮೋಷನ್ಸ್ ಎಲ್ಲ ಹೇಗ್ ತಾನೆ ಬರುತ್ತೆ ಹೇಳು’ ಎಂದ ಮುದ್ದಣ್ಣ, ಹೊರಟು ನಿಂತ ವಿಜಿಗೆ ಕೇಳಿದ, ‘ಅದು ಸರಿ, ಈಗ ನೀನೆಲ್ಲಿಗೆ ಡ್ರಾಮಾ ಮಾಡೋಕೆ ಹೊರಟೆ’.

‘ನಮ್ ಎಮ್ಮೆಲ್ಲೆನ ಮಿನಿಸ್ಟರ್ ಮಾಡಿ, ನಮ್ ಡಿಸಿಎಂನ ಸಿಎಂ ಮಾಡಿ ಅಂತ ಪ್ರತಿಭಟಿಸೋಕೆ ಹೋಗಬೇಕಪ್ಪ’ ಎಂದು ಕಾಲ್ಕಿತ್ತ ವಿಜಿ.

ಚಾಟಿ


ಭಸ್ಮಾಸುರ ಹಸ್ತ



ಕೆರೆಗಳ ಬಫರ್ ಜೋನ್ ಕಡಿಮೆ ಮಾಡಿ, ಈಗ ಮೇಕೆದಾಟು ಎಂಬ ದುಷ್ಟ ಯೋಜನೆಗೆ ಸರ್ಕಾರ ಕೈಇಟ್ಟಿದೆ. ನಗರದೊಳಗಿನ ಕೆರೆ ಮುಚ್ಚಿ, ಸಣ್ಣ ಕಾಡು, ಪಾರ್ಕ್‌ಗಳನ್ನು ನುಂಗಿ ನೀರಿಗಾಗಿ ಬೆಂಗಳೂರಿನ ಆಕ್ಸಿಜನ್ ಪ್ಲಾಂಟ್ ಆದಂತಹ ಕಾವೇರಿ ತಡೆಯಲು ಹೊರಟಿದ್ದಾರೆ. ಇದರರ್ಥ, ಎಲ್ಲವೂ ನಾಶ; ಕರ್ನಾಟಕಕ್ಕೆ ಉಳಿಗಾಲವಿಲ್ಲ.

ಶಿವಾನಂದ ಗುಂಡನವರ್, ಎಂಜಿನಿಯರ್, ‘ಎಕ್ಸ್’ನಿಂದ

ಕಿಡಿನುಡಿ



ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ಮೂರು ವರ್ಷದಲ್ಲಿ ಭರ್ತಿಯಾಗಿರುವುದು ಕೇವಲ 8,157 ಹುದ್ದೆಗಳಷ್ಟೆ. 3,081 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಬಾಕಿಯಿದೆ. ಹಾಗಿದ್ದರೆ ಸಿದ್ದರಾಮಯ್ಯನವರು ಹೇಳಿರುವಂತೆ 40 ಸಾವಿರ ಹುದ್ದೆಗಳ ನೇಮಕಾತಿ ನಡೆದಿರುವುದು ಎಲ್ಲಿ?

ಸಿ.ಟಿ. ರವಿ, ಬಿಜೆಪಿ ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಸೋಮವಾರ, 26-2-2001

• **ಆಹಾರ ಸಂಸ್ಕರಣೆ: ಹೊಸ ನೀತಿ**

ನವದೆಹಲಿ, ಫೆ. 25 (ಪಿಟಿಐ)– ಬಹಳ ಕಾಲದಿಂದ ನಿರೀಕ್ಷಿಸಲಾಗುತ್ತಿರುವ ರಾಷ್ಟ್ರೀಯ ಆಹಾರ ಸಂಸ್ಕರಣೆ ನೀತಿಯನ್ನು ಸಂಸತ್ತಿನ ಪ್ರಸಕ್ತ ಬಜೆಟ್ ಅಧಿವೇಶನದಲ್ಲಿ ಪ್ರಕಟಿಸುವ ಸಾಧ್ಯತೆ ಇದೆ.

ಈ ವಲಯದಲ್ಲಿ ಭಾರಿ ಹಣ ಹೂಡಿಕೆಗೆ ಅಡ್ಡಿಯಾಗಿರುವ ಹಲವು ಅಡೆತಡೆಗಳನ್ನು ಹೊಸ ನೀತಿಯು ನಿವಾರಿಸಲಿದೆ. ಕೆಲವೊಂದು ಔಪಚಾರಿಕ ವಿಧಿವಿಧಾನಗಳ ಪೂರೈಕೆ ನಂತರ ಈ ನೀತಿಯನ್ನು ಪ್ರಸಕ್ತ ಅಧಿವೇಶನದಲ್ಲೇ ಪ್ರಕಟಿಸಲಾಗುವುದು ಎಂದು ಕೇಂದ್ರ ಕೃಷಿ ಸಚಿವರು ತಿಳಿಸಿದ್ದಾರೆ.

75 ವರ್ಷಗಳ ಹಿಂದೆ

ಸೋಮವಾರ, 26-2-1951

• **ಸಂಸ್ಥಾನದ ಅಸ್ತಿತ್ವಕ್ಕೆ ಅಪಾಯ: ಕಾಶ್ಮೀರ ಪ್ರಧಾನಿ ಷೇಕ್ ಅಬ್ದುಲ್ಲಾ**

ನವದೆಹಲಿ, ಫೆ. 25– ಕಾಶ್ಮೀರ ಸಮಸ್ಯೆಯ ಬಗ್ಗೆ ಈಗ ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಮುಂದೆ ಇರುವ ಬ್ರಿಟನ್ ಮತ್ತು ಅಮೆರಿಕಾಗಳ ಕರಡು ನಿರ್ಣಯವನ್ನು ಕುರಿತು, ಜಮ್ಮು ಮತ್ತು ಕಾಶ್ಮೀರ ಸಂಸ್ಥಾನಗಳ ಪ್ರಧಾನಿ ಷೇಕ್ ಅಬ್ದುಲ್ಲಾ ಸಂಪೂರ್ಣ ನಿರಾಶೆ ವ್ಯಕ್ತಪಡಿಸಿದ್ದು, ‘ರಾಷ್ಟ್ರದ ಭವಿಷ್ಯ ನಿರ್ಧಾರ ಜನತೆಗೆ ಸೇರಿದ್ದು’ ಎಂದು ಹೇಳಿದ್ದಾರೆ.

ಓವನ್ ಡಿಕ್ಸನರ ಸಲಹೆಗಳು, ಕಾಮನ್ವೆಲ್ತ್ ಪ್ರಧಾನಿಗಳ ಮಾತುಕತೆಗಳು ಮತ್ತು ಈಚಿನ ಬ್ರಿಟನ್ ಮತ್ತು ಅಮೆರಿಕಾಗಳ ನಿರ್ಣಯ, ಇವೆಲ್ಲವುಗಳಿಂದ ರಾಷ್ಟ್ರದ ಭದ್ರತೆಗೆ ಧಕ್ಕೆ ಬರುವುದು, ವಿಭಜನೆಯ ಮೂಲಕ ದೇಶ ಹೋಳಾಗುವುದು, ಸರ್ಕಾರದ ಸಾರ್ವಭೌಮತ್ವವನ್ನು ನಿರ್ಬಂಧಿಸಿದಂತಾಗುವುದು ಎಂದು ಕಾಶ್ಮೀರ ಪ್ರಧಾನಿ ಅಭಿಪ್ರಾಯಪಟ್ಟರು.

ಸಂಗತ

ಸಿನಿಮಾ ನೋಡಲಿಕ್ಕೆ ಅಭಿಮಾನವಷ್ಟೇ ಸಾಕೆ?

ಪ್ರೇಕ್ಷಕ ಸಿನಿಮಾ ನೋಡಬೇಕೆಂದು ಒತ್ತಾಯಿಸುವವರು ‘ಒಳ್ಳೆಯ ಸಿನಿಮಾ’ ನಿರ್ಮಿಸುವ ಬದ್ಧತೆ ಹೊಂದಿರಬೇಕು. ಮಾಡಿದ್ದನ್ನು ನೋಡಿ ಎನ್ನಬಾರದು.

• ಅಭಿಲಾಷ್ ಪಿ.ಎಸ್.

ವರನಟ ರಾಜ್‌ಕುಮಾರ್ ಅವರು ಪ್ರೇಕ್ಷಕರನ್ನು ‘ಅಭಿಮಾನಿ ದೇವರುಗಳು’ ಎಂದರು. ಹಿರಿಯ ನಟ ರವಿಚಂದ್ರನ್ ಅವರ ಪಾಲಿಗೆ, ಪ್ರೇಕ್ಷಕರು ಶಸ್ತ್ರಚಿಕಿತ್ಸೆ ಮಾಡುವ ವೈದ್ಯರು! ‘ಸಿನಿಮಾ ಚಿಕಿತ್ಸೆ’ ಕುರಿತ ಅವರ ಚಿಂತನೆ ಹೀಗಿದೆ:

‘ಪ್ರತಿ ಸಿನಿಮಾವನ್ನು ಚಿತ್ರಮಂದಿರಕ್ಕೆ ತರುವುದು ಹೆರಿಗೆ ನೋವಿನಂತೆಯೇ. ಆಪರೇಷನ್ ಮಾಡುವುದು ಪ್ರೇಕ್ಷಕರು. ಆಪರೇಷನ್ ಮಾಡದೇ ಇದ್ದರೆ ಸಿನಿಮಾಗಳು ಅಲ್ಲಲ್ಲೇ ಸತ್ತು ಹೋಗುತ್ತವೆ. ಮೊದಲು ಅವುಗಳನ್ನು ಬದುಕಿಸಿರಿ. ಪ್ರೇಕ್ಷಕರಾಗಿ ಸಿನಿಮಾಗೆ ಹೋಗಿ, ವಿಮರ್ಶೆ ಮಾಡಲು ಹೋಗಬೇಡಿ. ಸಿನಿಮಾ ಚೆನ್ನಾಗಿಲ್ಲ ಅಂದ್ರೆ ನೂರು ರೂಪಾಯಿ ನಷ್ಟ ಮಾಡಿಕೊಳ್ಳಿ, ಪರವಾಗಿಲ್ಲ. ಆಸೆ ಪಟ್ಟು ಸಿನಿಮಾ ಮಾಡುವವನಿಗೆ ನೂರು ರೂಪಾಯಿ ಕೊಡುವುದಕ್ಕೆ ಆಗುವುದಿಲ್ಲವೆ? ಒಂದಷ್ಟು ಸಿನಿಮಾಗಳನ್ನು ಗೆಲ್ಲಿಸಿ, ನಿಮ್ಮ ಗಂಟೇನೂ ಹೋಗುವುದಿಲ್ಲ...’

ಚಲನಚಿತ್ರವೊಂದರ ಟ್ರೇಲರ್ ಬಿಡುಗಡೆ ಸಂದರ್ಭದಲ್ಲಿ ರವಿಚಂದ್ರನ್ ಅವರು ಕೊಂಚ ಏರುದನಿಯಲ್ಲಿಯೇ ಆಡಿದ ಮಾತುಗಳು ಈ ಹೊತ್ತಿನ ಚಿತ್ರೋದ್ಯಮದ ಸ್ಥಿತಿ ಹಾಗೂ ಹತಾಶೆಯನ್ನು ಸೂಚಿಸುವಂತಿವೆ.

ಚಲನಚಿತ್ರ ನಿರ್ಮಾಣ ಮಾಡಿದವರೆಲ್ಲರೂ ಮಾಧ್ಯಮದ ಮೇಲಿನ ಪ್ರೀತಿ, ಕನಸು, ವ್ಯವಹಾರದ ದೃಷ್ಟಿಯಿಂದಲೇ ಸಿನಿಮಾ ಮಾಡಿರುತ್ತಾರೆ ಎನ್ನುವುದನ್ನು ಒಪ್ಪೋಣ. ಆದರೆ, ಉದ್ಯಮವನ್ನು ಉದ್ಧಾರ ಮಾಡಲಿಕ್ಕಾಗಿ ಪ್ರೇಕ್ಷಕ ಸಿನಿಮಾ ನೋಡಬೇಕೆಂದು ಬಯಸುವುದನ್ನು ಹೇಗೆ ಒಪ್ಪುವುದು? ತಾರ್ಕಿಕವಾಗಿ ಇದು ಅಸಾಧ್ಯವೂ ಹೌದು. ರವಿಚಂದ್ರನ್ ಅವರ ಮಾತು ಒಪ್ಪುವುದಾದರೆ, ಪ್ರೇಕ್ಷಕ ಬಿಡುಗಡೆ ಆಗುವ ಎಲ್ಲ ಸಿನಿಮಾ ನೋಡಬೇಕು. ಅದು ಸಾಧ್ಯವೆ?



ಇಪ್ಪತ್ತೆಂಟು ದಿನಗಳಿರುವ ಈ ಫೆಬ್ರುವರಿಯ ಕಳೆದ ಮೂರು ಶುಕ್ರವಾರಗಳಲ್ಲಿ 26 ಸಿನಿಮಾಗಳು ತೆರೆಕಂಡಿವೆ. ಫೆ. 27ರಂದು ಮತ್ತೆ ಐದಾರು ಸಿನಿಮಾ ತೆರೆಕಾಣುತ್ತಿವೆ. ಅಂದರೆ, ಫೆಬ್ರುವರಿಯಲ್ಲಿ ದಿನಗಳ ಸಂಖ್ಯೆಗಿಂತ ತೆರೆಕಂಡ ಸಿನಿಮಾಗಳೇ ಹೆಚ್ಚು. ರವಿಚಂದ್ರನ್ ಅವರ ಮಾತನ್ನು ಅನುಸರಿಸಿದರೆ, ಇಷ್ಟು ಸಿನಿಮಾಗಳನ್ನು ನೋಡಲು ಪ್ರೇಕ್ಷಕ ಕನಿಷ್ಠ ₹3,000 ಎತ್ತಿಡಬೇಕು. (ನೂರು ರೂಪಾಯಿಗೆ ಸಿನಿಮಾ ನೋಡಿ ಬರಲು ಸಾಧ್ಯವಿಲ್ಲ ಎನ್ನುವುದು ಬೇರೆ ಮಾತು). ಜೊತೆಗೆ ತಿಂಗಳಿಗೆ 70–80 ಗಂಟೆಗಳನ್ನು ಸಿನಿಮಾ ನೋಡಲು ಮೀಸಲಿಡಬೇಕು. ವರ್ಷಕ್ಕೆ ಕನಿಷ್ಠ 200–210 ಕನ್ನಡ ಸಿನಿಮಾಗಳು ಬಿಡುಗಡೆಯಾಗುತ್ತಿವೆ. ಇಷ್ಟೂ ಸಿನಿಮಾ ನೋಡದೇ ಹೋದರೆ, ರವಿಚಂದ್ರನ್ ಅವರ ಮಾತಿನ ಇಂಗಿತದಂತೆ ‘ಶಿಶು ಹತ್ಯೆ’ಯ ಪಾಪ ತಟ್ಟುತ್ತದೆ!

ಸಿನಿಮಾ ಹಸಿವೆ ಇದ್ದಂತೆ. ಹೋಟೆಲ್‌ನ ಬಿಲ್‌ಕೌಂಟರ್ ಪಕ್ಕದಲ್ಲಿ ತಟ್ಟೆಗಳಲ್ಲಿ ತಿಂಡಿಗಳನ್ನು ಇರಿಸಿ ಪ್ಲಾಸ್ಟಿಕ್ ಹಾಳೆಯಲ್ಲಿ ಮುಚ್ಚಿಡಲಾಗಿರುತ್ತದೆ. ಆ ದಿನದ ವಿಶೇಷ ತಿನಿಸುಗಳವು. ಅವುಗಳನ್ನು ನೋಡಿದ ಗ್ರಾಹಕರು ತಮ್ಮಿಷ್ಟದ ಖಾದ್ಯ ಖರೀದಿಸಬಹುದು, ಖರೀದಿಸದೆಯೂ ಇರಬಹುದು. ಅದು ಅವನ ಹಸಿವೆ, ರುಚಿಪ್ರಜ್ಞೆ ಹಾಗೂ ಕೊಳ್ಳುವ ಸಾಮರ್ಥ್ಯಕ್ಕೆ ಸಂಬಂಧಿಸಿದ್ದು. ಸಿನಿಮಾ ಕೂಡ ಹೀಗೆಯೇ. ಪ್ರೇಕ್ಷಕನೊಬ್ಬ ಚಿತ್ರಮಂದಿರಕ್ಕೆ ಹೋಗುವ ಮೊದಲು ಹತ್ತಾರು ಬಾರಿ ಯೋಚಿಸುತ್ತಾನೆ. ಹೀರೊ–ನಿರ್ದೇಶಕ ಯಾರು? ಕಥೆ ಹೇಗಿದೆ? ಟೀಸರ್–ಟ್ರೇಲರ್ ಹೇಗಿದೆ? ನೋಡಿ ಬಂದವರ ಅಭಿಪ್ರಾಯವೇನು? ಹೀಗೆ ಎಲ್ಲವನ್ನೂ ಗಮನಿಸಿಯೇ ಚಿತ್ರಮಂದಿರಕ್ಕೆ ಹೆಜ್ಜೆ ಇಡುತ್ತಾನೆ. ಒಟಿಟಿ ಎಂಬ ಆನ್‌ಲೈನ್ ಅಡುಗೆಕೋಣೆಯಲ್ಲಿ ಬಹುತೇಕ ಎಲ್ಲಾ ಪದಾರ್ಥಗಳ ರುಚಿ ನೋಡಿರುವ ಪ್ರೇಕ್ಷಕ ಚಿತ್ರಮಂದಿರದೊಳಗೆ ಹೆಜ್ಜೆ ಇಟ್ಟಾಗ ಹೊಸ ರುಚಿ ಬಯಸುತ್ತಾನೆ. ಹಳೆಯದನ್ನೇ ಬಡಿಸಿದರೆ ಕಮೆಂಟ್, ಡಿಸ್‌ಲೈಕ್ ಮಾಡದೆ ಆತ ಮತ್ತಿನ್ನೇನು ಮಾಡಲು ಸಾಧ್ಯ. ರುಚಿ ಇಲ್ಲದ ತಿಂಡಿ–ಊಟವನ್ನು ಉಚಿತವಾಗಿಯೂ ಗಂಟಲಿಗಿಳಿಸಿಕೊಳ್ಳಲಾರ. ಜೇಬಲ್ಲಿ ನೂರು ರೂಪಾಯಿ ಇದೆ ಎಂದು ಸುಮ್ಮನೆ ಸಿನಿಮಾಗೆ ಹೋಗುವ ಕಾಲವೂ ಇದಲ್ಲ.

ಪ್ರೇಕ್ಷಕರನ್ನು ಸಿನಿಮಾ ನೋಡಲು ಒತ್ತಾಯಿಸುವ ಬದಲು, ಸಿನಿಮಾಗಳ ಬಿಡುಗಡೆಯ ವ್ಯವಸ್ಥೆಯನ್ನು ಕ್ರಮಬದ್ಧಗೊಳಿಸುವುದು ಮುಖ್ಯ. ಸಿನಿಮಾ ಬಿಡುಗಡೆ ಸಂಖ್ಯೆಗೆ ಕಡಿವಾಣ ಹಾಕುವವರು ಯಾರು? ಯಾರ ಬಳಿಯೂ ಇದಕ್ಕೆ ಉತ್ತರವಿಲ್ಲ. ಎಲ್ಲರೂ ಸ್ವತಂತ್ರರು. ಅವರವರ ಇಷ್ಟ ಎನ್ನುತ್ತಾರೆ ಆಯಾ ಸಿನಿಮಾದ ನಿರ್ಮಾಪಕರು. ಹಾಗಿದ್ದಾಗ ಸಿನಿಮಾ ಸೋತಾಗ ಜನರತ್ತ ಬೊಟ್ಟು ಮಾಡಿ ಪ್ರಯೋಜನ ಏನು? ಜನರಿಗೆ ಸಿನಿಮಾ ನೋಡಿ ಎಂದು ಮನವಿ ಮಾಡಿ, ಏರುದನಿಯಲ್ಲಿ ಮಾತನಾಡಿ ಉಪಯೋಗವೇನು?

ತಾವು ಮಾಡಿದ್ದನ್ನು ನೋಡಬೇಕು ಎನ್ನುವ ಸಿನಿಮಾ ಮಂದಿಯ ಧೋರಣೆಯಲ್ಲಿ ಸಿನಿಮಾ ಪ್ರೀತಿಗಿಂತಲೂ ಪ್ರೇಕ್ಷಕರ ಬಗೆಗಿನ ತಿರಸ್ಕಾರವೇ ಎದ್ದು ಕಾಣಿಸುತ್ತದೆ. ಸಿನಿಮಾ ಮಾಡುವವರು ಯಾಕಾಗಿ ಸಿನಿಮಾ ಮಾಡುತ್ತಿದ್ದೇವೆ ಎಂದು ತಮ್ಮನ್ನು ಪ್ರಶ್ನಿಸಿಕೊಂಡರೆ, ಅರ್ಧ ಗೊಂದಲ ಬಗೆಹರಿದಂತೆ. ಸಿನಿಮಾ ಬಗೆಗಿನ ಟೀಕೆಟಿಪ್ಪಣಿಗಳು ಇಂದಿನ ಚಿತ್ರತಂಡಗಳಿಗೆ ಬೇಕಾಗಿಲ್ಲ. ವಿಮರ್ಶೆಗಳನ್ನು ಹತ್ತಿಕ್ಕಲು ಕೋರ್ಟ್ ಮೊರೆ ಹೋಗುವ ಚಿತ್ರತಂಡಗಳೂ ಇವೆ. ಸುದ್ದಿಗೋಷ್ಠಿಗಳಲ್ಲೂ ತಮ್ಮ ಸಿನಿಮಾ ಬಗ್ಗೆ ನಿರ್ಮಾಪಕರು ಹಾಗೂ ನಿರ್ದೇಶಕರು ಮಾತನಾಡುವುದು ಕಡಿಮೆ.

ಕನ್ನಡ ಚಿತ್ರರಂಗದ ಯಶಸ್ಸಿನ ಪ್ರಮಾಣ ಇತ್ತೀಚಿನ ವರ್ಷಗಳಲ್ಲಿ ಶೇ 2–3ಕ್ಕೆ ಕುಸಿದಿದೆ. ‘ಸಿನಿಮಾ ನೋಡಿ’ ಎಂದು ಜನರಿಗೆ ಮನವಿ ಮಾಡಿ ಪ್ರಯೋಜನವಿಲ್ಲ. ರುಚಿಯಾಗಿರುವ ಊಟ ಬಡಿಸಿದರೆ ನೂರಲ್ಲ, ₹200–₹300 ಕೊಟ್ಟಾದರೂ ಜನ ಸಿನಿಮಾ ನೋಡುತ್ತಾರೆ; ಇತರರನ್ನೂ ಸಿನಿಮಾ ನೋಡಲು ಪ್ರೇರೇಪಿಸುತ್ತಾರೆ. ಅದಕ್ಕೆ ಉದಾಹರಣೆಗಳು ನಮ್ಮಲ್ಲೇ ಎಷ್ಟಿಲ್ಲ? ಆಗಬೇಕಿರುವುದು ಪ್ರೇಕ್ಷಕರ ವಿಶ್ವಾಸವನ್ನು ಮರಳಿ ಗಳಿಸಿಕೊಳ್ಳುವುದು. ಭಾವುಕತೆಯಿಂದ ಸಿನಿಮಾಗಳನ್ನು ಗೆಲ್ಲಿಸಿಕೊಳ್ಳಲಾಗದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಲಿಂಗತ್ವ ಅಲ್ಪಸಂಖ್ಯಾತರ ಲೋಕದಲ್ಲಿ..

ದೇಶದಲ್ಲಿಯೇ ಮೊದಲ ಬಾರಿಗೆ ರಾಜ್ಯದಲ್ಲಿ ಸಮೀಕ್ಷೆ; ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಅನಾವರಣ


• ರಾಜೇಶ್ ರೈ ಚಟ್ಲ

ಲಿಂಗತ್ವ ಅಲ್ಪಸಂಖ್ಯಾತರನ್ನು ಸಮಾಜದ ಮುಖ್ಯವಾಹಿನಿಯಲ್ಲಿ ವಿಲೀನಗೊಳಿಸಿ, ಅವರ ಬದುಕಿನ ಗುಣಮಟ್ಟ ಸುಧಾರಿಸುವ ಉದ್ದೇಶದಿಂದ ರಾಜ್ಯ ಸರ್ಕಾರ 2017ರಲ್ಲಿ 'ಕರ್ನಾಟಕದ ಅಲ್ಪಸಂಖ್ಯಾತರ ನೀತಿ' ಜಾರಿಗೆ ತಂದಿದೆ. ಮುಂದುವರಿದು, ಅವಮಾನ, ತಾರತಮ್ಯ, ಖಿನ್ನತೆ, ಆತ್ಮಹತ್ಯಾ ಪ್ರವೃತ್ತಿಯಿಂದ ಅವರನ್ನು ಹೊರತರಬೇಕು. ಜತೆಗೆ ಈ ವರ್ಗದವರ ನೆರವಿಗಾಗಿ 'ಲಿಂಗತ್ವ ಅಲ್ಪಸಂಖ್ಯಾತರ ಕ್ಷೇಮಾಭಿವೃದ್ಧಿ ಮಂಡಳಿ' ಸ್ಥಾಪಿಸುವ ಮೂಲ ಉದ್ದೇಶದಿಂದ ಇಡೀ ದೇಶದಲ್ಲಿಯೇ ಕರ್ನಾಟಕದಲ್ಲಿ ಮೊದಲ ಬಾರಿಗೆ ಲಿಂಗತ್ವ ಅಲ್ಪಸಂಖ್ಯಾತರ ಸಮೀಕ್ಷೆ ನಡೆಸಲಾಗಿದೆ. ರಾಜ್ಯದ ಎಲ್ಲ 31 ಜಿಲ್ಲೆಗಳಲ್ಲಿ 2025ರ ಸೆ. 15ರಿಂದ ನ. 21ರವರೆಗೆ ನಡೆದ ಸಮೀಕ್ಷೆಯಲ್ಲಿ ಈ ವರ್ಗದ ಸಂಪೂರ್ಣ ಚಿತ್ರಣ ಲಭ್ಯವಾಗಿದೆ. ಸಮೀಕ್ಷೆಯಲ್ಲಿ ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿ, ವಾಸಸ್ಥಳ, ವಲಸೆ, ಕುಟುಂಬದ ಮೇಲಿನ ಅವಲಂಬನೆ, ಉದ್ಯೋಗ, ಆದಾಯ ಸೇರಿದಂತೆ ಹಲವು ರೀತಿಯ ಮಾಹಿತಿ ಸಂಗ್ರಹಿಸಲಾಗಿದೆ.

ರಾಜ್ಯದಲ್ಲಿ ಒಟ್ಟು 10,365 ಲಿಂಗತ್ವ ಅಲ್ಪಸಂಖ್ಯಾತರು ಇದ್ದು, ಈ ಪೈಕಿ 5,509 ಮಂದಿ ಗ್ರಾಮೀಣ ಪ್ರದೇಶದಲ್ಲಿದ್ದಾರೆ; ನಗರ ಪ್ರದೇಶದಲ್ಲಿ 3,589 ಮಂದಿ ನೆಲಸಿದ್ದಾರೆ. ಒಟ್ಟು ಜನರಲ್ಲಿ 10,106 ಮಂದಿ ಕರ್ನಾಟಕದವರು. 114 ಮಂದಿ ಆಂಧ್ರಪ್ರದೇಶ, ಕೇರಳ, ಮಹಾರಾಷ್ಟ್ರ, ತಮಿಳುನಾಡು, ತೆಲಂಗಾಣ ಮತ್ತಿತರ ರಾಜ್ಯಗಳಿಂದ ವಲಸೆ ಬಂದವರು. 1,461 ಮಂದಿ ಲಿಂಗ ದೃಢೀಕರಣ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ.

ವೈವಾಹಿಕ ಸ್ಥಿತಿಗತಿ

4,735 (46.20%)	5,444	71
ವಿವಾಹಿತರು	ಅವಿವಾಹಿತರು	ಮಾಹಿತಿ ನೀಡದವರು


ಕಲೆ: ಸಂತೋಷ್ ಸಸಿಹಿತ್ಲು

ಮಕ್ಕಳ ಶಿಕ್ಷಣಕ್ಕೆ ಕುತ್ತು

ಸಮೀಕ್ಷೆಯಲ್ಲಿ 18 ವರ್ಷದ ಒಳಗಿನ 115 ಲಿಂಗತ್ವ ಅಲ್ಪಸಂಖ್ಯಾತ ಮಕ್ಕಳು ಇರುವುದನ್ನು ಗುರುತಿಸಲಾಗಿದೆ. 26 ಮಕ್ಕಳು ಕಾಲೇಜು ಶಿಕ್ಷಣ, 9 ಮಂದಿ ಶಾಲಾ ಶಿಕ್ಷಣ ಪಡೆದಿದ್ದಾರೆ. 80 ಮಕ್ಕಳು ವಿದ್ಯಾಭ್ಯಾಸದ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ. 6 ಮಕ್ಕಳು ಶಾಲಾ ಹಂತದಲ್ಲೇ ಶಿಕ್ಷಣ ಮೊಟಕುಗೊಳಿಸಿದ್ದರೆ, 19 ಮಕ್ಕಳು ಕಾಲೇಜಿನಲ್ಲಿ ಇರುವಾಗಿ ಅರ್ಧಕ್ಕೆ ನಿಲ್ಲಿಸಿರುವುದು ಗೊತ್ತಾಗಿದೆ.

ಶಿಕ್ಷಣಕ್ಕಾಗಿ 53 ಮಕ್ಕಳು ಆರ್ಥಿಕ ಸೌಲಭ್ಯ ಕೋರಿದ್ದು, ಮೂವರು ಮಾತ್ರ ವಿದ್ಯಾರ್ಥಿ ವೇತನ ಪಡೆಯುತ್ತಿದ್ದಾರೆ. 45 ಮಕ್ಕಳು ಶಾಲಾ ಕಾಲೇಜುಗಳಲ್ಲಿ ದೌರ್ಜನ್ಯಕ್ಕೆ ಒಳಗಾಗಿರುವುದು, 36 ಮಕ್ಕಳು ಶಾಲಾ ಕಾಲೇಜುಗಳಿಂದ ಹೊರದೂಡಲ್ಪಟ್ಟಿರುವುದು, 54 ಮಕ್ಕಳು ತಾರತಮ್ಯಕ್ಕೆ ಒಳಗಾಗಿರುವುದು ತಿಳಿದುಬಂದಿದೆ. ಚಿಕಿತ್ಸೆ ಪಡೆಯಲು ಆಸ್ಪತ್ರೆಗಳಿಗೆ ತೆರಳಿದ ವೇಳೆಯಲ್ಲಿಯೂ ಮಕ್ಕಳು ಒಂದಲ್ಲ ಒಂದು ರೀತಿಯಲ್ಲಿ ತಾರತಮ್ಯಕ್ಕೆ ಅಥವಾ ಅವಮಾನಕ್ಕೆ ಒಳಗಾಗಿರುವುದು ಸಮೀಕ್ಷೆಯಲ್ಲಿ ಬಹಿರಂಗವಾಗಿದೆ.

ವಸತಿ ಸೌಕರ್ಯ

ವರ್ಗ	ಸಂಖ್ಯೆ
ಮನೆ, ವಾಣಿಜ್ಯ ನಿವೇಶನ ಇರುವವರು	136
ಸ್ವಂತ ಮನೆ ಇರುವವರು	1,743
ಬಾಡಿಗೆ ಮನೆಯಲ್ಲಿ ಇರುವವರು	6,201

ಉದ್ಯೋಗ, ಆದಾಯ ಮಾಹಿತಿ

ರಾಜ್ಯ ಸರ್ಕಾರದ ಉದ್ಯೋಗಿಗಳು	48
ಕೇಂದ್ರ ಸರ್ಕಾರದ ಉದ್ಯೋಗಿಗಳು	13
ಖಾಸಗಿ ಸಂಸ್ಥೆಗಳಲ್ಲಿ	1,373
ಸ್ವಯಂಸೇವಾ ಸಂಸ್ಥೆಗಳಲ್ಲಿ	278
ಸ್ವಯಂ ಉದ್ಯೋಗ	689
ಉದ್ಯೋಗದ ಮಾಹಿತಿ ನೀಡಲು ನಿರಾಕರಿಸಿದವರು	7,849

ಯಾವ ಧರ್ಮದವರು ಎಷ್ಟು?

ಧರ್ಮ	ಸಂಖ್ಯೆ
ಹಿಂದುಗಳು	8,817
ಮುಸ್ಲಿಮರು	1,217
ಕ್ರಿಶ್ಚಿಯನರು	66
ಇತರ ಧರ್ಮ	49

ಲಿಂಗತ್ವ ಅಲ್ಪಸಂಖ್ಯಾತರು


20,666 — 2011ರ ಜನಗಣತಿಯಲ್ಲಿ ಗುರುತಿಸಿಕೊಂಡವರು

10,365 — (18 ವರ್ಷದ ಒಳಗಿನ 115 ಮಕ್ಕಳು ಸೇರಿ) ಸಮೀಕ್ಷೆಯಲ್ಲಿ ಗುರುತಿಸಿಕೊಂಡವರು

ಲಿಂಗತ್ವ ಅಲ್ಪಸಂಖ್ಯಾತರು (ಜಿಲ್ಲಾವಾರು)

18 ವರ್ಷ ದಾಟಿದವರು | 18 ವರ್ಷದ ಒಳಗಿನವರು

ಒಟ್ಟು: 10,250 | 115



ಶೈಕ್ಷಣಿಕ ಅಡೆತಡೆ

ಶಿಕ್ಷಣ ಪಡೆಯುವಾಗ ದೌರ್ಜನ್ಯಕ್ಕೆ ಒಳಗಾದವರು	3,382
ಶಿಕ್ಷಣ ಸಂಸ್ಥೆಗಳ ತಾರತಮ್ಯಕ್ಕೆ ಒಳಗಾದವರು	3,730
ಶಿಕ್ಷಣ ಮೊಟಕುಗೊಳಿಸಿದವರು	2,589

ಕೌಟುಂಬಿಕ ಆಸರೆ

ಕುಟುಂಬದಿಂದ ಸ್ವೀಕರಿಸಲ್ಪಟ್ಟವರು	6,214	(60.62%)
ಕುಟುಂಬದಿಂದ ದೂರ ಆದವರು	4,036 ಮಂದಿ	(39.38%)
ಕುಟುಂಬದ ಮೇಲೆ ಅವಲಂಬಿತರು	3,515	(34.29%)
ಕುಟುಂಬವನ್ನು ಅವಲಂಬಿಸದ ಸ್ವಾವಲಂಬಿಗಳು	6,664	(65.01%)

ಪಿಎಚ್.ಡಿ, ಎಂಬಿಬಿಎಸ್, ಬಿಇ ಪದವೀಧರರು

ಸಮೀಕ್ಷೆಯಲ್ಲಿ ಗುರುತಿಸಿದ ಲಿಂಗತ್ವ ಅಲ್ಪಸಂಖ್ಯಾತರಲ್ಲಿ ಐದು ಮಂದಿ ವೈದ್ಯಕೀಯ ಪದವಿ ಪಡೆದವರಿದ್ದಾರೆ. ಏಳು ಮಂದಿ ಕಾನೂನು ಪದವಿ, 34 ಮಂದಿ ತಾಂತ್ರಿಕ ಪದವಿ ಪಡೆದಿದ್ದಾರೆ. 1,123 ಎಸ್ಎಸ್ಎಲ್‌ಸಿ, 1,142 ಪಿಯುಸಿ/ಡಿಪ್ಲೊಮಾ, 357 ಜನರು ಬಿಎ, ಬಿಕಾಂ, ಬಿಎಸ್‌ಸಿ ಓದಿದ್ದರೆ, 120 ಮಂದಿ ಸ್ನಾತಕೋತ್ತರ ಪದವಿ ಮತ್ತು ಮೂವರು ಪಿಎಚ್.ಡಿ ಹಾಗೂ 1,290 ಮಂದಿ ವಿವಿಧ ಕೋರ್ಸ್‌ಗಳನ್ನು ಮುಗಿಸಿದ್ದಾರೆ.

ಶಿಫಾರಸುಗಳು

- ಮನೆಗಳಲ್ಲಿ ಪೋಷಕರಿಗೆ, ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು; ಶಿಕ್ಷಣಕ್ಕೆ ಆರ್ಥಿಕ ಸೌಲಭ್ಯ ಕಲ್ಪಿಸಬೇಕು
- ವಸತಿ ಶಾಲೆ ಮತ್ತು ವಿದ್ಯಾರ್ಥಿ ನಿಲಯಗಳಲ್ಲಿ ಅರ್ಜಿ ಹಾಕುವ ಎಲ್ಲ ಲಿಂಗತ್ವ ಅಲ್ಪಸಂಖ್ಯಾತ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಬೇಕು
- ಲಿಂಗತ್ವ ದೃಢೀಕರಣ ಶಸ್ತ್ರಚಿಕಿತ್ಸೆಗಾಗಿ ಕಾರ್ಯಕ್ರಮಗಳನ್ನು ರೂಪಿಸಬೇಕು, ಆಯುಷ್ಮಾನ್ ಭಾರತ್ ಕಾರ್ಡ್ ವಿತರಿಸಬೇಕು
- ಖಾಸಗಿ ಕ್ಷೇತ್ರದಲ್ಲಿ ಉದ್ಯೋಗ ದೊರೆಯುವಂತೆ ಯೋಜನೆ ರೂಪಿಸಬೇಕು; ಶೇ 1ರಷ್ಟು ಮೀಸಲಾತಿ ಕೊಡಬೇಕು
- ಕೌಶಲ್ಯಾಭಿವೃದ್ಧಿ ಇಲಾಖೆ ಮೂಲಕ ವಿಶೇಷ ತರಬೇತಿ ನೀಡಲು ಯೋಜನೆ ರೂಪಿಸಬೇಕು
- ವಸತಿ ಸೌಲಭ್ಯ ಕಲ್ಪಿಸಬೇಕು, ವಿಶೇಷ ಕ್ಯಾಂಪ್‌ಗಳ ಮೂಲಕ ಪಡಿತರ ಚೀಟಿ ನೀಡಬೇಕು
- ಸಾರ್ವಜನಿಕ ಸ್ಥಳಗಳಲ್ಲಿ ಪ್ರತ್ಯೇಕ ಶೌಚಾಲಯ, ನಿರೀಕ್ಷಣಾ ಕೊಠಡಿಗಳನ್ನು ನಿರ್ಮಿಸಬೇಕು
- ಸರ್ಕಾರದ ಯೋಜನೆಗಳು, ಸವಲತ್ತುಗಳಲ್ಲಿ ಆದ್ಯತೆ ನೀಡಬೇಕು
- ಭಿಕ್ಷಾಟನೆಯಲ್ಲಿ ತೊಡಗಿರುವವರಿಗೆ ಭಿಕ್ಷುಕರ ಪುನರ್ವಸತಿ ಕೇಂದ್ರದಲ್ಲಿ ನೆಲೆ ಕಲ್ಪಿಸಬೇಕು
- ಹಿರಿಯರಿಗೆ ವೃದ್ಧಾಶ್ರಮಗಳಲ್ಲಿ ವಾಸ್ತವ್ಯ ಕಲ್ಪಿಸಬೇಕು

ರಾಷ್ಟ್ರೀಯ

ಟ್ರಾಲಿ ಬ್ಯಾಗ್‌ನಲ್ಲಿತ್ತು ₹4.7 ಕೋಟಿ!


ಒಡಿಶಾದ ಗಣಿ ಇಲಾಖೆ ಅಧಿಕಾರಿ ಮನೆಯಲ್ಲಿ ದೊರೆತ ನಗದನ್ನು ಬುಧವಾರ ಜಾಗೃತ ದಳದ ಅಧಿಕಾರಿಗಳು ಎಣಿಕೆ ಮಾಡಿದರು — ಪಿಟಿಐ ಚಿತ್ರ

ಭುವನೇಶ್ವರ (ಪಿಟಿಐ): ಲಂಚ ಪ್ರಕರಣದಲ್ಲಿ ಬಂಧಿಸಲಾಗಿದ್ದ ಒಡಿಶಾ ಗಣಿ ಇಲಾಖೆ ಅಧಿಕಾರಿಯ ಮನೆಯಲ್ಲಿ ಟ್ರಾಲಿ ಬ್ಯಾಗ್‌ಗಳಲ್ಲಿ ತುಂಬಿಸಿಟ್ಟಿದ್ದ ₹4.27 ಕೋಟಿ ನಗದು ವಶಪಡಿಸಿಕೊಳ್ಳಲಾಗಿದೆ ಎಂದು ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಗಣಿ ಇಲಾಖೆ ಜಂಟಿ ನಿರ್ದೇಶಕ ದೇವವ್ರತ್ ಮೊಹಾಂತಿ ಅವರನ್ನು ಕಲ್ಲಿದ್ದಲು ಮಾರಾಟಗಾರರೊಬ್ಬರ ಬಳಿ ₹30 ಸಾವಿರ ಲಂಚ ಸ್ವೀಕರಿಸುವ ವೇಳೆ ರಾಜ್ಯ ಜಾಗೃತ ದಳ ಬಂಧಿಸಿತ್ತು.

ಭ್ರಷ್ಟಾಚಾರ ನಿಗ್ರಹ ದಳ ಈವರೆಗೆ ನಡೆಸಿದ ದಾಳಿಗಳಲ್ಲಿ ಇದು ಅತಿಹೆಚ್ಚು ಪ್ರಮಾಣದ ನಗದು' ಎಂದು ಜಾಗೃತ ದಳದ ನಿರ್ದೇಶಕ ಯಶ್ವಂತ್ ಜೇತ್ವಾ ಅವರು ತಿಳಿಸಿದ್ದಾರೆ.

'ಅಧಿಕಾರಿಯ ಭುವನೇಶ್ವರದ ಫ್ಲಾಟ್, ಭದ್ರಕ್ ಜಿಲ್ಲೆಯಲ್ಲಿರುವ ಮನೆ, ಕಟಕ್‌ನ ಕಚೇರಿಯಲ್ಲಿ ಶೋಧ ನಡೆದಿದೆ. ಎರಡು ಅಂತಸ್ತಿನ ಮನೆ, 130 ಗ್ರಾಂ ಚಿನ್ನ, 2,400 ಚದರ ಅಡಿ ಫ್ಲಾಟ್ ಪತ್ತೆಯಾಗಿವೆ. ಅಧಿಕಾರಿ ಹೆಸರಿನಲ್ಲಿರುವ 10 ಬ್ಯಾಂಕ್ ಖಾತೆ, 1 ಲಾಕರ್ ಪರಿಶೀಲಿಸಲಾಗುತ್ತಿದೆ. 2004ರಲ್ಲಿ ₹8000 ವೇತನಕ್ಕೆ ಕಿರಿಯ ಗಣಿ ಅಧಿಕಾರಿಯಾಗಿ ಮೊಹಾಂತಿ ಸರ್ಕಾರಿ ನೌಕರಿಗೆ ಸೇರಿದ್ದರು' ಎಂದು ಜಾಗೃತ ದಳ ತಿಳಿಸಿದೆ.

ಹಣಕಾಸಿನ ಕೊರತೆ ಹುದ್ದೆ ಭರ್ತಿಗೆ ಅಡ್ಡಿ

ಒಂದನೇ ಪುಟದಿಂದ...

'ಯುವ ನಿಧಿ' ಗ್ಯಾರಂಟಿ ಯೋಜನೆಯ ಮೂಲಕ ನಿರುದ್ಯೋಗಿಗಳನ್ನು ಸೆಳೆಯಲು ಆಡಳಿತಾರೂಢ ಕಾಂಗ್ರೆಸ್ ಬಯಸಿತ್ತು. ಪದವಿ ಮುಗಿಸಿದವರಿಗೆ ಪ್ರತಿ ತಿಂಗಳು ₹ 3 ಸಾವಿರ ಮತ್ತು ಡಿಪ್ಲೊಮಾ ಪಡೆದವರಿಗೆ ₹ 1,500 ನಿರುದ್ಯೋಗ ಭತ್ಯೆಯನ್ನು ಸರ್ಕಾರ ನೀಡುತ್ತಿದೆ. ಆದರೆ, ದೊಡ್ಡ ಸಂಖ್ಯೆಯಲ್ಲಿ ಹುದ್ದೆಗಳು ಖಾಲಿ ಇದ್ದರೂ, ಭರ್ತಿ ಮಾಡಲು ಸರ್ಕಾರ ತೋರಿಸುತ್ತಿರುವ ನಿರಾಸಕ್ತಿ ಉದ್ಯೋಗಾಂಕ್ಷಿಗಳನ್ನು ಕೆರಳಿಸಿದೆ.

ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಜಾರಿ, ಆರ್ಥಿಕ ಮಿತವ್ಯಯ ಮತ್ತು ರಾಜಕೀಯ ಇಚ್ಛಾಶಕ್ತಿಯ ಕೊರತೆ ನೇಮಕಾತಿ ವಿಳಂಬಕ್ಕೆ ಕಾರಣ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವೇತನದ ಆರ್ಥಿಕ ಹೊರೆ, ವಿಸ್ತರಿಸುತ್ತಿರುವ ಕಲ್ಯಾಣ ಬದ್ಧತೆಗಳು ಮತ್ತು ಮೀಸಲಾತಿಗೆ ಸಂಬಂಧಿಸಿದ ಪರಿಣಾಮಗಳಿಂದಾಗಿ ಖಾಲಿ ಹುದ್ದೆಗಳ ಭರ್ತಿ ಪ್ರಕ್ರಿಯೆ ನಿಧಾನವಾಗುತ್ತಿದೆ ಎಂದೂ ಅಧಿಕಾರಿಗಳು ಹೇಳುತ್ತಾರೆ.

'45 ಇಲಾಖೆಗಳಲ್ಲಿ ಮಂಜೂರಾದ ಒಟ್ಟು ಹುದ್ದೆಗಳು 7.74 ಲಕ್ಷ (ಮಂಡಳಿಗಳು ಮತ್ತು ನಿಗಮಗಳು ಸೇರಿದರೆ 11.73 ಲಕ್ಷ ಆಗುತ್ತದೆ). ಮುಂದಿನ ಐದು ವರ್ಷಗಳಲ್ಲಿ, ಎರಡು ಲಕ್ಷ ಹುದ್ದೆಗಳು ಖಾಲಿ ಆಗಲಿವೆ. ಆ ಮೂಲಕ, ಖಾಲಿ ಹುದ್ದೆಗಳ ಸಂಖ್ಯೆ ಇನ್ನಷ್ಟು ಹೆಚ್ಚಲಿದೆ. ನೇಮಕಾತಿ ವಿಳಂಬವು ಆಡಳಿತದ ಮೇಲೆ ಪರಿಣಾಮ ಬೀರುತ್ತಿದೆ. ನೇಮಕಾತಿಯ ಜೊತೆಗೆ, ಸಿಬ್ಬಂದಿ ತರಬೇತಿ ಕೇಂದ್ರಗಳನ್ನೂ ಉನ್ನತೀಕರಿಸಬೇಕಾದ ಅಗತ್ಯವಿದೆ' ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಹೇಳಿದರು.

2025-26ನೇ ಸಾಲಿನ ₹4.09 ಲಕ್ಷ ಕೋಟಿಯ ಬಜೆಟ್‌ನಲ್ಲಿ ಸಂಬಳಕ್ಕೆ ₹ 85,860 ಕೋಟಿ ಮತ್ತು ಪಿಂಚಣಿಗೆ ₹37,655 ಕೋಟಿ ಬದ್ಧ ವೆಚ್ಚವಾಗಿದೆ. ಇದು ಒಟ್ಟು ಬಜೆಟ್‌ನ ಶೇ 30ರಷ್ಟು ಆಗಿದೆ. ಜೊತೆಗೆ, ಸಾಲಗಳ ಮೇಲಿನ ಬಡ್ಡಿ ₹45,600 ಕೋಟಿ, ಐದು ಗ್ಯಾರಂಟಿ ಯೋಜನೆಗಳಿಗೆ ಒಟ್ಟು ₹51,034 ಕೋಟಿ ಮತ್ತು ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆಗೆ ₹42,018 ಕೋಟಿ ಮೀಸಲಿರಿಸಲಾಗಿದೆ. ಉಳಿದಂತೆ ಹೊಸ ನೇಮಕಾತಿ ಅಥವಾ ಅಭಿವೃದ್ಧಿ ಕಾರ್ಯಗಳಿಗಾಗಿ ಯಾವುದೇ ಹೆಚ್ಚುವರಿ ವೆಚ್ಚಕ್ಕೆ ಬಜೆಟ್‌ನಲ್ಲಿ ಅವಕಾಶ ಕಲ್ಪಿಸಿಲ್ಲ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ವಿಡಿಯೊ ತುಣುಕೊಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹಂಚಿಕೊಳ್ಳಲಾಗುತ್ತಿದೆ. ಚರಂಡಿಯ ಪಕ್ಕದಲ್ಲಿ ಕಾರನ್ನು ನಿಲ್ಲಿಸಿ, ಅದರಲ್ಲಿದ್ದ ಮಹಿಳೆಯನ್ನು ನೀರಿನೊಳಗೆ ತಳ್ಳುವ ದೃಶ್ಯಗಳನ್ನು ವಿಡಿಯೊ ಒಳಗೊಂಡಿದೆ. 'ವಿಪರೀತ ಎನ್ನುವಷ್ಟು ಮದ್ಯಸೇವನೆ ಮಾಡಿದ್ದ ಯುವತಿಯನ್ನು ರಾತ್ರಿ ಪಾರ್ಟಿಯ ನಂತರ ಚರಂಡಿಗೆ ಎಸೆಯಲಾಗಿದೆ. ಯುವತಿಯರು ಅತಿಯಾಗಿ ಆಧುನಿಕತೆ ಅಪ್ಪಿಕೊಂಡರೆ ಆಗುವುದು ಇದೇ. ಹೀಗಾಗಿ ನಿಮ್ಮ ಹಿರಿಯರು ಹೇಳುವುದನ್ನು ಕೇಳಿ. ಕನಿಷ್ಠ ಚರಂಡಿಗೆ ಎಸೆಯಲ್ಪಡುವುದರಿಂದ ತಪ್ಪಿಸಿಕೊಳ್ಳಬಹುದು' ಎಂದು ಪೋಸ್ಟ್ ಅನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ಮೊದಲು, ಇಂಥ ಘಟನೆ ಎಲ್ಲಿಯಾದರೂ ನಡೆದಿದೆಯೇ ಎನ್ನುವುದನ್ನು ತಿಳಿಯಲು ನಿರ್ದಿಷ್ಟ ಪದದ ಮೂಲಕ ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ, ಘಟನೆ ಪುಷ್ಟೀಕರಿಸುವ ಯಾವ ವರದಿಯೂ ಸಿಗಲಿಲ್ಲ. ಜಾಲತಾಣಗಳಲ್ಲಿ ವಿಡಿಯೊಗೆ ಬಂದ ಪ್ರತಿಕ್ರಿಯೆಗಳನ್ನು ಪರಿಶೀಲಿಸಿದಾಗ, ಕೆಲವರು ಇದು 2017ರ 'ಮಾಮ್' ಎನ್ನುವ ಹಿಂದಿ ಚಿತ್ರದ ದೃಶ್ಯ ಎಂದು ಪ್ರತಿಕ್ರಿಯಿಸಿದ್ದರು. ಯೂಟ್ಯೂಬ್‌ನಲ್ಲಿ ಸಿನಿಮಾಗಾಗಿ ಹುಡುಕಿದಾಗ, 'ಬಾಲಿವುಡ್ ಪ್ರೀಮಿಯಂ' ಚಾನೆಲ್‌ನಲ್ಲಿ ಚಿತ್ರ ಅಪ್‌ಲೋಡ್ ಆಗಿರುವುದು ಕಂಡಿತು. ಚಿತ್ರದ ಒಟ್ಟಾರೆ ಅವಧಿ 2.27 ಗಂಟೆ ಆಗಿದ್ದು, 24.04 ನಿಮಿಷದ ವೇಳೆ ಯುವತಿಯನ್ನು ಕಾರಿನಿಂದ ಎಳೆದು ಚರಂಡಿಗೆ ತಳ್ಳುವ ದೃಶ್ಯ ಬರುತ್ತದೆ. ಅಕ್ಷಯ್ ಖನ್ನಾ, ಶ್ರೀದೇವಿ ಮುಂತಾದವರು ನಟಿಸಿರುವ 'ಮಾಮ್' ಚಿತ್ರವನ್ನು ರವಿ ಉದ್ಯಾವರ ನಿರ್ದೇಶಿಸಿದ್ದು, ಬೋನಿ ಕಪೂರ್ ನಿರ್ಮಿಸಿದ್ದಾರೆ. ಸಿನಿಮಾದ ದೃಶ್ಯವೊಂದಕ್ಕೆ ವಾಸ್ತವದ ಕಥೆ ಕಟ್ಟಿ, ಅದನ್ನು ಹಂಚಿಕೊಳ್ಳುವ ಮೂಲಕ ಸುಳ್ಳು ಪ್ರತಿಪಾದನೆ ಮಾಡಲಾಗುತ್ತಿದೆ ಎಂದು ಫ್ಯಾಕ್ಟ್‌ಲಿ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಸಣ್ಣ ಬದಲಾವಣೆ

ನುಡಿ ಬೆಳಗು — ಪಿ.ಚಂದ್ರಿಕಾ



ಉಡಾಫೆ, ಠೇಂಕಾರದ ವ್ಯಕ್ತಿಯೊಬ್ಬ ಗುರುವಿನ ಬಳಿ ಬಂದು, 'ಲೋಕ ನಿನ್ನ ಕೈಲಿ ಅಸಾಧ್ಯವಾದದ್ದು ಆಗುತ್ತದೆ ಎನ್ನುತ್ತದೆ. ಅದಕ್ಕೆ ನನಗೆ ಪ್ರಮಾಣ ಬೇಕು' ಎಂದ. ಗುರು ನಕ್ಕು, 'ಮಿತ್ರ, ನನ್ನಿಂದ ಏನನ್ನು ಬಯಸುತ್ತಿರುವೆ ಸ್ಪಷ್ಟವಾಗಿ ಹೇಳು?' ಎಂದ. 'ಸರ್ವಜ್ಞನಾದ ನಿನಗೆ ನನ್ನ ಮಾತೇ ಅರ್ಥವಾಗುತ್ತಿಲ್ಲ' ವ್ಯಂಗ್ಯವಾಡುತ್ತಾನೆ ವ್ಯಕ್ತಿ. ಗುರು, 'ನಿರ್ದಿಷ್ಟವಾಗಿ ಏನನ್ನಾದರೂ ಹೇಳಿದರೆ ನನ್ನಿಂದ ಆಗುತ್ತದೋ ಇಲ್ಲವೋ ಎಂದು ಹೇಳಬಹುದು' ಎಂದ. ವ್ಯಕ್ತಿ ಮೊನಚಾಗಿ, 'ಓ ಸರ್ವಶಕ್ತನಾದ ಗುರುವೇ, ದೂರದಲ್ಲಿ ಆ ಬೆಟ್ಟ ಕಾಣುತ್ತಿದೆಯಲ್ಲಾ, ಅದು ನನ್ನ ಕಾಲ ಕೆಳಗೆ ಇರುವಂತೆ ಮಾಡಲಿಕ್ಕೆ ಆಗುತ್ತದಾ?' ಎನ್ನುತ್ತಾನೆ. ಗುರು ಬೆಟ್ಟವನ್ನು ನಿರುಕಿಸುತ್ತಾ, 'ಆಗುತ್ತದೆ' ಎಂದ. ವ್ಯಕ್ತಿಯು 'ನೀನು ಏನು ಹೇಳುತ್ತಿದ್ದೀಯೆ ಅದರ ಗಾಂಭೀರ್ಯದ ಅರಿವಿದೆಯೇ?' ಎಂದ. ಗುರು ಗಂಭೀರವಾಗಿ, 'ಚೆನ್ನಾಗೇ ಅರಿವಿದೆ. ಅದಕ್ಕೆ ನೀನು ಮಾಡಬೇಕಾದ್ದಿಷ್ಟೇ: ನನ್ನ ಹಿಂಬಾಲಿಸುವುದು' ಎಂದು ಉತ್ತರಕ್ಕೂ ಕಾಯದೇ ಎದ್ದು ಹೊರಟ.

ಕಡಿದಾದ ಬೆಟ್ಟವದು, ಬಿಸಿಲು ಬೇರೆ. ಗುರು ಯಾವ ಆಸರೆಯೂ ಇಲ್ಲದೇ ಹತ್ತುತ್ತಿದ್ದರೆ ಅವನನ್ನು ಪರೀಕ್ಷಿಸಲು ಬಂದ ವ್ಯಕ್ತಿ ಏದುಸಿರುಬಿಡುತ್ತಿದ್ದ. ಕೆಲ ಗಂಟೆಗಳ ನಂತರ ಇಬ್ಬರೂ ಬೆಟ್ಟದ ಮೇಲುಭಾಗಕ್ಕೆ ತಲುಪುತ್ತಾರೆ. ಕೋಪಗೊಂಡ ವ್ಯಕ್ತಿಯು 'ಬೆಟ್ಟ ನನ್ನ ಕಾಲ ಕೆಳಗೆ ಬಿದ್ದಿರಬೇಕು ಅಂದೆನೇ ಹೊರತು ಬೆಟ್ಟವನ್ನು ಹತ್ತಿಸು ಎಂದಲ್ಲ' ಎನ್ನುತ್ತಾ ನಿಂದಿಸಲು ಆರಂಭಿಸುತ್ತಾನೆ. ಗುರು ಶಾಂತಚಿತ್ತನಾಗಿ 'ಯಾವುದಾದರೂ ಸರಿಯೆ, ಬಾ ಎಂದರೆ ನಮ್ಮ ಬಳಿಗೆ ಬರುವುದಿಲ್ಲ. ಅದರಲ್ಲೂ ಪ್ರಕೃತಿಯ ಮೇಲೆ ಹಿಡಿತ ಸಾಧಿಸುವುದು ಅಷ್ಟು ಸುಲಭವಲ್ಲ. ಅದಕ್ಕೆ ಪರಿಶ್ರಮವೂ ಬೇಕು. ಪರಿಶ್ರಮವಿಲ್ಲದೆ ಪವಾಡ ನಡೆಯುವುದಿಲ್ಲ. ನೀನು ಆಶಿಸಿದೆ- ಅದೂ ಬಲವಾಗಿ. ಅದಕ್ಕೆ ನಾನು ನಿನಗೆ ದಾರಿ ತೋರಿಸಿದೆ. ಇಷ್ಟು ಹತ್ತಿ ಬಂದದ್ದರ ಆಯಾಸ ಇಷ್ಟು ಹೊತ್ತಿಗೆ ನಿನಗೆ ಮರೆತುಹೋಗಬೇಕಿತ್ತು. ಆದರೆ, ನಿನ್ನ ಜೀವನದಲ್ಲಿ ಏನು ನಡೆದಿದೆ ಎನ್ನುವುದರ ಅರಿವೇ ನಿನಗಾಗಿಲ್ಲ' ಎನ್ನುತ್ತಾನೆ. ವ್ಯಕ್ತಿಗೆ ಇನ್ನಷ್ಟು ಕೋಪ, 'ನೀರಡಿಕೆ, ಆಯಾಸ ಮತ್ತು ಹಸಿವು ಅಷ್ಟು ಬಿಟ್ಟರೆ ಇನ್ನೇನೂ ಆಗಲಿಲ್ಲ' ಎನ್ನುತ್ತಾನೆ. ಗುರು ಎಂದ, 'ಮೂರ್ಖ, ಬೆಟ್ಟ ಈಗ ನಿನ್ನ ಕಾಲ ಕೆಳಗೆ ಇದೆ. ಅದನ್ನು ನೀನು ಹತ್ತಿದ್ದೀಯೆ ಮತ್ತು ನಿನ್ನ ಅಪೇಕ್ಷೆಯ ಪ್ರಕಾರ ಗೆದ್ದಿದ್ದೀಯೆ. ಇದು ಮಹತ್ವದ್ದಲ್ಲವೇ?'. ಗುರುವಿನ ಮಾತುಗಳಿಂದ ವ್ಯಕ್ತಿಯ ಅಹಂಕಾರ ಒಡೆದು, ತಪ್ಪಾಯಿತೆಂದು ಕಾಲಿಗೆರಗಿದ.

ಮತ್ತೆ ಗುರುವೆಂದ: 'ನಿಜ, ಬೆಟ್ಟ ತಾನಾಗೇ ನಮ್ಮ ಕಾಲ ಕೆಳಗೆ ಬಂದು ಬೀಳುವುದು ಅಸಾಧ್ಯ. ಆದರೆ, ನಮ್ಮ ಸಾಧನೆಯಿಂದ ಬೆಟ್ಟವನ್ನು ಹತ್ತಬಲ್ಲೆವು. ಹಾಗೆ ಹತ್ತಿದ ಮೇಲೆ, ಅದಕ್ಕಾಗಿ ಪಟ್ಟ ಕಷ್ಟ ಮರೆಯುತ್ತದೆ; ಸಾಧನೆಯ ಸಾರ್ಥಕತೆ ನಮ್ಮ ಮನಸ್ಸಿನಲ್ಲಿ ಮೂಡುತ್ತದೆ. ಗೆಲ್ಲುವುದು ಎಂದರೆ ಯಾವುದನ್ನೋ ಕಾಲಕೆಳಗೆ ಹಾಕಿ ತುಳಿಯುವುದೆಂದುಕೊಳ್ಳಬೇಡ. ನಮ್ಮ ಆಲೋಚನೆಯಲ್ಲಿ ಸಣ್ಣ ಬದಲಾವಣೆ ಬೇಕು. ಆಗ ನಮ್ಮನ್ನು ಅದು ಮಹತ್ವದ ಕಡೆಗೆ ಕರೆದೊಯ್ಯುತ್ತದೆ'.

ನಮ್ಮ ಆಲೋಚನೆಗಳನ್ನು ಅಹಂ ಇಲ್ಲದೆ ಕ್ರಿಯಾತ್ಮಕವಾಗಿಸಿಕೊಂಡರೆ ಅದಕ್ಕಿಂತ ದೊಡ್ಡದು ಯಾವುದೂ ಇಲ್ಲ.

ಗುಂಡಣ್ಣ



ಪದಬಂಧ 6327

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಇತರರಿಗೆ ವಹಿಸಿ ಕೊಡುವುದು (4)
5.ಸಪೂರವಾದ ಸೊಂಟ (4)
6.ಹಾಡಿನ ಪುನರಾವರ್ತನೆಗೊಳ್ಳುವ ಭಾಗ (3)
9.ಮಣ ಭಾರದ ಹೆಣವನ್ನು ಸಾಗಿಸಿದ ಜಾಗ (3)
10.ದಾಯಾದಿ ಜಗಳವಿದು (5)
11.ಪರಿಶುದ್ಧವಾದುದನ್ನು ಹೀಗೆನ್ನಿ (3)
12.ವೇಗ ಅಥವಾ ಶೀಘ್ರತೆ (3)
14.ಮಾಡಿದ ತಪ್ಪು ಕೆಲಸಕ್ಕೆ ಮರುಗುವಿಕೆ (4)
17.ಉಪಾಯಕ್ಕೊಂದು ಪರ್ಯಾಯ ಪದ (4)

ಮೇಲಿಂದ ಕೆಳಕ್ಕೆ
1.ಅತಿಯಾದ ದುಃಖ (4)
2.ಕಣ್ಣಿನ ಎವೆ (2)
3.ಕಂಬದ ಹತ್ತಿರ ನಿಂತು ತೋರಿದ ಒಣ ಆಡಂಬರ (2)
4.ಈತ ಅತೀ ಬುದ್ಧಿವಂತ (4)
7.ವಿಶೇಷವಾದ ಜ್ಞಾನ (3)
8.ಕರ ಕೊನೆಗೆ ಇಟ್ಟಾಗಲೇ ಇದು ಮಿಶ್ರಣ! (3)
9.ಹಿರಿಮೆಯನ್ನು ಹೇಳುವ ಘನತೆ (3)
11.ಪಾರು ವಹಿಸಿಕೊಂಡಿರುವ ಮೇಲ್ವಿಚಾರಣೆ (4)
13.ಕೂಲಂಕಷವಾದ ವಿಚಾರಣೆ (4)
15.ಗ್ರಂಥದ ಒಂದು ಭಾಗ (2)
16.ಸಂತತಿಯಲ್ಲಿರುವ ಸಾಧು ಕಾಣಿಸಿದನೇ? (2)



6326ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮನೋಹರ 3.ತಪರಾಕಿ
5.ವಿಷಯ 6.ಕರ್ಮಾಂತರ
7.ನದೀಮುಖಜಭೂಮಿ
10.ತಳವಾರ 11.ಅವನಿ
14.ಗುಣಾಕಾರ 15.ಉಡುಗೊರೆ

ಮೇಲಿಂದ ಕೆಳಕ್ಕೆ:
1.ಮಜ್ಜೆ 2.ಹರುಷ
4.ಕಿನ್ನರ 5.ವಿಧಾನ
6.ಕಣಜ 8.ಮುಷ್ಕರ
9.ಮಿಸುನಿ 10.ತರಗು
12.ವಸಡು 13.ಹಾರೆ

ಸುಡೊಕು 6711

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

3		2	1		4		6	
				8				
7	9		6		2	5		4
2	7				3			5
				4		2	9	
			9					1
	4	1	2				8	
9				7	8			
	6			5		4		9

6710 ಸುಡೊಕು

5	4	6	1	7	9	3	2	8
3	8	9	2	6	4	5	1	7
7	2	1	8	5	3	4	6	9
8	9	3	5	2	1	6	7	4
1	5	2	6	4	7	8	9	3
4	6	7	3	9	8	1	5	2
9	3	5	7	8	6	2	4	1
2	1	4	9	3	5	7	8	6
6	7	8	4	1	2	9	3	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

26 ಫೆಬ್ರುವರಿ 2026 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು, ತಿಥಿ: ಫಾಲ್ಗುಣ ಶುಕ್ಲ ದಶಮಿ ಗಂ. 24-34, **ನಕ್ಷತ್ರ:** ಮೃಗಶಿರ ಗಂ. 12-12, **ಯೋಗ:** ಪ್ರೀತಿ ಗಂ. 22-34, **ಕರಣ:** ತೈತಿಲ ಗಂ 13-37 ಕುಂಭ ಮಾಸದ 14 ನೇ ದಿನ. **ಮಳೆ ನಕ್ಷತ್ರ:** ಶತಭಿಷ 3 ನೇ ಪಾದ. **ರಾಹುಕಾಲ:** ಮಧ್ಯಾಹ್ನ 01-30 - 03-00, **ಸೂರ್ಯೋದಯ:** 06-52, **ಸೂರ್ಯಾಸ್ತ:** 06-35, **ಮುಸ್ಲಿಂ ದಿನಾಂಕ:** 8 ರಂಜಾನ್, **ಅದೃಷ್ಟ ಸಂಖ್ಯೆ:** 9, 1

ಮೇಷ: ಸಹೋದರರಲ್ಲಿನ ಭಿನ್ನಾಭಿಪ್ರಾಯಕ್ಕೆ ದಾಯಾದಿಗಳು ಹುಳಿಹಿಂಡುವ ಕೆಲಸವನ್ನು ಮಾಡಲಿದ್ದಾರೆ. ಸಿನಿಮಾ ಕಲಾವಿದರಿಗೆ ಅವಕಾಶಗಳು ಸಿಗುವುವು. ಆರೋಗ್ಯ ಉತ್ತಮವಾಗಿ ಮಕ್ಕಳೊಡನೆ ಆಟ ಪಾಠಗಳಲ್ಲಿ ಪಾಲ್ಗೊಳ್ಳುವಿರಿ.

ವೃಷಭ: ಪ್ರಭಾವಶಾಲಿ ವ್ಯಕ್ತಿಯೊಂದಿಗಿನ ಭೇಟಿಯನ್ನು ತಳ್ಳಿಹಾಕದೆ ನಿಮ್ಮ ವೃತ್ತಿ ಕ್ಷೇತ್ರಕ್ಕೆ ಲಾಭ ಉಂಟಾಗುವಂತೆ ನೋಡಿಕೊಳ್ಳುವ ಪ್ರಯತ್ನಮಾಡಿ. ಸೋದರಿಯ ವಿಷಯದಲ್ಲಿ ಅನುಕಂಪ ಮೂಡುವುದು.

ಮಿಥುನ: ಇಂಟೀರಿಯರ್ ಡೆಕೋರೇಷನ್, ಅನಿಮೇಷನ್, ಡಿಸೈನ್‌ಗೆ ಸಂಬಂಧಪಟ್ಟ ವ್ಯವಹಾರದವರಿಗೆ ಅಥವಾ ವಿದ್ಯಾರ್ಥಿಗಳಿಗೆ ಪ್ರಗತಿಯಾಗುವುದು. ವೃತ್ತಿ ಬದುಕಿನಲ್ಲಿ ಉನ್ನತ ಸ್ಥಾನರಕ್ಕೇರಲು ಇದು ಸಕಾಲ.

ಕರ್ಕಾಟಕ: ದುಂದುವೆಚ್ಚ ಮಾಡುವ ಸಂದರ್ಭದಲ್ಲಿ ಹೆಚ್ಚಿನ ಆಲೋಚನೆ ಮಗಳ ಮದುವೆಯ ಖರ್ಚಿನ ಬಗ್ಗೆ ಇರಲಿ. ವ್ಯವಹಾರದಲ್ಲಿ ನಿಮಗಾಗಿರುವ ಮೋಸ ಬೆಳಕಿಗೆ ಬರುತ್ತದೆ.

ಸಿಂಹ: ವಿಚಾರಗಳನ್ನು ಭಿನ್ನ ಭಿನ್ನವಾದ ದೃಷ್ಟಿಯಿಂದ ನೋಡಲು ಪ್ರಯತ್ನಿಸಿ, ಸರಿ ತಪ್ಪಿನ ಅರಿವಾಗಲಿದೆ. ಹಲವಾರು ವಿಚಾರಗಳಲ್ಲಿ ತೊಂದರೆ ಕಂಡುಬಂದರೂ ಎಲ್ಲ ಸಮಸ್ಯೆಗಳು ಪರಿಹಾರವಾಗುವುವು.

ಕನ್ಯಾ: ಉನ್ನತ ಪೊಲೀಸ್ ಅಧಿಕಾರಿಯೊಬ್ಬರ ಸಹಾಯದಿಂದ ಗಂಭೀರ ಸಮಸ್ಯೆಯೊಂದಕ್ಕೆ ಉತ್ತರ ಸಿಗುವುದು. ದಾನ-ಧರ್ಮ ಪ್ರವೃತ್ತಿಯಿಂದ ಕೆಲವು ಶುಭ ಫಲಗಳು ನಿಮ್ಮ ಅನುಭವಕ್ಕೆ ಬರಲಿವೆ.

ತುಲಾ: ಬಹು ಕೆಲಸಗಳ ಹೊಣೆ ಇರುವ ನಿಮಗೆ ವಿನಾಕಾರಣದ ಅಲೆದಾಟ ಬೇಸರ ತರುತ್ತದೆ. ನಿಮ್ಮನ್ನು ಮನೆಯವರು ಸರಿದಾರಿಗೆ ತರಲಿದ್ದಾರೆ. ದಿನನಿತ್ಯದ ಕೆಲಸಗಳು ಎಂದಿನಂತೆ ಸಾಗಲಿವೆ.

ವೃಶ್ಚಿಕ: ನಿಮ್ಮ ಬುದ್ಧಿಶಕ್ತಿಗೆ ಸ್ವಲ್ಪ ಕೆಲಸ ಕೊಟ್ಟರೆ ಯಶಸ್ಸು ದೊರಕುತ್ತದೆ. ಸಂಸ್ಥೆಯ ಅಭಿವೃದ್ಧಿಗೆ ನೀವು ತೆಗೆದುಕೊಳ್ಳಬೇಕಾಗಿರುವ ನಿರ್ಧಾರದ ಬಗ್ಗೆ ಈ ದಿನ ಹೆಚ್ಚಿನ ಅಧ್ಯಯನ ನಡೆಸುವುದು ಉತ್ತಮ.


ಧನು: ಎಲ್ಲ ವಿಷಯಗಳಲ್ಲಿಯೂ ಸ್ವಾಭಾವಿಕ ಗುಣಕ್ಕಿಂತ ಹೆಚ್ಚಿನ ಸಮಾಧಾನದಿಂದಿರುವುದು ಉತ್ತಮ. ಒಳ್ಳೆಯ ಆಹಾರ ಮತ್ತು ವಿಶ್ರಾಂತಿಯನ್ನು ತೆಗೆದುಕೊಳ್ಳುವುದರಿಂದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು.

ಮಕರ: ಇನ್ನೊಬ್ಬರಿಗೆ ಕೊಡಬೇಕಾದ ವಸ್ತುಗಳನ್ನ ಅವರಿಗೆ ತಲುಪಿಸುವ ಕರ್ತವ್ಯವನ್ನು ಮರೆಯದಿರಿ. ವ್ಯವಹಾರದಲ್ಲಿ ಹೆಚ್ಚಿನ ಬಂಡವಾಳ ಹೂಡಲು ತಂದೆಯವರ ಸಮ್ಮತಿಯನ್ನು ಪಡೆಯುವುದು ಒಳ್ಳೆಯದು.

ಕುಂಭ: ಕೆಲವೊಂದು ಕೆಲಸದಲ್ಲಿ ಅಡಚಣೆ ಉಂಟಾಗಿ ಮನಸ್ಸಿಗೆ ನೋವು ಆಗಬಹುದು. ಕೆಲವು ಕೆಲಸಗಳನ್ನು ಮಾಡಲು ದೀರ್ಘ ಪ್ರಯಾಣ ಕೈಗೊಳ್ಳಬೇಕಾಗಬಹುದು. ಪಾಲುದಾರಿಕೆ ವ್ಯವಹಾರದಲ್ಲಿ ಚರ್ಚೆಗೆ ಆಸ್ಪದ ನೀಡದಿರಿ.

ಮೀನ: ನಿಮ್ಮ ಹಾದಿಯನ್ನು ಮಾರ್ಗದರ್ಶಕರ ಸಲಹೆಯಂತೆ ಬದಲಿಸಿಕೊಂಡಲ್ಲಿ ಯೋಜನೆಗಳು ನೀವು ಆಲೋಚಿಸಿದಕ್ಕಿಂತಲೂ ಹೆಚ್ಚು ಉತ್ತಮವಾಗಿ ನೆರವೇರುವುವು. ಸಾವಧಾನದಿಂದ ಕೆಲಸಗಳನ್ನು ಮಾಡಿ ಮುಗಿಸುವಿರಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,424
ಇಂದಿನ ಅಂತ್ಯ: 25,482
ದಿನದ ಕನಿಷ್ಠ: 25,428
57

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು: 100 ಕ್ಕೆ ₹550; 12 ಕ್ಕೆ ₹80
ಮೈಸೂರು: 100 ಕ್ಕೆ ₹550

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹552-790
ದ್ವಿತಳಿ (ಬಿ.ವಿ) ₹511-941

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹215
ಆರ್‌ಎಸ್‌ಎಸ್-5 ₹208
ಗುಡ್ ಲಾಟ್ ₹196

ಮುದ್ರೆ-ಮನೆ ಕಾಫಿ (50 ಕೆಜಿಗೆ)
ಎಪಿ ₹23,100
ಎಸಿ ₹1,300
ಆರ್‌ಪಿ ₹18,250
ಆರ್‌ಸಿ ₹9,900

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆಜಿಗೆ)
ಶೇಂಗಾ (ರಿಫೈನ್ಡ್) ₹1730 (1730)
ಸೋಯಾ (ರಿಫೈನ್ಡ್) ₹1380 (1370)
ಸೂರ್ಯಕಾಂತಿ (ರಿಫೈನ್ಡ್) ₹1590 (1590)
ಪಾಮೋಲಿನ್ ₹1295 (1293)

ಅಡಿಕೆ ಧಾರಣೆ

ಪುತ್ತೂರು		ರಾಶಿ	48199-56211	ಚಿಪ್ಪು	32589-39999
ಕೋಕ	20000-37000	ಸರಕು	63100-94096	ಚಾಲಿ	46809-52009
ಹೊಸತು	26000-48000	**ಸಿದ್ದಾಪುರ**		ಕೋಕ	15889-34999
ಹಳತು	50000-53500	ಬಿಳಿಗೋಟು	27911-39089	ಹೊಸಚಾಲಿ	42189-48098
ತರೀಕೆರೆ		ಚಾಲಿ	49099-49099	ಫ್ಯಾಕ್ಟರಿ	10099-27829
ಚಾಲಿ	22000-22000	ಕೋಕ	24319-33909	**ತೀರ್ಥಹಳ್ಳಿ**	
ಸಿಪ್ಪೆಗೋಟು	11000-16800	ಹೊಸಚಾಲಿ	40899-48599	ಇತರೆ	25334-53827
ಇತರೆ	33620-33620	ಕೆಂಪುಗೋಟು	30619-34469	ಸಿಪ್ಪೆಗೋಟು	14000-14000
ಪುಡಿ	10000-10000	ರಾಶಿ	50319-55099	**ಭದ್ರಾವತಿ**	
ಶಿವಮೊಗ್ಗ		ತಟ್ಟಿಬೆಟ್ಟೆ	37600-49699	ಬೆಟ್ಟೆ	27700-27778
ಬೆಟ್ಟೆ	51699-59100	**ಕುಮಟ**		ಸಿಪ್ಪೆಗೋಟು	11000-13000
ಗೊರಬಲು	26011-39799	ಬೆಟ್ಟೆ	38669-48509		

ಮುಂಬೈ ಧಾರಣೆ (ಶೇಂಗಾ)

25-02-2026

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1740 (1740)
ಒಂದು ವಾರದ ಡೆಲಿವರಿ	1735 (1735)
ಪಾಮ್ ವಾರದ ಡೆಲಿವರಿ	1293 (1293)
ಸೂರ್ಯಕಾಂತಿ ಎಣ್ಣೆ ಕಚ್ಚಾ	1505 (1510)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,58,500 (1,58,600)
ಬೆಳ್ಳಿ ಕೆ.ಜಿಗೆ	2,66,000 (2,62,900)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮೇಕೆದಾಟು ಯೋಜನೆಗೆ ಜಲ ಆಯೋಗದ ಅವಲೋಕನಗಳ ಹಿನ್ನೆಲೆಯಲ್ಲಿ ಮತ್ತೆ ಸಮೀಕ್ಷೆ ಮಾಡಲು ರಾಜ್ಯ ತೀರ್ಮಾನಿಸಿರುವುದು ಸರಿಯೆ?

• ಸರಿ • ತಪ್ಪು • ಗೊತ್ತಿಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ರಫ್ತು: ಫೋನ್‌ಗೆ ಅಗ್ರ ಸ್ಥಾನ

ಸಾಮಾಜಿಕ ಜಾಲತಾಣಗಳ ಮೂಲಕ ಮಾಹಿತಿ ಹಂಚಿಕೊಂಡ ಕೇಂದ್ರ ಸಚಿವ

ಮುಖ್ಯಾಂಶಗಳು
- ₹4 ಲಕ್ಷ ದಾಟಿದ ಎಲೆಕ್ಟ್ರಾನಿಕ್ಸ್ ವಸ್ತುಗಳ ರಫ್ತು
- ಪ್ರತಿ ನಾಲ್ಕು ಫೋನ್‌ಗಳಲ್ಲಿ ಒಂದು ರಫ್ತು
- ಈ ವರ್ಷದ ರಫ್ತು ಹೆಚ್ಚಾಗುವ ಅಂದಾಜು

ನವದೆಹಲಿ (ಪಿಟಿಐ): ಭಾರತದಿಂದ ರಫ್ತಾಗುವ ಸರಕುಗಳ ವರ್ಗದಲ್ಲಿ ಈಗ ಸ್ಮಾರ್ಟ್‌ಫೋನ್‌ಗಳು ಮೊದಲ ಸ್ಥಾನಕ್ಕೆ ಬಂದಿವೆ ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ ಸಚಿವ ಅಶ್ವಿನಿ ವೈಷ್ಣವ್ ಬುಧವಾರ ಹೇಳಿದ್ದಾರೆ.

2025ರ ಕ್ಯಾಲೆಂಡರ್ ವರ್ಷದಲ್ಲಿ ಭಾರತದಿಂದ 30 ಬಿಲಿಯನ್ ಡಾಲರ್ (₹2.72 ಲಕ್ಷ ಕೋಟಿ) ಮೌಲ್ಯದ ಸ್ಮಾರ್ಟ್‌ಫೋನ್‌ಗಳು ರಫ್ತಾಗಿವೆ ಎಂದು ಅವರು ಸಾಮಾಜಿಕ ಜಾಲತಾಣಗಳ ಮೂಲಕ ಹೇಳಿದ್ದಾರೆ.



‘ಭಾರತವು ಈಗ ಜಗತ್ತಿನ ಸ್ಮಾರ್ಟ್‌ಫೋನ್ ತಯಾರಿಕಾ ಕಾರ್ಖಾನೆ ಆಗುತ್ತಿದೆ’ ಎಂದು ವೈಷ್ಣವ್ ಹೇಳಿದ್ದಾರೆ. ಈ ಸಂಬಂಧ ಅವರು ಚಿತ್ರವೊಂದನ್ನು ಹಂಚಿಕೊಂಡಿದ್ದಾರೆ.

2024–25ನೇ ಸಾಲಿನಲ್ಲಿ ಭಾರತದಲ್ಲಿ ಅಂದಾಜು ₹5.5 ಲಕ್ಷ ಕೋಟಿ ಮೌಲ್ಯದ ಮೊಬೈಲ್ ಫೋನ್‌ಗಳನ್ನು ತಯಾರು ಮಾಡಲಾಗಿದೆ, ಅಂದಾಜು ₹2 ಲಕ್ಷ ಕೋಟಿ ಮೌಲ್ಯದ ಮೊಬೈಲ್ ಫೋನ್‌ಗಳನ್ನು ರಫ್ತು ಮಾಡಲಾಗಿದೆ. 2025ರಲ್ಲಿ ದೇಶದಿಂದ ರಫ್ತಾಗಿರುವ ಎಲೆಕ್ಟ್ರಾನಿಕ್ಸ್ ಸರಕುಗಳ ಮೌಲ್ಯವು ₹4 ಲಕ್ಷ ಕೋಟಿಯನ್ನು ದಾಟಿದೆ. ದೇಶದಲ್ಲಿ ನಾಲ್ಕು ಸೆಮಿಕಂಡಕ್ಟರ್ ತಯಾರಿಕಾ ಘಟಕಗಳು ಈ ವರ್ಷ ಉತ್ಪಾದನೆ ಆರಂಭಿಸಿದ ನಂತರದಲ್ಲಿ ಈ ಮೌಲ್ಯವು ಇನ್ನಷ್ಟು ಹೆಚ್ಚಾಗಲಿದೆ ಎಂಬ ಅಂದಾಜು ಮಾಡಲಾಗಿದೆ.

ಚೀನಾ ಮೇಲೆ ಅಮೆರಿಕ ಹೆಚ್ಚಿನ ಸುಂಕ ಹೇರಿದ ನಂತರದಲ್ಲಿ ಆ್ಯಪಲ್ ಕಂಪನಿಯು ಭಾರತದಲ್ಲಿ ತಯಾರಿಕಾ ಚಟುವಟಿಕೆಯನ್ನು ಹೆಚ್ಚಿಸಿದೆ ಎಂದು ಮಾರುಕಟ್ಟೆ ಸಂಶೋಧನೆ ಹಾಗೂ ವಿಶ್ಲೇಷಣಾ ಸಂಸ್ಥೆ ‘ಕೌಂಟರ್ ಪಾಯಿಂಟ್’ನ ಸಹ ಸಂಸ್ಥಾಪಕ ನೀಲ್ ಶಾ ಹೇಳಿದ್ದಾರೆ.

‘ಭಾರತದಲ್ಲಿ ಅಂದಾಜು 30 ಕೋಟಿ ಮೊಬೈಲ್ ಫೋನ್‌ಗಳು ತಯಾರಾಗಲಿವೆ ಎಂದು ನಿರೀಕ್ಷಿಸಲಾಗಿದೆ. 2025ರಲ್ಲಿ ಇಲ್ಲಿ ತಯಾರಾದ ಪ್ರತಿ ನಾಲ್ಕು ಮೊಬೈಲ್ ಫೋನ್‌ಗಳಲ್ಲಿ ಒಂದು ರಫ್ತಾಗಿದೆ ಎಂದು ಅಂದಾಜು ಮಾಡಲಾಗಿದೆ’ ಎಂದು ಅವರು ಹೇಳಿದ್ದಾರೆ.

‘ಅಮೆರಿಕವು ಇಲ್ಲಿ ತಯಾರಾದ ಮೊಬೈಲ್ ಫೋನ್‌ಗಳಿಗೆ ದೊಡ್ಡ ಮಾರುಕಟ್ಟೆ. ಆ್ಯಪಲ್, ಸ್ಯಾಮ್‌ಸಂಗ್, ಮೋಟೊರೊಲಾ ಕಂಪನಿಗಳು ರಫ್ತಿನಲ್ಲಿ ಮುಂಚೂಣಿಯಲ್ಲಿ ಇವೆ’ ಎಂದು ತಿಳಿಸಿದ್ದಾರೆ.

ಟ್ರಂಪ್ ಆರೋಪ ಅಲ್ಲಗಳೆದ ಇರಾನ್

ಟೆಹರಾನ್ (ಎಎಫ್‌ಪಿ): ಅಮೆರಿಕವನ್ನು ಸಹ ತಲುಪುವ ಸಾಮರ್ಥ್ಯ ಇರುವ ಕ್ಷಿಪಣಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂಬ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಯನ್ನು ಇರಾನ್ ತಳ್ಳಿ ಹಾಕಿದೆ.

ಇದು ‘ದೊಡ್ಡ ಸುಳ್ಳು’ ಎಂದು ಇರಾನ್‌ನ ವಿದೇಶಾಂಗ ಸಚಿವಾಲಯ ಬುಧವಾರ ತಿಳಿಸಿದೆ.

‘ಇರಾನ್‌ನ ಪರಮಾಣು ಕಾರ್ಯಕ್ರಮ ಮತ್ತು ಖಂಡಾಂತರ ಕ್ಷಿಪಣಿಗಳಿಗೆ ಸಂಬಂಧಿಸಿದಂತೆ ಅಮೆರಿಕ ಆರೋಪಗಳು ‘ದೊಡ್ಡ ಸುಳ್ಳು’ ಎಂದು ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಕಾಯಿ ಅವರು ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ಟ್ರಂಪ್ ಅವರು ‘ಅಮೆರಿಕ ತಲುಪಬಲ್ಲ ಕ್ಷಿಪಣಿಗಳನ್ನು ಹೊಂದುವುದನ್ನು ಇರಾನ್ ಎದುರು ನೋಡುತ್ತಿದೆ’ ಎಂದು ಹೇಳಿಕೆ ನೀಡಿದ ಬೆನ್ನಲ್ಲೇ ಅವರು ‘ಎಕ್ಸ್’ನಲ್ಲಿ ಈ ಪ್ರತಿಕ್ರಿಯೆ ನೀಡಿದ್ದಾರೆ.


₹80 ಸಾವಿರ ಕೋಟಿ ಮೀರಿದ ಬಿಎಂಸಿ ಬಜೆಟ್

ಪ್ರಜಾವಾಣಿ ವಾರ್ತೆ

ಮುಂಬೈ: ದೇಶದ ಅತ್ಯಂತ ಶ್ರೀಮಂತ ಸ್ಥಳೀಯಾಡಳಿತ ಸಂಸ್ಥೆಯಾಗಿರುವ ಮುಂಬೈ ಮಹಾನಗರ ಪಾಲಿಕೆಯ ಬಜೆಟ್ ಗಾತ್ರವು ಈ ಸಲ ₹80 ಸಾವಿರ ಕೋಟಿ ದಾಟಲಿದೆ.

‘ಬೃಹನ್ ಮುಂಬೈ ಮಹಾನಗರ ಪಾಲಿಕೆ(ಬಿಎಂಸಿ)ಯ ಬಜೆಟ್ ಗಾತ್ರವು ದೇಶದ ಕೆಲವು ರಾಜ್ಯಗಳ ಬಜೆಟ್ ಗಾತ್ರವನ್ನು ಮೀರಿಸಲಿದೆ.

ಮುಂಬೈ ಪಾಲಿಕೆಯ 227 ಸ್ಥಾನಗಳಿಗೆ ಚುನಾವಣೆ ನಡೆದ ಒಂದು ತಿಂಗಳ ನಂತರ ಪಾಲಿಕೆ ಆಯುಕ್ತ ಭೂಷಣ್ ಗಗ್ರಾನಿ ಅವರು ಬುಧವಾರ 2026–27 ನೇ ಸಾಲಿನ ಬಜೆಟ್ ಮಂಡಿಸಿದರು.



ಬೃಹನ್ಮುಂಬಯಿ ಮಹಾನಗರ ಪಾಲಿಕೆಯ ಬಜೆಟ್ ಮಂಡನೆಗೂ ಮುನ್ನ ಪಾಲಿಕೆ ಆಯುಕ್ತ ಭೂಷಣ್ ಗಗ್ರಾನಿ (ಬಲಭಾಗ) ಹಾಗೂ ಬಿಎಂಸಿ ಸ್ಥಾಯಿಸಮಿತಿ ಅಧ್ಯಕ್ಷ ಪ್ರಭಾಕರ್ ಶಿಂದೆ ಅವರು ಬಜೆಟ್ ಪ್ರತಿಗಳನ್ನು ಪ್ರದರ್ಶಿಸಿದರು –ಪಿಟಿಐ ಚಿತ್ರ

‘ಈ ಸಲದ ಬಜೆಟ್ ಮೀರಲಿದ್ದು, 2025–26ಕ್ಕೆ ಗಾತ್ರವು ₹80,952.56 ಕೋಟಿ ಹೋಲಿಸಿದರೆ (₹74.427.41 ಕೋಟಿ) ಶೇಕಡ 8.77 ರಷ್ಟು ಏರಿಕೆಯಾಗಿದೆ’ ಎಂದು ತಿಳಿಸಿದ್ದಾರೆ.

ಬಿಎಂಸಿ ಬಜೆಟ್ ಗಾತ್ರವು ದೇಶದ ಹಲವು ಸಣ್ಣ ರಾಜ್ಯಗಳಿಗಿಂತಲೂ ಹೆಚ್ಚಿದೆ. ಮಿಜೋರಾಂ (₹15,043 ಕೋಟಿ), ಸಿಕ್ಕಿಂ (₹16,196 ಕೋಟಿ) ನಾಗಾಲ್ಯಾಂಡ್ (₹24,699 ಕೋಟಿ), ಮಣಿಪುರ (₹29,988 ಕೋಟಿ), ಮೇಘಾಲಯ (₹30,003 ಕೋಟಿ) ತ್ರಿಪುರಾ (₹32,423 ಕೋಟಿ), ಅರುಣಾಚಲಪ್ರದೇಶ (₹39,842 ಕೋಟಿ) ನಷ್ಟಿದೆ. ಗೋವಾ(₹28,162 ಕೋಟಿ) ಹಿಮಾಚಲಪ್ರದೇಶ (₹58,514 ಕೋಟಿ) ರಾಜ್ಯಕ್ಕಿಂತಲೂ ಬಿಎಂಸಿ ಬಜೆಟ್ ಗಾತ್ರ ಹೆಚ್ಚಿದೆ.

ಸುದ್ದಿ 2 ನಿಮಿಷ

ಎ.ಐ ಭೀತಿ ಇಲ್ಲ: ಟಿಸಿಎಸ್ ಸಿಇಒ

ಮುಂಬೈ (ಪಿಟಿಐ): ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಕಂಪನಿಗೆ ‘ಭೀತಿ ಮೂಡಿಸಿಲ್ಲ’ ಎಂದು ಕಂಪನಿಯ ಸಿಇಒ ಕೆ. ಕೃತಿವಾಸನ್ ಹೇಳಿದ್ದಾರೆ.

ಹಿರಿಯ ಶ್ರೇಣಿಗಳಲ್ಲಿ ಇರುವ ಉದ್ಯೋಗಿಗಳು ಎ.ಐ ಸಂಬಂಧಿತ ಕೆಲಸಗಳನ್ನು ನಿಧಾನವಾಗಿ ಮಾಡುತ್ತಾರೆ, ಯುವ ಉದ್ಯೋಗಿಗಳು ಆ ಕೆಲಸವನ್ನು ಬೇಗನೆ ಮಾಡುತ್ತಾರೆ ಎಂದು ಅವರು ಹೇಳಿದ್ದಾರೆ.

‘ನಮ್ಮ ವರಮಾನದ ಮೇಲೆ ಪರಿಣಾಮ ಉಂಟಾದರೂ ಚಿಂತೆ ಇಲ್ಲ, ನಮ್ಮ ಜೊತೆಗಾರರು ಗ್ರಾಹಕರ ಬಳಿ ಹೋಗಿ ಎ.ಐ ಬಳಕೆ ಮಾಡಬೇಕು ಎಂದು ನಾವು ಹೇಳುತ್ತೇವೆ’ ಎಂದು ಅವರು ಇಲ್ಲಿ ಕಾರ್ಯಕ್ರಮವೊಂದರಲ್ಲಿ ತಿಳಿಸಿದ್ದಾರೆ.

ಟಿಸಿಎಸ್ ಕಂಪನಿಯು ಆರು ಲಕ್ಷಕ್ಕೂ ಹೆಚ್ಚಿನ ನೌಕರರನ್ನು ಹೊಂದಿದೆ. ನೌಕರರೆಲ್ಲ ಎ.ಐ ತಂತ್ರಜ್ಞಾನವನ್ನು ಕರತಲಾಮಲಕ ಮಾಡಿಕೊಳ್ಳಬೇಕು ಎಂದು ಕಂಪನಿ ಬಯಸುತ್ತಿದೆ ಎಂದು ಕೃತಿವಾಸನ್ ಹೇಳಿದ್ದಾರೆ.



ಕಂಪನಿಯ ವಿವಿಧ ಯೋಜನೆಗಳಲ್ಲಿ, ಕೆಲಸಗಳಲ್ಲಿ ಎ.ಐ ತಂತ್ರಜ್ಞಾನದ ಬಳಕೆಯನ್ನು ಪರಿಶೀಲಿಸಲು ಕೋರಲಾಗಿದೆ. ಎಲ್ಲರೂ ಎ.ಐ ಕೌಶಲ ಕಲಿಯಲು ತಾವಾಗಿಯೇ ಬಯಸುತ್ತಿದ್ದಾರೆ, ಹೀಗಾಗಿ ಅದನ್ನು ಕಲಿಯುವುದಕ್ಕೆ ಉತ್ತೇಜನ ನೀಡುವ ಪ್ರಶ್ನೆ ಎದುರಾಗದು ಎಂದಿದ್ದಾರೆ.

ರೆಪೊ ದರ ಹೆಚ್ಚಾಗದು: ಸೌಗತ ಭಟ್ಟಾಚಾರ್ಯ ಅಭಿಮತ

ಮುಂಬೈ (ಪಿಟಿಐ): ರೆಪೊ ದರವು ಹೆಚ್ಚಳ ಆಗುವ ಸಾಧ್ಯತೆಯು ಈಗ ಬಹಳ ಕಡಿಮೆ ಎಂದು ಆರ್‌ಬಿಐನ ಹಣಕಾಸು ನೀತಿ ಸಮಿತಿಯು (ಎಂಪಿಸಿ) ಬಾಹ್ಯ ಸದಸ್ಯ ಸೌಗತ ಭಟ್ಟಾಚಾರ್ಯ ಬುಧವಾರ ಹೇಳಿದ್ದಾರೆ.

ಹವಾಮಾನಕ್ಕೆ ಸಂಬಂಧಿಸಿದ ಸಮಸ್ಯೆಗಳು, ಲೋಹಗಳ ಬೆಲೆ ಹೆಚ್ಚಾಗುತ್ತಿರುವುದು ಹಾಗೂ ಜಾಗತಿಕ ಮಟ್ಟದಲ್ಲಿನ ಬಿಕ್ಕಟ್ಟುಗಳ ಕಾರಣದಿಂದಾಗಿ ಕಚ್ಚಾ ತೈಲದ ಬೆಲೆಯಲ್ಲಿನ ಹೆಚ್ಚಳವು ಮುಂದಿನ ದಿನಗಳಲ್ಲಿ ಗ್ರಾಹಕ ಬೆಲೆ ಸೂಚ್ಯಂಕದ (ಸಿಪಿಐ) ಮೇಲೆ ಪರಿಣಾಮ ಬೀರಲಿವೆ ಎಂದು ಅವರು ಹೇಳಿದ್ದಾರೆ.

ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳುವ ಹಾಗೂ ಹಣಕಾಸಿನ ನಿಲುವನ್ನು ‘ತಟಸ್ಥ’ವಾಗಿ ಇರಿಸಿಕೊಳ್ಳುವ ತೀರ್ಮಾನವನ್ನು ಈ ತಿಂಗಳ ಆರಂಭದಲ್ಲಿ ನಡೆದ ಎಂಪಿಸಿ ಸಭೆಯಲ್ಲಿ ತೆಗೆದುಕೊಳ್ಳಲಾಗಿದೆ. ಅಂದರೆ, ರೆಪೊ ದರವು ಇನ್ನೂ ಒಂದಿಷ್ಟು ಕಾಲ ಕಡಿಮೆ ಮಟ್ಟದಲ್ಲಿಯೇ ಇರಲಿದೆ.

‘ಯುದ್ಧ ನಡೆದಿದ್ದರೆ 3.5 ಕೋಟಿ ಜನ ಸಾಯುತ್ತಿದ್ದರು’

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ‘ಭಾರತ ಮತ್ತು ಪಾಕಿಸ್ತಾನ ನಡುವಿನ ಯುದ್ಧವನ್ನು ನಿಲ್ಲಿಸಲು ನೀವು ಮಧ್ಯಪ್ರವೇಶಿಸದಿದ್ದರೆ 3.5 ಕೋಟಿ ಜನರು ಸಾಯುತ್ತಿದ್ದರು ಎಂದು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಶರೀಫ್ ನನಗೆ ಹೇಳಿದ್ದರು’ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

‘ನನ್ನ ಅಧಿಕಾರಾವಧಿಯ ಮೊದಲ 10 ತಿಂಗಳಲ್ಲಿ ಎಂಟು ಯುದ್ಧಗಳನ್ನು ನಿಲ್ಲಿಸಿದ್ದೇನೆ. ದಕ್ಷಿಣ ಏಷ್ಯಾದ ಎರಡು ನೆರೆಹೊರೆಯ ರಾಷ್ಟ್ರಗಳ ನಡುವೆ ಸಂಭವಿಸಬಹುದಾಗಿದ್ದ ಅಣ್ವಸ್ತ್ರ ಯುದ್ಧವನ್ನು ತಡೆಯಲು ನಾನು ಸಹಾಯ ಮಾಡಿದ್ದೇನೆ’ ಎಂದು ತಮ್ಮ ಹಳೆಯ ಹೇಳಿಕೆಯನ್ನೇ ಪುನರುಚ್ಚರಿಸಿದ್ದಾರೆ.

‘ಎಪ್‌ಸ್ಟೈನ್ ಜೊತೆ ಸಂಬಂಧ: ಸಿಬ್ಬಂದಿ ಕ್ಷಮೆ ಕೋರಿದ ಗೇಟ್ಸ್’

ನ್ಯೂಯಾರ್ಕ್(ಪಿಟಿಐ): ಲೈಂಗಿಕ ಅಪರಾಧಿ ಜೆಫ್ರಿ ಎಪ್‌ಸ್ಟೈನ್ ಜೊತೆ ತಾವು ಸಂಬಂಧ ಹೊಂದಿದ್ದರ ಕುರಿತಂತೆ ಮೈಕ್ರೊಸಾಫ್ಟ್ ಸಹಸಂಸ್ಥಾಪಕ ಬಿಲ್ ಗೇಟ್ಸ್ ಅವರು ತಮ್ಮ ಒಡೆತನದ ಗೇಟ್ಸ್ ಫೌಂಡೇಷನ್ ಸಿಬ್ಬಂದಿಯ ಕ್ಷಮೆ ಕೋರಿದ್ದಾರೆ ಎಂದು ಮಾಧ್ಯಮ ವರದಿಯೊಂದು ಹೇಳಿದೆ.



ಬಿಲ್ ಗೇಟ್ಸ್

‘ಎಪ್‌ಸ್ಟೈನ್ ಜೊತೆ ಸಂಬಂಧ ಹೊಂದಿದ್ದರೂ ನಾನು ಯಾವುದೇ ಅಕ್ರಮ ಎಸಗಿಲ್ಲ ಎಂಬುದಾಗಿಯೂ ಗೇಟ್ಸ್ ಹೇಳಿದ್ದಾರೆ’ ಎಂದು ವಾಲ್ ಸ್ಟ್ರೀಟ್ ಜರ್ನಲ್ ವರದಿ ಮಾಡಿದೆ.

‘ನನಗೆ ರಷ್ಯಾದ ಇಬ್ಬರು ಮಹಿಳೆಯರೊಂದಿಗೆ ಸ್ನೇಹಸಂಬಂಧ ಇತ್ತು. ಇದನ್ನು ಎಪ್‌ಸ್ಟೈನ್ ಪತ್ತೆ ಮಾಡಿದ್ದ. ಈ ವಿಚಾರ ಗೇಟ್ಸ್ ಫೌಂಡೇಷನ್‌ನ ಕಾರ್ಯದ ಮೇಲೆ ಪರಿಣಾಮ ಬೀರಿತ್ತು. ಆದರೆ, ಎಪ್‌ಸ್ಟೈನ್ ಮಾಡಿದ್ದ ಅಪರಾಧಗಳಲ್ಲಿ ನಾನು ಭಾಗಿಯಾಗಿರಲಿಲ್ಲ’ ಎಂದು ಗೇಟ್ಸ್ ಅವರು ನಿಯತಕಾಲಿಕೆಗೆ ನೀಡಿರುವ ವಿಶೇಷ ಸಂದರ್ಶನದಲ್ಲಿ ಹೇಳಿದ್ದಾರೆ.

‘ಎಪ್‌ಸ್ಟೈನ್ ಜೊತೆ ಕಾಲಕಳೆದದ್ದು ಹಾಗೂ ಆತನೊಂದಿಗೆ ಫೌಂಡೇಷನ್ ಸಿಬ್ಬಂದಿಯ ಸಭೆ ನಡೆಸಿದ್ದು ನಾನು ಮಾಡಿದ ದೊಡ್ಡ ತಪ್ಪು’ ಎಂದೂ ಅವರು ಹೇಳಿದ್ದಾರೆ.

ಕೈಗಾರಿಕಾ ಬೆಳವಣಿಗೆ: 2 ವಿಷನ್ ಗ್ರೂಪ್‌ಗಳ ಜೊತೆ ಎಂ.ಬಿ. ಪಾಟೀಲ ಚರ್ಚೆ

‘ರಾಜ್ಯದಲ್ಲಿ ಎ.ಐ ಡೇಟಾ ಹಬ್ ಅಭಿವೃದ್ಧಿ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಇಂಧನ ಮತ್ತು ಐ.ಟಿ ಸಚಿವರ ಜತೆ ಶೀಘ್ರದಲ್ಲಿ ಸಭೆ
- ಕರಾವಳಿ ಭಾಗವನ್ನು ಡೇಟಾ ಹಬ್ ಆಗಿ ಅಭಿವೃದ್ಧಿಪಡಿಸುವ ಉದ್ದೇಶ

ಬೆಂಗಳೂರು: ‘ಎಲೆಕ್ಟ್ರಾನಿಕ್ಸ್ ವ್ಯವಸ್ಥೆ ವಿನ್ಯಾಸ ಮತ್ತು ತಯಾರಿಕೆ (ಇ.ಎಸ್.ಡಿ.ಎಂ) ವಲಯದ ಬೆಳವಣಿಗೆಗೆ ಪೂರಕವಾಗಿ ದಕ್ಷಿಣ ಕನ್ನಡ ಜಿಲ್ಲೆ ಸೇರಿದಂತೆ ರಾಜ್ಯದ ಹಲವು ಕಡೆ ವಿವಿಧ ಸಾಮರ್ಥ್ಯದ ಎಐ ದತ್ತಾಂಶ ಕೇಂದ್ರ (ಡೇಟಾ ಸೆಂಟರ್) ವಲಯಗಳನ್ನು ಅಭಿವೃದ್ಧಿಪಡಿಸಲಾಗುವುದು. ಈ ಸಂಬಂಧ ಇಂಧನ ಮತ್ತು ಐಟಿ ಸಚಿವರ ಜತೆ ಶೀಘ್ರದಲ್ಲಿ ಸಭೆ ನಡೆಸಲಾಗುವುದು’ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ತಿಳಿಸಿದರು.

ಭವಿಷ್ಯದ ಕೈಗಾರಿಕಾ ಬೆಳವಣಿಗೆ ಗಮನದಲ್ಲಿ ಇಟ್ಟುಕೊಂಡು ಖನಿಜ ಭವನದಲ್ಲಿ ಬುಧವಾರ ಆಯೋಜಿಸಿದ್ದ ಇ.ಎಸ್.ಡಿ.ಎಂ ಮತ್ತು ಕೋರ್ ಮ್ಯಾನುಫ್ಯಾಕ್ಚರಿಂಗ್ ವಿಷನ್ ಗ್ರೂಪ್‌ಗಳ ಸಭೆಯಲ್ಲಿ ಅವರು ಮಾತನಾಡಿದರು.

‘ಮೂರು ರೀತಿಯ ದತ್ತಾಂಶ ಕೇಂದ್ರಗಳಿದ್ದು, 500 ಮೆಗಾವ್ಯಾಟ್ ಮತ್ತು ಅದಕ್ಕಿಂತ ದೊಡ್ಡ ಸಾಮರ್ಥ್ಯದ ದತ್ತಾಂಶ ಕೇಂದ್ರ ಸ್ಥಾಪಿಸಲು ಪೂರಕವಾದ ವಾತಾವರಣ ನಿರ್ಮಿಸಲಾಗುವುದು. ಉದ್ಯಮ ಮಟ್ಟದ ಮಧ್ಯಮ ಸಾಮರ್ಥ ಹಾಗೂ 25ರಿಂದ 200 ಮೆಗಾವ್ಯಾಟ್ ಸಾಮರ್ಥ್ಯದ ದತ್ತಾಂಶ ಕೇಂದ್ರಗಳನ್ನು ಎರಡು ಮತ್ತು ಮೂರನೇ ಹಂತದ ನಗರಗಳಲ್ಲಿ ಮಾಡುವ ಉದ್ದೇಶವಿದ್ದು ಅದಕ್ಕೆ ಹೂಡಿಕೆ ಸೆಳೆಯುವ ಪ್ರಯತ್ನ ನಡೆದಿದೆ’ ಎಂದು ಹೇಳಿದರು.

‘ಕರಾವಳಿ ಭಾಗವನ್ನು 500 ಮೆಗಾವ್ಯಾಟ್ ಸಾಮರ್ಥ್ಯದ ಎಐ ಡೇಟಾ ಹಬ್ ಆಗಿ ಅಭಿವೃದ್ಧಿಪಡಿಸುವ ಉದ್ದೇಶವಿದೆ. ಅಲ್ಲದೆ, ಮಂಗಳೂರಿನಲ್ಲಿ ಕೇಬಲ್ ಲ್ಯಾಂಡಿಂಗ್ ಸ್ಟೇಷನ್ ಸ್ಥಾಪನೆ ಸಂಬಂಧ ಕಾರ್ಯಸಾಧ್ಯತಾ ಅಧ್ಯಯನ ನಡೆಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ಹೇಳಿದರು.

‘ಮೂರು ಮತ್ತು ನಾಲ್ಕನೇ ಹಂತದ ನಗರಗಳಲ್ಲಿ ಉನ್ನತ ಮಟ್ಟದ ತರಬೇತಿ ಕೇಂದ್ರಗಳನ್ನು ಸ್ಥಾಪಿಸಬೇಕೆಂದು ಉದ್ಯಮಿಗಳು ಹೇಳಿದ್ದಾರೆ



ಕೋರ್ ಮ್ಯಾನುಫ್ಯಾಕ್ಚರಿಂಗ್ ವಿಷನ್ ಗ್ರೂಪ್ ಸಭೆಯಲ್ಲಿ ಎಂ.ಬಿ. ಪಾಟೀಲ ಚರ್ಚೆ ನಡೆಸಿದರು

ಜೊತೆಗೆ, ಜಾಗತಿಕ ಮಟ್ಟದಲ್ಲಿ ಮುಂಚೂಣಿಯಲ್ಲಿರುವ ಸೆಮಿಕಂಡಕ್ಟರ್ ಉದ್ಯಮ ಕೇಂದ್ರಿತ ನಗರಗಳಲ್ಲಿರುವ ಉತ್ಕೃಷ್ಟ ವಿಶ್ವವಿದ್ಯಾಲಯಗಳು ನಮ್ಮಲ್ಲೂ ಕ್ಯಾಂಪಸ್ ತೆರೆಯಲು ಅನುವು ಮಾಡಿಕೊಡುವ ಚಿಂತನೆ ನಡೆದಿದೆ’ ಎಂದೂ ಪಾಟೀಲ ಅವರು ಹೇಳಿದರು.

‘ಆಟೊಮೊಟಿವ್ ಕೈಗಾರಿಕೆಗಳು ತಮಗೆ ಬೇಕಾದ ವಿಶೇಷ ದರ್ಜೆಯ ಉಕ್ಕನ್ನು ಆಮದು ಮಾಡಿಕೊಳ್ಳುತ್ತಿವೆ. ಈ ಉಕ್ಕನ್ನು ಭಾರತದಲ್ಲೇ ಉತ್ಪಾದಿಸಲು ಬೆಂಬಲದ ಅಗತ್ಯವಿದೆ ಎನ್ನುವುದನ್ನು ಉದ್ಯಮಿಗಳು ಗಮನಕ್ಕೆ ತಂದಿದ್ದಾರೆ. ಇದನ್ನು ಸದ್ಯದಲ್ಲೇ ಪರಿಶೀಲಿಸಲಾಗುವುದು’ ಎಂದು ಅವರು ಹೇಳಿದರು.

ಕೋರ್ ಮ್ಯಾನುಫ್ಯಾಕ್ಚರಿಂಗ್ ವಿಷನ್ ಗ್ರೂಪ್ ಸಭೆಯಲ್ಲಿ ಜಿಂದಾಲ್ ಸ್ಟೀಲ್ ಸಿಇಒ ಜಯಂತ್ ಆಚಾರ್ಯ, ಗುಲ್ಬರ್ಗ ಸಿಮೆಂಟ್‌ನ ಸಿಎಫ್‌ಒ ಅನಿಲ ಶರ್ಮ, ಬಲ್ಡೋಟ ಸ್ಟೀಲ್ ಜಂಟಿ ವ್ಯವಸ್ಥಾಪಕ ನಿರ್ದೇಶಕ ರಾಹುಲ್ ಬಲ್ಡೋಟ, ಮುಕುಂದ್ ಸುಮಿ ಮತ್ತು ಕೊಪ್ಪಳದ ಕಲ್ಯಾಣಿ ಸ್ಟೀಲ್ಸ್ ಕಂಪನಿಯ ಪ್ರತಿನಿಧಿಗಳು ಸಭೆಯಲ್ಲಿದ್ದರು.

‘₹ 30 ಸಾವಿರ ಕೋಟಿ ಬಂಡವಾಳ’

‘ಇ.ಎಸ್.ಡಿ.ಎಂ ವಲಯಕ್ಕೆ ಸೇರಿದ ಜಾಗತಿಕ ಮಟ್ಟದ ಕಂಪನಿಗಳು ಮುಂಬರುವ ದಿನಗಳಲ್ಲಿ ₹ 25 ಸಾವಿರ ಕೋಟಿಯಿಂದ ₹30 ಸಾವಿರ ಕೋಟಿ ಬಂಡವಾಳ ಹೂಡಿಕೆ ಮಾಡಲು ಉತ್ಸುಕವಾಗಿವೆ. ಇದು ಆ ಕಂಪನಿಗಳ ಎರಡನೇ ಹಂತದ ಹೂಡಿಕೆಯಾಗಿದ್ದು, ಕರ್ನಾಟಕವು ಇದರಲ್ಲಿ ಹೆಚ್ಚಿನ ಪಾಲು ಸೆಳೆಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಿದೆ’ ಎಂದು ಎಂ.ಬಿ. ಪಾಟೀಲ ತಿಳಿಸಿದರು.

ಸೌರ ಉತ್ಪನ್ನಗಳಿಗೆ ಭಾರಿ ಸುಂಕ

ಒಂದನೇ ಪುಟದಿಂದ...

ಭಾರತದಲ್ಲಿ ಉತ್ತೇಜನ: ಭಾರತದಲ್ಲಿ ನವೀಕರಿಸಬಹುದಾದ ಮೂಲಗಳಿಂದ ಇಂಧನ ಉತ್ಪಾದನೆ ಹೆಚ್ಚಿಸಲು, ಈ ಕ್ಷೇತ್ರದಲ್ಲಿ ಆಮದು ಅವಲಂಬನೆ ಕಡಿಮೆ ಮಾಡಲು ಕೇಂದ್ರ ಸರ್ಕಾರವು ಹಲವು ಕ್ರಮಗಳನ್ನು ಕೈಗೊಳ್ಳುತ್ತಿದೆ. ಸೌರವಿದ್ಯುತ್ ಉತ್ಪಾದನಾ ಕ್ಷೇತ್ರಕ್ಕೆ ಕೂಡ ಈ ಕ್ರಮಗಳ ಅಡಿಯಲ್ಲಿ ಆದ್ಯತೆ ನೀಡಲಾಗಿದೆ. ಜಗತ್ತಿನಲ್ಲಿ ಸೌರವಿದ್ಯುತ್ ಉತ್ಪಾದನೆಯಲ್ಲಿ ಭಾರತವು ಈಗ ಮೂರನೆಯ ಸ್ಥಾನದಲ್ಲಿದೆ.

ದೇಶದಲ್ಲಿ ಸೌರಫಲಕಗಳ, ಸೌರವಿದ್ಯುತ್ ಉತ್ಪಾದನೆಯಲ್ಲಿ ಬಳಕೆಯಾಗುವ ಇತರ ವಸ್ತುಗಳ ತಯಾರಿಕೆಗೆ ಉತ್ತೇಜನ ನೀಡಲು ಕೇಂದ್ರ ಸರ್ಕಾರವು, ಮೇಲ್ಚಾವಣಿ ಸೌರವಿದ್ಯುತ್ ಯೋಜನೆ, ಪಿಎಂ–ಕುಸುಮ್ ಯೋಜನೆಯಲ್ಲಿ ಭಾರತದಲ್ಲಿಯೇ ತಯಾರಾದ ಉತ್ಪನ್ನಗಳ ಬಳಕೆಯನ್ನು ಕಡ್ಡಾಯ ಮಾಡಿದೆ.

ಕೇಂದ್ರ ಸರ್ಕಾರವು 2022ರಲ್ಲಿ ಸೌರ ಕೋಶಗಳು, ಸೌರ ಮಾಡ್ಯೂಲ್‌ಗಳ ಮೇಲೆ ಮೂಲ ಸೀಮಾ ಸುಂಕವನ್ನು ವಿಧಿಸಿದೆ. ಆಮದು ತಗ್ಗಿಸುವ ಉದ್ದೇಶದಿಂದ ಹೀಗೆ ಮಾಡಲಾಗಿದೆ.

ಸಾರಿಗೆ ಸಂಸ್ಥೆ ನಷ್ಟಕ್ಕೆ ಶಕ್ತಿ ಯೋಜನೆ ಕಾರಣ ಅಲ್ಲ: ರಾಮಲಿಂಗಾ ರೆಡ್ಡಿ

ಕೆಜಿಎಫ್: ‘ಸಾರಿಗೆ ಸಂಸ್ಥೆಗಳ ನಷ್ಟಕ್ಕೆ ಶಕ್ತಿ ಯೋಜನೆ ಕಾರಣ ಅಲ್ಲ. ಬಿಜೆಪಿ ಸರ್ಕಾರದ ಅವಧಿಯಿಂದಲೂ ಸಾರಿಗೆ ಸಂಸ್ಥೆ ನಷ್ಟದಲ್ಲಿತ್ತು’ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಹೇಳಿದ್ದಾರೆ.

ರಾಬರ್ಟಸನ್‌ಪೇಟೆಯಲ್ಲಿ ಬುಧವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಶಕ್ತಿ ಯೋಜನೆಗೂ ಸಾರಿಗೆ ಸಂಸ್ಥೆ ನಷ್ಟಕ್ಕೂ ಸಂಬಂಧವಿಲ್ಲ. ನಷ್ಟ ಸರಿದೂಗಿಸಲು ರಾಜ್ಯ ಸರ್ಕಾರ ಪ್ರಯತ್ನಿಸುತ್ತಿದೆ’ ಎಂದರು.

‘ಜನರಿಗೆ ಸವಲತ್ತು ಕೊಡುವುದು ಉದ್ದೇಶ. ನಮ್ಮಲ್ಲಿ ಶೇ 35ರಷ್ಟು ಲಾಭ ಬರುತ್ತಿದೆ. ನಷ್ಟವಾದರೂ ಬಸ್ ಓಡಿಸುತ್ತೇವೆ. ಇಲ್ಲಿ ಲಾಭದ ದೃಷ್ಟಿ ಇಲ್ಲ. ಖಾಸಗಿಯವರು ಲಾಭ ಇಲ್ಲದಿದ್ದರೆ ಬಸ್ ಓಡಿಸುವುದಿಲ್ಲ’ ಎಂದರು.

ಸಂಪುಟ ಉಪ ಸಮಿತಿ ನಿರ್ಧಾರ ಸಂವಿಧಾನ ವಿರೋಧಿ: ಆಕ್ರೋಶ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಒಳ ಮೀಸಲಾತಿ ಅನ್ವಯ ವಿಶ್ವವಿದ್ಯಾಲಯದ ವಿವಿಧ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆಸುವಾಗ ಇಡೀ ವಿ.ವಿ.ಯನ್ನೇ ಘಟಕವನ್ನಾಗಿ ಪರಿಗಣಿಸುವ ನಿರ್ಧಾರ ಕೈಗೊಂಡಿರುವುದು ಸಂವಿಧಾನ ವಿರೋಧಿ ನಡೆ’ ಎಂದು ಮಾಜಿ ಸಚಿವ ಎಚ್.ಆಂಜನೇಯ ಟೀಕಿಸಿದ್ದಾರೆ.



ಎಚ್. ಆಂಜನೇಯ

‘ವಿ.ವಿ.ಯನ್ನೇ ಘಟಕವಾಗಿ ಪರಿಗಣಿಸುವ ಕುರಿತು ಸಚಿವ ಡಾ.ಎಚ್.ಸಿ.ಮಹದೇವಪ್ಪ ಪ್ರಕಟಿಸಿದ್ದಾರೆ. ಸಂಪುಟ ಉಪ ಸಮಿತಿಯ ನಿರ್ಧಾರವನ್ನು ಕೂಡಲೇ ವಾಪಸ್ ಪಡೆದುಕೊಳ್ಳಬೇಕು’ ಎಂದು ಬುಧವಾರ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಹಲವು ದಶಕಗಳ ಹೋರಾಟದ ನಂತರ ಈಗಷ್ಟೇ ಒಳಮೀಸಲಾತಿ ಪಡೆದುಕೊಳ್ಳಲಾಗಿದೆ. ‘ಎ’ ವರ್ಗದಲ್ಲಿರುವ ದಲಿತ ಎಡಗೈ ಸಮುದಾಯದವರಿಗೆ ನ್ಯಾಯಯುತವಾಗಿ ಹುದ್ದೆಗಳು ದೊರೆತರೆ ಕೊಟ್ಟೆಕಿಚ್ಚು ಪಡುವುದು ಸಾಮಾಜಿಕ ನ್ಯಾಯವಲ್ಲ’ ಎಂದು ಹೇಳಿದರು.

‘ರಾಜ್ಯದ ವಿ.ವಿ.ಗಳಲ್ಲಿ ಯಾವ ಜಾತಿಯವರು ಎಷ್ಟು ಸಂಖ್ಯೆಯಲ್ಲಿದ್ದಾರೆ ಎಂಬುದನ್ನು ಬಹಿರಂಗಗೊಳಿಸಿದರೆ ಸತ್ಯ ತಿಳಿಯುತ್ತದೆ. ಸಂಪುಟ ಉಪ ಸಮಿತಿ ಸಭೆಯಲ್ಲಿ ಮಾದಿಗ ವಿರೋಧಿ ನಿರ್ಧಾರ ಕೈಗೊಳ್ಳಲಾಗಿದೆ. ಮುಖ್ಯಮಂತ್ರಿಯು ಕೂಡಲೇ ಮಧ್ಯಪ್ರವೇಶಿಸಿ ಗೊಂದಲ ಸರಿಪಡಿಸಬೇಕು’ ಎಂದು ಕೋರಿದರು.

ವರ್ಷದಲ್ಲಿ 127 ಕೆ.ಜಿ ಚಿನ್ನದ ಕಳ್ಳ ಸಾಗಣೆ

ಒಂದನೇ ಪುಟದಿಂದ...

ಅದಾದ ಮೇಲೆ ನಗರದ ಲ್ಯಾವೆಲ್ಲೆ ರಸ್ತೆಯ ನಂದವಾಣಿ ಮ್ಯಾನ್ಷನ್ ಫ್ಲ್ಯಾಟ್ ಮೇಲೆ ದಾಳಿ ನಡೆಸಿದ್ದರು ನಗದು ಜಪ್ತಿ ಮಾಡಿದ್ದರು. ರನ್ಯಾ ರಾವ್, ತರುಣ್ ಕೊಂಡೂರು ರಾಜು, ಸಾಹಿಲ್ ಸರ್ಕಾರಿಯಾ ಅವರ ಹೆಸರನ್ನು ದೋಷಾರೋಪ ಪಟ್ಟಿಯಲ್ಲಿ ಇ.ಡಿ ಉಲ್ಲೇಖಿಸಿದೆ.

ರನ್ಯಾ ಅವರು ಚಿನ್ನವನ್ನು ವಿದೇಶದಿಂದ ಕಳ್ಳ ಸಾಗಣೆ ಮಾಡಿಕೊಂಡು ಬಂದು ಅದರ ವಿಲೇವಾರಿಗೆ ಸಹಚರರನ್ನು ಬಳಸಿಕೊಂಡಿದ್ದರು. ಆರೋಪಿಗಳ ವಿರುದ್ಧ ಅಕ್ರಮ ಹಣ ವರ್ಗಾವಣೆ (ತಡೆ) ಕಾಯ್ದೆ (ಪಿಎಂಎಲ್‌ಎ) ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿತ್ತು ಎಂದು ಇ.ಡಿ ಹೇಳಿದೆ.

‘ಕಳ್ಳ ಸಾಗಣೆ ಮಾಡಿಕೊಂಡು ಬಂದ ಚಿನ್ನವನ್ನು ಚಿನ್ನಾಭರಣ ಅಂಗಡಿಗಳಿಗೆ ಮಾರಾಟ ಮಾಡಲಾಗಿತ್ತು. ಹವಾಲದ ಮೂಲಕ ಹಣ ಪಡೆದುಕೊಳ್ಳಲಾಗಿತ್ತು ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಉಲ್ಲೇಖಿಸಲಾಗಿದೆ.

ಕಳೆದ ವರ್ಷದ ಮೇ 21, 22ರಂದು ರಾಜ್ಯದ 16 ಸ್ಥಳಗಳ ಮೇಲೆ ದಾಳಿ ನಡೆಸಿ ದಾಖಲೆಗಳು, ಡಿಜಿಟಲ್ ಸಾಕ್ಷ್ಯ ಹಾಗೂ ದೇಶ– ವಿದೇಶಗಳ ಕರೆನ್ಸಿ ಜಪ್ತಿ ಮಾಡಲಾಗಿತ್ತು ಎಂದು ಉಲ್ಲೇಖಿಸಲಾಗಿದೆ.

ರನ್ಯಾ ಹಾಗೂ ತರುಣ್ ಕೊಂಡೂರು ರಾಜ್ ಅವರಿಗೆ ಕೆಲವು ತಿಂಗಳ ಹಿಂದೆ ನಗರದ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯವು ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು. ಆದರೆ, ರನ್ಯಾ ಅವರ ವಿರುದ್ಧ ವಿದೇಶಿ ವಿನಿಮಯ ನಿಯಂತ್ರಣ ಮತ್ತು ಕಳ್ಳ ಸಾಗಣೆ ಚಟುವಟಿಕೆಗಳ ತಡೆ ಕಾಯ್ದೆಯ (ಕಾಫಿಪೋಸಾ) 3(1) ಸೆಕ್ಷನ್ ಅಡಿಯಲ್ಲಿ ಬಂಧನದ ಆದೇಶ ಹೊರಡಿಸಿತ್ತು. ಕಾಫಿಪೋಸಾ ಪ್ರಕರಣದಲ್ಲಿ ಬಂಧನವಾದರೆ ಜಾಮೀನಿನ ಮೇಲೆ ಬಿಡುಗಡೆ ಸಾಧ್ಯವಿಲ್ಲ. ಹೀಗಾಗಿ, ಜಾಮೀನು ಸಿಕ್ಕರೂ ರನ್ಯಾ ಅವರಿಗೆ ಬಿಡುಗಡೆಯ ಭಾಗ್ಯ ಸಿಕ್ಕಿಲ್ಲ.

‘ಇಸ್ರೇಲ್ ಕೈಗೊಂಬೆ ಮೋದಿ’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಎರಡು ದಿನಗಳ ಭೇಟಿಗಾಗಿ ಇಸ್ರೇಲ್‌ಗೆ ಪ್ರಯಾಣ ಬೆಳೆಸಿದ ಬೆನ್ನಲ್ಲೇ, ಕಾಂಗ್ರೆಸ್ ಪಕ್ಷವು ‘ಎಪ್‌ಸ್ಟೈನ್ ಫೈಲ್ಸ್’ ವಿಚಾರ ಮುಂದಿಟ್ಟುಕೊಂಡು ಮೋದಿ ವಿರುದ್ಧ ಬುಧವಾರ ವಾಗ್ದಾಳಿ ನಡೆಸಿದೆ.

‘ಮೋದಿ, ಅಮೆರಿಕ ಮತ್ತು ಇಸ್ರೇಲ್‌ನ ಕೈಗೊಂಬೆ’ ಎಂದು ಆರೋಪಿಸಿರುವ ಕಾಂಗ್ರೆಸ್,‘ಇಸ್ರೇಲ್‌ಗೆ ಭೇಟಿಯ ಸಂದರ್ಭದಲ್ಲಿ, ಗಾಜಾದಲ್ಲಿ ನಡೆದ ನರಮೇಧ ಕುರಿತು ಮೋದಿ ಪ್ರಸ್ತಾಪಿಸುವರೇ’ ಎಂದು ಪ್ರಶ್ನಿಸಿದೆ.

‘ಇಸ್ರೇಲ್‌ನೊಂದಿಗಿನ ವ್ಯವಹಾರಕ್ಕೆ ಸಂಬಂಧಿಸಿ ಮೋದಿ ಸರ್ಕಾರದ ನೀತಿಯನ್ನು ರೂಪಿಸಿದ್ದು ವಿದೇಶಾಂಗ ಸಚಿವಾಲಯವಲ್ಲ. ಅದನ್ನು ರೂಪಿಸಿದ್ದು ಜೆಫ್ರಿ ಎಪ್‌ಸ್ಟೈನ್, ಇಸ್ರೇಲ್ ಮಾಜಿ ಪ್ರಧಾನಿ ಇ.ಬರಾಕ್, ಅನಿಲ್ ಅಂಬಾನಿ ಹಾಗೂ ಹರದೀಪ್ ಸಿಂಗ್ ಪುರಿ ಎಂಬುದಾಗಿ 2017ರ ಇ–ಮೇಲ್‌ಗಳಲ್ಲಿ ಉಲ್ಲೇಖಿಸಲಾಗಿದೆ ಎಂದು ‘ಎಪ್‌ಸ್ಟೈನ್ ಫೈಲ್ಸ್’ನಲ್ಲಿ ಹೇಳಲಾಗಿದೆ’ ಎಂದು ಕಾಂಗ್ರೆಸ್‌ನ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅವರು ಹೇಳಿದ್ದಾರೆ.

> **ಅಮೆರಿಕ–ಭಾರತ ನಡುವಿನ ಮಧ್ಯಂತರ ವ್ಯಾಪಾರ ಒಪ್ಪಂದ ರದ್ದುಗೊಳಿಸುವಂತೆ ಸವಾಲು ಹಾಕಿ 24 ಗಂಟೆಯೂ ಆಗಿಲ್ಲ. ಅಷ್ಟರೊಳಗೇ ಪ್ರಧಾನಿ ಇಸ್ರೇಲ್‌ಗೆ ಹಾರಿದ್ದಾರೆ**
>
> **ರಾಹುಲ್ ಗಾಂಧಿ**
> ಕಾಂಗ್ರೆಸ್ ನಾಯಕ

‘ಇಸ್ರೇಲ್ ಜತೆ ಇದ್ದೇವೆ’

2023ರ ಅಕ್ಟೋಬರ್ 7ರಂದು ಹಮಾಸ್ ನಡೆಸಿದ ದಾಳಿಯ ನಂತರ ಭಾರತವು ‘ಪೂರ್ಣ ದೃಢನಿಶ್ಚಯ’ ದೊಂದಿಗೆ ಇಸ್ರೇಲ್ ಜತೆ ನಿಂತಿದೆ ಎಂದು ಮೋದಿ ಅವರು ಇಸ್ರೇಲ್ ಸಂಸದರಿಗೆ ತಿಳಿಸಿದರು.

‘ಹಮಾಸ್ ನಡೆಸಿದ ಬರ್ಬರ ಭಯೋತ್ಪಾದಕ ದಾಳಿಯಲ್ಲಿ ಮೃತಪಟ್ಟವರಿಗೆ ಮತ್ತು ಪ್ರತಿಯೊಂದು ಸಂತ್ರಸ್ತ ಕುಟುಂಬಕ್ಕೂ ಭಾರತೀಯರ ಪರವಾಗಿ ಸಂತಾಪ ಸೂಚಿಸುವೆ’ ಎಂದು ಹೇಳಿದರು.

ಭಯೋತ್ಪಾದನೆ ನಿಗ್ರಹ: ಯತ್ನ ಅಗತ್ಯ

ಒಂದನೇ ಪುಟದಿಂದ...

ಭಾಷಣದ ಬಳಿಕ ಇಸ್ರೇಲ್ ಸಂಸತ್ತು ಮೋದಿ ಅವರಿಗೆ ‘ಸ್ಪೀಕರ್ ಆಫ್ ದಿ ಕೆನೆಸೆಟ್’ ಪದಕ ಪ್ರದಾನ ಮಾಡಿತು.

ಆತ್ಮೀಯ ಸ್ವಾಗತ: ಒಂಬತ್ತು ವರ್ಷಗಳಲ್ಲಿ ಎರಡನೇ ಬಾರಿಗೆ ಇಸ್ರೇಲ್‌ಗೆ ಭೇಟಿ ನೀಡಿದ ಮೋದಿ ಅವರನ್ನು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮತ್ತು ಪತ್ನಿ ಸಾರಾ ಅವರು ಬೆನ್ ಗುರಿಯನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಆತ್ಮೀಯವಾಗಿ ಬರಮಾಡಿಕೊಂಡರು. ಆ ಬಳಿಕ ಇಬ್ಬರೂ ನಾಯಕರು ವಿಮಾನ ನಿಲ್ದಾಣದಲ್ಲಿ ಕೆಲಹೊತ್ತು ಸಭೆ ನಡೆಸಿದರು.

‘ಪ್ರಧಾನಿ ನೆತನ್ಯಾಹು ಅವರೊಂದಿಗೆ ರಚನಾತ್ಮಕ ಸಭೆ ನಡೆಯಿತು. ನನಗೆ ಆತ್ಮೀಯ ಸ್ವಾಗತ ನೀಡಿದ್ದಕ್ಕೆ ಅವರಿಗೆ ಕೃತಜ್ಞತೆ ಸಲ್ಲಿಸಿದೆ. ಒಂಬತ್ತು ವರ್ಷಗಳ ನಂತರ ಇಸ್ರೇಲ್‌ಗೆ ಮರಳಿರುವುದು ಸಂತೋಷ ತಂದಿದೆ’ ಎಂದು ಮೋದಿ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ನಾನು ಮತ್ತು ಪತ್ನಿ ಸಾರಾ ನಮ್ಮ ಆತ್ಮೀಯ ಸ್ನೇಹಿತ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸ್ವಾಗತಿಸಿದೆವು. ಅವರು ಮತ್ತೊಂದು ಐತಿಹಾಸಿಕ ಭೇಟಿಗಾಗಿ ಇಸ್ರೇಲ್‌ಗೆ ಆಗಮಿಸಿದ್ದಾರೆ’ ಎಂದು ನೆತನ್ಯಾಹು ‘ಎಕ್ಸ್’ನಲ್ಲಿ ಹೇಳಿದ್ದಾರೆ.

‘ಮೋದಿ ಅವರೊಂದಿಗೆ ನಿಕಟ ವೈಯಕ್ತಿಕ ಸಂಬಂಧ ಹೊಂದಿದ್ದೇನೆ. ನಾವು ಆಗಾಗ್ಗೆ ಮಾತನಾಡುತ್ತೇವೆ ಮತ್ತು ನಮ್ಮ ನಡುವಿನ ಸ್ನೇಹವು ಎರಡೂ ದೇಶಗಳ ನಡುವಿನ ಸಂಬಂಧಗಳನ್ನು ಪ್ರತಿಬಿಂಬಿಸುವುದಾಗಿ ನಂಬುತ್ತೇನೆ ಎಂದಿದ್ದಾರೆ.

ಪ್ರಧಾನಿ ಮಾತು
- ಇಂದಿನ ಅನಿಶ್ಚಿತ ಜಗತ್ತಿನಲ್ಲಿ, ಭಾರತ ಮತ್ತು ಇಸ್ರೇಲ್ ನಂತಹ ವಿಶ್ವಾಸಾರ್ಹ ಪಾಲುದಾರ ರಾಷ್ಟ್ರಗಳ ನಡುವೆ ಬಲವಾದ ರಕ್ಷಣಾ ಸಹಕಾರ ಅತ್ಯಗತ್ಯ
- ಗಾಜಾದಲ್ಲಿ ಶಾಂತಿ ನೆಲೆಸಲು ಜಾಗತಿಕ ಸಮುದಾಯವು ನಡೆಸುತ್ತಿರುವ ಪ್ರಯತ್ನವನ್ನು ಭಾರತ ಬೆಂಬಲಿಸುತ್ತದೆ
- ಭಯೋತ್ಪಾದನೆಯು ಸಮಾಜಗಳನ್ನು ಅಸ್ಥಿರಗೊಳಿಸುವ, ಅಭಿವೃದ್ಧಿಯನ್ನು ತಡೆಯುವ ಗುರಿಯನ್ನು ಹೊಂದಿದೆ
- ಇಸ್ರೇಲ್‌ನ ದೃಢನಿಶ್ಚಯ, ಧೈರ್ಯ ಮತ್ತು ಸಾಧನೆಗಳಿಗೆ ಭಾರತದಲ್ಲಿ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ

ಸಂಸತ್ತಿನಲ್ಲಿ ಭಾಷಣ ಇದೇ ಮೊದಲು

ಭಾರತದ ಪ್ರಧಾನಿಯೊಬ್ಬರು ಇಸ್ರೇಲ್ ಸಂಸತ್ತಿನಲ್ಲಿ ಭಾಷಣ ಮಾಡಿದ್ದು ಇದೇ ಮೊದಲು. ಈ ಮೂಲಕ ಮೋದಿ ಅವರು ಇಸ್ರೇಲ್ ಸಂಸತ್ತಿನಲ್ಲಿ ಭಾಷಣ ಮಾಡಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಈಜಿಪ್ಟ್‌ನ ಮಾಜಿ ಅಧ್ಯಕ್ಷ ದಿವಂಗತ ಅನ್ವರ್ ಸಾದಾತ್, ಅರ್ಜೆಂಟೀನಾದ ಅಧ್ಯಕ್ಷ ಹಾವಿಯೆರ್ ಮಿಲೆಯ್ ಅವರಂತಹ ನಾಯಕರ ಸಾಲಿಗೆ ಸೇರಿದರು.



'ಟಾಕ್ಸಿಕ್'ನಲ್ಲಿ ಬಾಲಾಜಿ ಮನೋಹರ್

ಬಾಲಾಜಿ ಮನೋಹರ್

'ಲೂಸಿಯಾ' 'ಅವನೇ ಶ್ರೀಮನ್ನಾರಾಯಣ', 'ಅವತಾರ ಪುರುಷ' ಹೀಗೆ ಹಲವು ಸಿನಿಮಾಗಳಲ್ಲಿ ಭಿನ್ನವಾದ ಪಾತ್ರಗಳ ಮೂಲಕ ಪ್ರೇಕ್ಷಕರನ್ನು ತಲುಪಿರುವ ನಟ ಬಾಲಾಜಿ ಮನೋಹರ್, ಯಶ್ ನಟನೆಯ 'ಟಾಕ್ಸಿಕ್'ನಲ್ಲಿ 'ಭೀರ' ಎಂಬ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಯಶ್ ನಟನೆಯ 19ನೇ ಸಿನಿಮಾ 'ಟಾಕ್ಸಿಕ್: ಎ ಫೇರಿಟೇಲ್ ಫಾರ್ ಗ್ರೋನ್ ಅಪ್ಸ್' ಮಾರ್ಚ್ 19 ರಂದು ತೆರೆಕಾಣುತ್ತಿದ್ದು, ಮೊದಲಿಗೆ ನಯನತಾರಾ, ರುಕ್ಮಿಣಿ ವಸಂತ್, ಹುಮಾ ಖುರೇಷಿ, ಕಿಯಾರಾ ಅಡ್ವಾಣಿ ಹಾಗೂ ತಾರಾ ಅವರ ಪಾತ್ರಗಳನ್ನು ಚಿತ್ರತಂಡ ಪರಿಚಯಿಸಿತ್ತು. ಬಳಿಕ ಯಶ್ ಅವರ 'ರಾಯ' ಹಾಗೂ 'ಟಿಕೆಟ್' ಎಂಬ ಎರಡು ಶೇಡ್‌ಗಳನ್ನು ಪರಿಚಯಿಸಲಾಗಿತ್ತು. ಇದೀಗ ಸಿನಿಮಾದೊಳಗಿರುವ ಪ್ರಮುಖ ಪುರುಷ ಪಾತ್ರಗಳನ್ನು ಪರಿಚಯಿಸುತ್ತಿದೆ.

ಸಿನಿಮಾ ಜೊತೆಗೆ ರಂಗಭೂಮಿಯಲ್ಲೂ ಸಕ್ರಿಯರಾಗಿರುವ ಬಾಲಾಜಿ ಮನೋಹರ್ ಜೊತೆಗೆ ತೆಲುಗು, ಮಲಯಾಳ ಸಿನಿಮಾಗಳಲ್ಲಿ ಹೆಚ್ಚಾಗಿ ನಟಿಸುವ ಸುದೇವ್ ನಾಯರ್ 'ಕರ್ಮಡಿ' ಎಂಬ ಪಾತ್ರಕ್ಕೆ ಬಣ್ಣಹಚ್ಚಿದ್ದಾರೆ. ಕನ್ನಡದ 'ಓಲ್ಡ್ ಮಾಂಕ್' ಸಿನಿಮಾದಲ್ಲಿ ನಟಿಸಿದ್ದ ಸುದೇವ್ ಇದೀಗ ಮತ್ತೊಮ್ಮೆ ಕನ್ನಡದ ಪ್ಯಾನ್ ಇಂಡಿಯಾ ಸಿನಿಮಾ ಮೂಲಕ ಮರಳಿದ್ದಾರೆ. ಬಾಲಿವುಡ್‌ನ ನಟ ಅಕ್ಷಯ್ ಒಬೆರಾಯ್ 'ಟೋನಿ' ಎಂಬ ಪಾತ್ರದಲ್ಲಿ ಹಾಗೂ ಡ್ಯಾರೆಲ್ ಡಿ'ಸಿಲ್ವ 'ಸಾಲ್ವಡಾರ್' ಎಂಬ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.



ಸುದೇವ್ ನಾಯರ್

ಗೀತು ಮೋಹನ್‌ದಾಸ್ ನಿರ್ದೇಶನದ 'ಟಾಕ್ಸಿಕ್'ನಲ್ಲಿ ನಟರಾಗಿ, ಸಹ–ಬರಹಗಾರರಾಗಿ, ಸಹ–ನಿರ್ಮಾಪಕರಾಗಿ ಯಶ್ ಕಾರ್ಯನಿರ್ವಹಿಸಿದ್ದಾರೆ. ವೆಂಕಟ್ ಕೆ.ನಾರಾಯಣ್ ಈ ಸಿನಿಮಾ ನಿರ್ಮಾಣ ಮಾಡಿದ್ದು, ಮಾನ್‌ಸ್ಟರ್‌ಮೈಂಡ್ ಕ್ರಿಯೇಷನ್ಸ್‌ನಡಿ ಯಶ್ ಸಾಥ್ ನೀಡಿದ್ದಾರೆ. ಸಿನಿಮಾ ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಏಕಕಾಲದಲ್ಲಿ ಚಿತ್ರೀಕರಣಗೊಂಡಿದ್ದು, ಹಿಂದಿ, ತಮಿಳು, ತೆಲುಗು, ಮಲಯಾಳ ಸೇರಿದಂತೆ ಹಲವು ಭಾರತೀಯ ಹಾಗೂ ವಿದೇಶಿ ಭಾಷೆಗಳಲ್ಲಿ ಡಬ್ ಆಗಿ ರಿಲೀಸ್ ಆಗಲಿದೆ.

ಸೆಟ್ಟೇರಿದ 'ಗೋಲ್‌ಮಾಲ್‌-5'

2006ರಲ್ಲಿ ತೆರೆಕಂಡ 'ಗೋಲ್‌ಮಾಲ್' ಸಿನಿಮಾ ಬಾಲಿವುಡ್‌ನಲ್ಲಿ ಸೂಪರ್ ಹಿಟ್ ಆಯಿತು. ಅಜಯ್ ದೇವಗನ್ ಮತ್ತು ರೋಹಿತ್ ಶೆಟ್ಟಿ ಜೋಡಿ ಈ ಸಿನಿಮಾ ಮೂಲಕ ಹೊಸ ಇತಿಹಾಸವನ್ನೇ ಬರೆದರು. ಈ ಶೀರ್ಷಿಕೆ ಅದೆಷ್ಟು ಜನಪ್ರಿಯವಾಯಿತೆಂದರೆ, ಇಲ್ಲಿತನಕ ಈ ಕಥೆಯ ಮುಂದುವರಿದ ಭಾಗವಾಗಿ ನಾಲ್ಕು ಸಿನಿಮಾಗಳು ತೆರೆಕಂಡಿವೆ. ಅದೇ ಜೋಡಿಯ 'ಗೋಲ್‌ಮಾಲ್‌-5' ಇತ್ತೀಚೆಗೆ ಮುಂಬೈನಲ್ಲಿ ಸೆಟ್ಟೇರಿದೆ. ಇದು ಕೂಡ 'ಗೋಲ್‌ಮಾಲ್' ಮೂಲ ಕಥಾ ಸರಣಿಯ ಮುಂದುವರಿದ ಭಾಗವಾಗಿದೆ.

ರೋಹಿತ್ ಶೆಟ್ಟಿ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಸಿನಿಮಾದಲ್ಲಿ 'ಗೋಲ್‌ಮಾಲ್'ನ ಇತರ ಪಾತ್ರಧಾರಿಗಳಾದ ಅರ್ಷಾದ್ ವಾರ್ಸಿ, ತುಷಾರ್ ಕಪೂರ್ ಮುಂತಾದವರು ನಟಿಸಲಿದ್ದಾರೆ. ಜತೆಗೆ ಕೆಲ ಹೊಸ ನಟರು ತಂಡವನ್ನು ಸೇರಿಕೊಂಡಿದ್ದಾರೆ ಎಂದು ಹಿಂದಿ ಮಾಧ್ಯಮಗಳು ವರದಿ ಮಾಡಿವೆ.

ಬಹುಭಾಷಾ ನಟಿ ಪ್ರಿಯಾಮಣಿ ಅಜಯ್ ದೇವಗನ್‌ಗೆ ನಾಯಕಿಯಾಗಲಿದ್ದಾರೆ ಎಂಬ ವದಂತಿಯಿದೆ. 'ಗೋಲ್‌ಮಾಲ್' ಚಿತ್ರದಲ್ಲಿದ್ದ ಶರ್ಮನ್ ಜೋಶಿ ಕೂಡ 20 ವರ್ಷಗಳ ಬಳಿಕ ಮತ್ತೆ ಈ ತಂಡ ಸೇರಿಕೊಳ್ಳುತ್ತಿದ್ದಾರೆ. ಅಕ್ಷಯ್ ಕುಮಾರ್ ಚಿತ್ರದಲ್ಲಿ ಖಳನಾಯಕನಾಗಿ ಕಾಣಿಸಿಕೊಳ್ಳುವ ಸಾಧ್ಯತೆಯಿದೆ ಎನ್ನಲಾಗಿದೆ.

'ಗೋಲ್‌ಮಾಲ್'ನಲ್ಲಿ ಗೋಪಾಲ್, ಲಕ್ಕಿ, ಮಾಧವ್, ಲಕ್ಷ್ಮಣ್ ಎಂಬ ನಾಲ್ವರು ಸ್ನೇಹಿತರ ಹಾಸ್ಯಮಯ ಕಥೆಯಿತ್ತು. ಉಳಿದ ಭಾಗಗಳಲ್ಲಿಯೂ ಈ ಪಾತ್ರಧಾರಿಗಳ ಕಥೆಯೇ ಮುಂದುವರಿದಿತ್ತು. ಈ ಚಿತ್ರದ ನಾಲ್ಕು ಭಾಗಗಳಿಗೂ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಕೊನೆಯದಾಗಿ 2022ರಲ್ಲಿ 'ಸರ್ಕಸ್' ಎಂಬ ಶೀರ್ಷಿಕೆಯಲ್ಲಿ ಈ ಕಥೆಯ ನಾಲ್ಕನೆ ಭಾಗ ತೆರೆಕಂಡಿತ್ತು.

ರೋಹಿತ್ ಶೆಟ್ಟಿ–ಅಜಯ್ ದೇವಗನ್ ಅವರ ಸಿನಿಮಾಗಳು ಯಶಸ್ವಿಯಾಗಿವೆ. ಹೀಗಾಗಿ ಈ ಜೋಡಿ ಮೇಲೆ ಭರವಸೆ ಹೆಚ್ಚಿದೆ. ರೋಹಿತ್ ಅವರ ಹಿಂದಿನ ಸಿನಿಮಾ 2024ರಲ್ಲಿ ತೆರೆಕಂಡ 'ಸಿಂಗಂ ಅಗೈನ್'ನಲ್ಲಿಯೂ ಅಜಯ್ ಅವರೇ ನಾಯಕನಾಗಿದ್ದರು.



ಅಜಯ್ ದೇವಗನ್



ಸಂಜಯ್ ದತ್

ಬರಲಿದ್ದಾನೆ 'ಖಲ್ನಾಯಕ್ ರಿಟರ್ನ್ಸ್'


ಬಾಲಿವುಡ್‌ನ ಹಿಟ್ ಸಿನಿಮಾಗಳಲ್ಲಿ ಒಂದಾದ ಸಂಜಯ್ ದತ್ ನಟನೆಯ 'ಖಲ್ನಾಯಕ್' ಸಿನಿಮಾದ ಮುಂದುವರಿದ ಭಾಗ (ಸೀಕ್ವೆಲ್) ಬರಲಿದೆ.

ಆಸ್ಪೆಕ್ಟ್ ಗ್ಲೋಬಲ್ ವೆಂಚರ್ಸ್‌ನ ಭಾಗವಾದ ಆಸ್ಪೆಕ್ಟ್ ಪ್ರೊಡಕ್ಷನ್ ಸಂಸ್ಥೆಯು 'ಖಲ್ನಾಯಕ್ ರಿಟರ್ನ್ಸ್'ನ ನಿರ್ಮಾಣ ಹಕ್ಕುಗಳನ್ನು ಅಧಿಕೃತವಾಗಿ ಪಡೆದಿದೆ. 1993ರಲ್ಲಿ ಬಿಡುಗಡೆಯಾದ ಸುಭಾಷ್ ಘಾಯ್ ನಿರ್ದೇಶನದ 'ಖಲ್ನಾಯಕ್'ನಲ್ಲಿ ಸಂಜಯ್ ದತ್, ಜಾಕಿಶ್ರಾಫ್ ಮತ್ತು ಮಾಧುರಿ ದೀಕ್ಷಿತ್ ಮುಖ್ಯಭೂಮಿಕೆಯಲ್ಲಿದ್ದರು. ಸೀಕ್ವೆಲ್‌ನಲ್ಲಿ ಸಂಜಯ್ ದತ್ ಅವರು ನಟಿಸುವುದು ಖಚಿತವಾಗಿದೆ. ಸಿನಿಮಾವನ್ನು ಯಾರು ನಿರ್ದೇಶಿಸಲಿದ್ದಾರೆ, ಕಲಾವಿದರು ಹಾಗೂ ರಿಲೀಸ್ ದಿನಾಂಕವನ್ನು ಶೀಘ್ರದಲ್ಲೇ ಘೋಷಿಸುವುದಾಗಿ ನಿರ್ಮಾಣ ಸಂಸ್ಥೆ ತಿಳಿಸಿದೆ.

'ಉಸ್ತಾದ್ ಭಗತ್ ಸಿಂಗ್ ರೀಮೇಕ್ ಅಲ್ಲ'

ಪವನ್ ಕಲ್ಯಾಣ್ ನಟನೆಯ ತೆಲುಗಿನ 'ಉಸ್ತಾದ್ ಭಗತ್ ಸಿಂಗ್' ಚಿತ್ರ ವಿಜಯ್ ಅಭಿನಯದ 'ತೇರಿ' ಚಿತ್ರದ ರೀಮೇಕ್ ಎಂಬ ಸುದ್ದಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಆದರೆ ಈ ಚಿತ್ರ ಯಾವುದೇ ಸಿನಿಮಾದ ರೀಮೇಕ್ ಅಲ್ಲ ಎಂದು ಚಿತ್ರದ ನಿರ್ದೇಶಕ ಹರಿಶಂಕರ್ ಸ್ಪಷ್ಟಪಡಿಸಿದ್ದಾರೆ.

ಈ ಬಗ್ಗೆ ವಿಡಿಯೊ ಮಾಡಿ ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿರುವ ಹರಿಶಂಕರ್, 'ಸಾಕಷ್ಟು ಜನ ಈ ಸಿನಿಮಾ ರಾಜಕೀಯ ಪ್ರೇರಿತವಾಗಿದೆಯೇ ಎಂದು ಕೇಳಿದ್ದಾರೆ. ಆದರೆ ಪವನ್ ಕಲ್ಯಾಣ್ ಸಿನಿಮಾವನ್ನು ಸಿನಿಮಾವಾಗಿಯೇ ನೋಡುತ್ತಾರೆ. ಹೀಗಾಗಿ ಯಾವುದೇ ರಾಜಕೀಯ ಹಿತಾಸಕ್ತಿ ಈ ಸಿನಿಮಾದಲ್ಲಿ ಇಲ್ಲ. ಇದೊಂದು ಸ್ಥಳೀಯ ಪೊಲೀಸ್ ಹಾಗೂ ಹಳ್ಳಿಯಲ್ಲಿನ ರಾಜಕೀಯದ ಕಥೆ. ಯಾವುದೇ ಪಕ್ಷದ ರಾಜಕೀಯಕ್ಕೆ ಸಂಬಂಧಿಸಿದ್ದಲ್ಲ. ಜತೆಗೆ ಯಾವುದೇ ಸಿನಿಮಾದ ರೀಮೇಕ್ ಕೂಡ ಅಲ್ಲ. ಈ ಹಿಂದೆ ಹೇಳಿದಂತೆ 2027ರ ಮಾರ್ಚ್ 26ರಂದು ಸಿನಿಮಾ ತೆರೆಗೆ ಬರಲಿದೆ' ಎಂದು ಹೇಳಿದ್ದಾರೆ.



ಪವನ್ ಕಲ್ಯಾಣ್

'ನ್ಯಾಯಾಂಗದ ಅವಹೇಳನಕ್ಕೆ ಅವಕಾಶ ಕೊಡೆವು'

ಎನ್‌ಸಿಇಆರ್‌ಟಿಯ 8ನೇ ತರಗತಿ ಪಠ್ಯದ 'ನ್ಯಾಯಾಂಗದಲ್ಲಿ ಭ್ರಷ್ಟಾಚಾರ' ಅಧ್ಯಾಯಕ್ಕೆ ಸುಪ್ರೀಂ ಕೋರ್ಟ್ ಆಕ್ಷೇಪ

ನವದೆಹಲಿ(ಪಿಟಿಐ): ಎನ್‌ಸಿಇಆರ್‌ಟಿಯ 8ನೇ ತರಗತಿ ಹೊಸ ಸಮಾಜವಿಜ್ಞಾನ ಪಠ್ಯಪುಸ್ತಕ ದಲ್ಲಿರುವ 'ನ್ಯಾಯಾಂಗದಲ್ಲಿ ಭ್ರಷ್ಟಾಚಾರ' ಎಂಬ ಅಧ್ಯಾಯ ಕುರಿತಂತೆ ಸುಪ್ರೀಂ ಕೋರ್ಟ್ ಬುಧವಾರ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

'ಯಾವುದೇ ವ್ಯಕ್ತಿಯು ನ್ಯಾಯಾಂಗದ ಅವಹೇಳನ ಮಾಡುವುದಕ್ಕೆ ಹಾಗೂ ಅದರ ಸಮಗ್ರತೆಗೆ ಧಕ್ಕೆ ತರುವುದಕ್ಕೆ ನಾವು ಅವಕಾಶ ನೀಡುವುದಿಲ್ಲ' ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಕಟುವಾಗಿ ಹೇಳಿದ್ದಾರೆ.

ಈ ಬೆಳವಣಿಗೆ ಕುರಿತಂತೆ ಕೇಂದ್ರ ಸರ್ಕಾರ ಆಕ್ರೋಶಗೊಂಡಿದೆ ಎಂದು ಮೂಲಗಳು ಹೇಳಿವೆ.

ಸುಪ್ರೀಂ ಕೋರ್ಟ್ ಆಕ್ಷೇಪ ವ್ಯಕ್ತಪಡಿಸಿದ ಬೆನ್ನಲ್ಲೇ, ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು (ಎನ್‌ಸಿಇಆರ್‌ಟಿ) ತನ್ನ ವೆಬ್‌ಸೈಟ್‌ನಿಂದ ಈ ಪುಸ್ತಕವನ್ನು ತೆಗೆದು ಹಾಕಿದೆ. ಜೊತೆಗೆ, ಈಗಾಗಲೇ ಮುದ್ರಣಗೊಂಡಿರುವ ಪಠ್ಯಪುಸ್ತಕ ಗಳಿಂದಲೂ ಈ ವಿವಾದಾತ್ಮಕ ಭಾಗಗಳನ್ನು ತೆಗೆಯಲು ಪರಿಷತ್ತು ಪರಿಗಣಿಸು ತ್ತಿದೆ ಎಂದು ಮೂಲಗಳು ತಿಳಿಸಿವೆ.

ಅಧ್ಯಾಯ–ಆಕ್ಷೇಪ: ನ್ಯಾಯಾಂಗ ಕುರಿತು ಎನ್‌ಸಿಇಆರ್‌ಟಿ ಪಠ್ಯಪುಸ್ತಕದಲ್ಲಿನ 'ಆಕ್ಷೇಪಾರ್ಹ' ಮಾಹಿತಿ ಬಗ್ಗೆ ಹಿರಿಯ ವಕೀಲರಾದ ಕಪಿಲ್ ಸಿಬಲ್ ಹಾಗೂ ಅಭಿಷೇಕ್ ಮನು ಸಿಂಘ್ವಿ ಪ್ರಸ್ತಾಪಿಸಿದ್ದರು. ಈ ವಿಷಯದ ವಿಚಾರಣೆಯನ್ನು ತುರ್ತಾಗಿ ನಡೆಸುವಂತೆಯೂ ಕೋರಿದ್ದರು.



ಇದನ್ನು ಪರಿಗಣಿಸಿದ, ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಹಾಗೂ ವಿಪುಲ್ ಪಂಚೋಲಿ ಅವರು ಇದ್ದ ನ್ಯಾಯಪೀಠ, ವಿಷಯವನ್ನು ವಿಚಾರಣೆಗೆ ಪರಿಗಣಿಸಿದೆ.

ವಿಚಾರಣೆ ವೇಳೆ,'ನ್ಯಾಯಾಂಗದಲ್ಲಿ ಭ್ರಷ್ಟಾಚಾರ ಕುರಿತಂತೆ 8ನೇ ತರಗತಿ ಮಕ್ಕಳಿಗೆ ಬೋಧಿಸಲಾಗುತ್ತದೆ ಎಂಬ ವಿಚಾರ ತಿಳಿದು ನಮ್ಮ ಮನಸ್ಸು ಕದಡಿದೆ. ನಾವು ಕೂಡ ನ್ಯಾಯಾಂಗದ ಭಾಗೀದಾರರು. ಆದರೆ, ಈ ಪುಸ್ತಕದಲ್ಲಿನ ಅಂಶಗಳು ಮಾನಹಾನಿಕರವಾಗಿವೆ' ಎಂದು ಕಪಿಲ್ ಸಿಬಲ್, ಪೀಠಕ್ಕೆ ತಿಳಿಸಿದರು.

'ಈ ವಿಚಾರ ಕುರಿತು, ಸುಪ್ರೀಂ ಕೋರ್ಟ್ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು, ವಿಚಾರಣೆ ನಡೆಸುವ ವಿಶ್ವಾಸ ಇದೆ' ಎಂದು ಸಿಬಲ್ ಹೇಳಿದರು.

'ಬೇರೆ ಯಾವ ಕ್ಷೇತ್ರದಲ್ಲಿಯೂ ಭ್ರಷ್ಟಾಚಾರ ಇಲ್ಲ ಎಂದು ಎನ್‌ಸಿಇಆರ್‌ಟಿ ಭಾವಿಸಿದಂತಿದೆ. ಅಧಿಕಾರಶಾಹಿ, ರಾಜಕೀಯ, ಸಾರ್ವಜನಿಕ ಜೀವನ ಹಾಗೂ ಇತರ ಸಂಸ್ಥೆಗಳಲ್ಲಿನ ಭ್ರಷ್ಟಾಚಾರದ ಬಗ್ಗೆ ಒಂದೇ ಒಂದು ಶಬ್ದ ಕೂಡ ಈ ಅಧ್ಯಾಯದಲ್ಲಿ ಇಲ್ಲ' ಎಂದು ಅಭಿಷೇಕ್ ಮನು ಸಿಂಘ್ವಿ ಹೇಳಿದರು.

> **ಇದು ಬಹಳ ಲೆಕ್ಕಾಚಾರ ಹಾಗೂ ದೀರ್ಘ ಆಲೋಚನೆಯಿಂದ ಕೈಗೊಂಡ ಕ್ರಮದಂತೆ ಕಂಡುಬರುತ್ತಿದೆ. ಈ ಕುರಿತು ಹೆಚ್ಚಿಗೆ ಏನನ್ನೂ ಹೇಳಲು ಬಯಸುವುದಿಲ್ಲ**
> **ಸೂರ್ಯ ಕಾಂತ್**
> ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ

ಇದಕ್ಕೆ ಪ್ರತಿಕ್ರಿಯಿಸಿದ ಸಿಜೆಐ ಸೂರ್ಯ ಕಾಂತ್,'ಈ ವಿಚಾರದ ಸಂಪೂರ್ಣ ಅರಿವು ನಮಗಿದೆ. ಹಲವು ಹೈಕೋರ್ಟ್‌ಗಳ ನ್ಯಾಯಮೂರ್ತಿಗಳು ಕೂಡ ವಿಚಲಿತರಾಗಿದ್ದಾರೆ. ಹಲವರು ನಮಗೆ ಕರೆ ಮಾಡಿದ್ದಾರೆ, ಸಂದೇಶಗಳನ್ನೂ ಕಳುಹಿಸಿದ್ದಾರೆ' ಎಂದರು.

'ಈ ಕುರಿತು ಈಗಾಗಲೇ ನಾನು ಆದೇಶ ಹೊರಡಿಸಿರುವೆ. ಈ ವಿಚಾರವನ್ನು ಹೇಗೆ ನಿಭಾಯಿಸಬೇಕು ಎಂಬುದು ನನಗೆ ಗೊತ್ತು. ಯಾವುದೇ ಕಾರಣಕ್ಕೂ ನ್ಯಾಯಾಂಗದ ಅವಹೇಳನಕ್ಕೆ ಅವಕಾಶ ನೀಡುವುದಿಲ್ಲ' ಎಂದು ಹೇಳಿದರು.

ಅಧ್ಯಾಯದಲ್ಲಿ ಏನಿದೆ?

'ಭ್ರಷ್ಟಾಚಾರ, ಬಾಕಿ ಇರುವ ಪ್ರಕರಣಗಳು ಹಾಗೂ ಅಗತ್ಯ ಸಂಖ್ಯೆಯಷ್ಟು ನ್ಯಾಯಾಧೀಶರು/ನ್ಯಾಯಮೂರ್ತಿಗಳು ಇಲ್ಲ. ಇವು ದೇಶದ ನ್ಯಾಯಾಂಗ ವ್ಯವಸ್ಥೆ ಎದುರಿಸುತ್ತಿರುವ ಸವಾಲುಗಳು' ಎಂದು 'ನ್ಯಾಯಾಂಗದಲ್ಲಿ ಭ್ರಷ್ಟಾಚಾರ' ಅಧ್ಯಾಯದಲ್ಲಿ ವಿವರಿಸಲಾಗಿದೆ.

'ನ್ಯಾಯಾಧೀಶರು/ನ್ಯಾಯಮೂರ್ತಿಗಳು ನೀತಿ ಸಂಹಿತೆಯಂತೆಯೇ ನಡೆದುಕೊಳ್ಳಬೇಕು. ಅವರು, ನ್ಯಾಯಾಲಯದ ಒಳಗೆ ಮಾತ್ರವಲ್ಲ, ಹೊರಗಡೆಯೂ ಹೇಗೆ ವರ್ತಿಸಬೇಕು ಎಂಬುದನ್ನು ಈ ಸಂಹಿತೆ ವಿವರಿಸುತ್ತದೆ' ಎಂದು ಹೇಳಲಾಗಿದೆ.

'ಸುಪ್ರೀಂ ಕೋರ್ಟ್‌ನಲ್ಲಿ 81 ಸಾವಿರ ಪ್ರಕರಣಗಳು ವಿಚಾರಣೆಗೆ ಬಾಕಿ ಇವೆ. ಹೈಕೋರ್ಟ್‌ಗಳಲ್ಲಿ ಇಂತಹ ಪ್ರಕರಣಗಳ ಸಂಖ್ಯೆ 62.40 ಲಕ್ಷ, ಜಿಲ್ಲಾ ಮತ್ತು ಅಧೀನ ಕೋರ್ಟ್‌ಗಳಲ್ಲಿ ಬಾಕಿ ಇರುವ ಪ್ರಕರಣಗಳ ಸಂಖ್ಯೆ 4.70 ಕೋಟಿ' ಎಂದು ವಿವರಿಸಲಾಗಿದೆ.

ನ್ಯಾಯಾಂಗದಲ್ಲಿನ ಆಂತರಿಕ ಉತ್ತರದಾಯಿತ್ವದ ಬಗ್ಗೆ ಅಧ್ಯಾಯದಲ್ಲಿ ವಿವರಿಸಲಾಗಿದ್ದು, ಕೇಂದ್ರೀಕೃತ ಸಾರ್ವಜನಿಕ ವ್ಯಾಜ್ಯಗಳ ಪರಿಹಾರ ಮತ್ತು ಮೇಲ್ವಿಚಾರಣಾ ವ್ಯವಸ್ಥೆ(ಸಿಪಿಜಿಆರ್‌ಎಎಂಎಸ್) ಮೂಲಕ ದೂರುಗಳನ್ನು ಸ್ವೀಕರಿಸಲಾಗುತ್ತದೆ.

ಈ ವ್ಯವಸ್ಥೆ ಮೂಲಕ, 2017 ಮತ್ತು 2021ರ ಮಧ್ಯೆ 1,600 ದೂರುಗಳನ್ನು ಸಲ್ಲಿಸಲಾಗಿದೆ ಎಂದು ವಿವರಿಸಲಾಗಿದೆ.

'ನ್ಯಾಯಾಂಗದಲ್ಲಿರುವ ಭ್ರಷ್ಟಾಚಾರ ಮತ್ತು ಅಶಿಸ್ತಿನ ನಡವಳಿಕೆಯ ಘಟನೆಗಳು ಈ ವ್ಯವಸ್ಥೆ ಕುರಿತು ಸಾರ್ವಜನಿಕರು ಹೊಂದಿರುವ ನಂಬಿಕೆ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತವೆ' ಎಂದು ಮಾಜಿ ಸಿಜೆಐ ಬಿ.ಆರ್.ಗವಾಯಿ ಅವರು 2025ರ ಜುಲೈನಲ್ಲಿ ಕಾರ್ಯಕ್ರಮವೊಂದರಲ್ಲಿ ಹೇಳಿದ್ದರು. ಅವರ ಈ ಹೇಳಿಕೆಯನ್ನು ಕೂಡ ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿದೆ.

ಸಭೆ ಕರೆದು ಚರ್ಚೆ: ಎನ್‌ಸಿಇಆರ್‌ಟಿ

ಈ ಬೆಳವಣಿಗೆ ಬೆನ್ನಲ್ಲೇ, ಸಂಬಂಧಪಟ್ಟ ಅಧಿಕಾರಿಗಳ ಸಭೆ ಕರೆಯಲಾಗಿದೆ ಎಂದು ಎನ್‌ಸಿಇಆರ್‌ಟಿ ಹೇಳಿದೆ.

'ಈ ಅಧ್ಯಾಯ ಸಿದ್ಧಪಡಿಸುವ ವೇಳೆ, ಶಿಫಾರಸುಗಳನ್ನು ಮಾಡಿರುವ ವಿಷಯತಜ್ಞರು ಹಾಗೂ ಅವುಗಳನ್ನು ಅನುಮೋದಿಸಿರುವ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮರುಪರಿಶೀಲನೆ ನಡೆಸಲಾಗುವುದು' ಎಂದು ಪರಿಷತ್ತು ಹೇಳಿದೆ.

'ಈ ವಿಚಾರವಾಗಿ ಎನ್‌ಸಿಇಆರ್‌ಟಿ ಅಧ್ಯಕ್ಷ ದಿನೇಶ್ ಪ್ರಸಾದ್ ಸಕ್ಲಾನಿ ಅವರು ಕರೆ ಸ್ವೀಕರಿಸಲಿಲ್ಲ ಹಾಗೂ ಸಂದೇಶಗಳಿಗೆ ಪ್ರತಿಕ್ರಿಯೆ ನೀಡಲಿಲ್ಲ' ಎಂದು ಪಿಟಿಐ ವರದಿ ಮಾಡಿದೆ.

'ಈ ವಿಚಾರ ಸದ್ಯ ನ್ಯಾಯಾಲಯದಲ್ಲಿ ಇದೆ. ನ್ಯಾಯಾಂಗ ನಿಂದನೆಯಾಗುವ ಕಾರಣ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ' ಎಂದು ಎನ್‌ಸಿಇಆರ್‌ಟಿಯ ಉನ್ನತ ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಎನ್‌ಸಿಇಆರ್‌ಟಿ ಸ್ವಾಯತ್ತ ಸಂಸ್ಥೆ'

'ಎನ್‌ಸಿಇಆರ್‌ಟಿ ಒಂದು ಸ್ವಾಯತ್ತ ಸಂಸ್ಥೆ. ಜವಾಬ್ದಾರಿಯುತ ಸ್ಥಾನದಲ್ಲಿರುವ ಅದರ ಅಧಿಕಾರಿಗಳು ತಮ್ಮ ವಿವೇಚನೆ ಬಳಸಿಯೇ ಈ ಅಧ್ಯಾಯಗಳನ್ನು ಸೇರ್ಪಡೆ ಮಾಡಿರುತ್ತಾರೆ' ಎಂದು ಕೇಂದ್ರ ಸರ್ಕಾರದ ಮೂಲಗಳು ಹೇಳಿವೆ.

'ಭ್ರಷ್ಟಾಚಾರ ಕುರಿತ ವಿಚಾರವನ್ನು ಪಠ್ಯಪುಸ್ತಕಗಳಲ್ಲಿ ಸೇರ್ಪಡೆ ಮಾಡಬೇಕು ಎಂದಾದಲ್ಲಿ, ಕಾರ್ಯಾಂಗ, ನ್ಯಾಯಾಂಗ ಮತ್ತು ಶಾಸಕಾಂಗಕ್ಕೆ ಸಂಬಂಧಿಸಿದ ಮಾಹಿತಿಯನ್ನೂ ಅದು ಒಳಗೊಂಡಿರಬೇಕಿತ್ತು' ಎಂದೂ ಹೇಳಿವೆ.

'ನ್ಯಾಯಾಂಗದಲ್ಲಿನ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಮಾಹಿತಿಯು ಸಂಸತ್‌ನ ದಾಖಲೆಗಳು ಹಾಗೂ ರಾಷ್ಟ್ರೀಯ ನ್ಯಾಯಾಂಗ ಡೇಟಾ ಗ್ರಿಡ್‌ನಲ್ಲಿ ಲಭ್ಯ ಇದೆ. ಪಠ್ಯಪುಸ್ತಕದಲ್ಲಿ ಈ ಅಧ್ಯಾಯ ಸೇರ್ಪಡೆ ಮಾಡುವ ವೇಳೆ, ಕೇಂದ್ರ ಕಾನೂನು ಸಚಿವಾಲಯದೊಂದಿಗೆ ಸಮಾಲೋಚನೆ ನಡೆಸಿ, ಮಾಹಿತಿಯನ್ನು ದೃಢೀಕರಿಸಿಕೊಂಡಿಲ್ಲ' ಎಂದು ಇವೇ ಮೂಲಗಳು ಹೇಳಿವೆ. 'ನ್ಯಾಯಾಂಗದಲ್ಲಿನ ಭ್ರಷ್ಟಾಚಾರ ಕುರಿತಂತೆ ಮಾಜಿ ಸಿಜೆಐ ಬಿ.ಆರ್.ಗವಾಯಿ ಅವರು ಬೇರೆ ಸಂದರ್ಭದಲ್ಲಿ ಹೇಳಿದ್ದ ಮಾತನ್ನು ಈಗ ಪಠ್ಯದಲ್ಲಿ ಬಳಸಿಕೊಳ್ಳಲಾಗಿದೆ. ಈ ಬಗ್ಗೆ ಗವಾಯಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ.

ಸಾಂವಿಧಾನಿಕ ನೈತಿಕತೆಯೇ ಪ್ರಮುಖ: ನ್ಯಾ. ಭುಯಾನ್

ಹೈದರಾಬಾದ್(ಪಿಟಿಐ): 'ಪ್ರತಿಯೊಬ್ಬ ಪ್ರಜೆ ಸಾಂವಿಧಾನಿಕ ನೈತಿಕತೆ ಪಾಲಿಸಬೇಕು ಎಂದು ಕಾನೂನು ಬಯಸುತ್ತದೆ. ಸಮಾಜದಲ್ಲಿ ಭ್ರಾತೃತ್ವ ಹಾಗೂ ಸಾಮರಸ್ಯ ನೆಲಸುವಂತೆ ಮಾಡುವುದೇ ಸಂವಿಧಾನದ ಉದ್ದೇಶ' ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಉಜ್ಜಲ್ ಭುಯಾನ್ ಬುಧವಾರ ಹೇಳಿದರು.



ಉಜ್ಜಲ್ ಭುಯಾನ್

'ಮನೆಗಳಲ್ಲಿ ಅಥವಾ ಸಮುದಾಯದ ಮಟ್ಟದಲ್ಲಿ ಕಂಡುಬರುವ ಒಳ್ಳೆಯ ನಡತೆ ಕೆಲವೊಮ್ಮೆ ಗೌಣ ಎನಿಸಬಹುದು ಇಲ್ಲವೇ ಅದರ ಬಗ್ಗೆ ಭಿನ್ನಾಭಿಪ್ರಾಯ ಮೂಡಬಹುದು. ಎಲ್ಲ ಸಂದರ್ಭಗಳಲ್ಲಿ ಸಾರ್ವತ್ರಿಕ ನೈತಿಕತೆಗಿಂತ ಸಾಂವಿಧಾನಿಕ ನೈತಿಕತೆಯೇ ಪ್ರಮುಖವಾಗಬೇಕು' ಎಂದು ಅವರು ಪ್ರತಿಪಾದಿಸಿದರು.

ತೆಲಂಗಾಣ ನ್ಯಾಯಮೂರ್ತಿಗಳ ಸಂಘ ಹಾಗೂ ತೆಲಂಗಾಣ ರಾಜ್ಯ ನ್ಯಾಯಾಂಗ ಅಕಾಡೆಮಿ ವತಿಯಿಂದ ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ಕನಿಷ್ಠ ಮಟ್ಟದ ಸಾಂವಿಧಾನಿಕ ನೈತಿಕತೆ ಪಾಲಿಸುವಲ್ಲಿ ನಮ್ಮ ದೇಶ ಇನ್ನೂ ಹಿಂದುಳಿದಿದೆ. ನನ್ನ ಮಗಳ ಸ್ನೇಹಿತೆ ಮುಸ್ಲಿಂ. ಪಿಎಚ್‌.ಡಿ ಅಧ್ಯಯನಕ್ಕಾಗಿ ದೆಹಲಿಗೆ ಬಂದಿದ್ದಾಗ, ಆಕೆಗೆ ಪಿ.ಜಿಯಲ್ಲಿ ವಸತಿ ನಿರಾಕರಿಸಲಾಯಿತು. ಆಕೆಯ ಧಾರ್ಮಿಕ ಅಸ್ಮಿತೆಯೇ ಇದಕ್ಕೆ ಕಾರಣ' ಎಂದು ವಿವರಿಸಿದರು.

'ಮಧ್ಯಾಹ್ನದ ಬಿಸಿಯೂಟವನ್ನು ದಲಿತ ಮಹಿಳೆಯೊಬ್ಬರು ತಯಾರಿಸಿದ ಕಾರಣಕ್ಕೆ ಪಾಲಕರು ಪ್ರತಿಭಟಿಸಿದ ಬಗ್ಗೆ ಮಾಧ್ಯಮಗಳಲ್ಲಿ ವರದಿಗಳನ್ನು ನೋಡಿದೆ. ಇವು ಕೆಲ ಉದಾಹರಣೆಗಳು ಮಾತ್ರ. ನಮ್ಮ ಸಮಾಜದಲ್ಲಿ ಇಂತಹ ದೋಷಗಳು ಎಷ್ಟು ಆಳವಾಗಿ ಬೇರೂರಿವೆ ಹಾಗೂ ಸ್ವಾತಂತ್ರ್ಯ ಸಿಕ್ಕು 75 ವರ್ಷಗಳು ಗತಿಸಿದ ಬಳಿಕವೂ ನಾವು ಕನಿಷ್ಠ ಮಟ್ಟದ ಸಾಂವಿಧಾನಿಕ ನೈತಿಕತೆಯನ್ನು ಮೈಗೂಡಿಸಿಕೊಳ್ಳುವಲ್ಲಿ ವಿಫಲರಾಗಿದ್ದೇವೆ ಎಂಬುದನ್ನು ಇಂತಹ ಘಟನೆಗಳು ತೋರಿಸುತ್ತವೆ' ಎಂದರು.

'ದಿ–ಕೇರಳ ಸ್ಟೋರಿ–2: ತಪ್ಪು ಕಲ್ಪನೆ'

ಕೊಚ್ಚಿ(ಪಿಟಿಐ): 'ದಿ ಕೇರಳ ಸ್ಟೋರಿ–2' ಬಿಡುಗಡೆಗೂ ಮುನ್ನವೇ ವಿರೋಧ ವ್ಯಕ್ತಪಡಿಸುತ್ತಿರುವುದು ಆತುರ ಹಾಗೂ ತಪ್ಪುಕಲ್ಪನೆಯಾಗಿದೆ' ಎಂದು ಇಲ್ಲಿನ ಹೈಕೋರ್ಟ್‌ಗೆ ನಿರ್ಮಾಪಕ ವಿಪುಲ್ ಅಮಿತ್ ಶಾ ತಿಳಿಸಿದ್ದಾರೆ.

ಹೈಕೋರ್ಟ್‌ಗೆ ಮಂಗಳವಾರ ಪ್ರಮಾಣಪತ್ರ ಸಲ್ಲಿಸಿದ್ದು, ಅರ್ಜಿ ಸಲ್ಲಿಸುವ 16 ದಿನಗಳ ಮೊದಲೇ ಪ್ರಮಾಣಪತ್ರ ಸಲ್ಲಿಸಲಾಗಿದೆ. ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬೆಚು ಕುರಿಯನ್, 'ಸಾಮಾನ್ಯವಾಗಿ ಕಲಾತ್ಮಕ ಅಭಿವ್ಯಕ್ತಿಯಲ್ಲಿ ಹಸ್ತಕ್ಷೇಪ ನಡೆಸಲು ನ್ಯಾಯಾಲಯ ಇಷ್ಟಪಡುವುದಿಲ್ಲ. ರಾಜ್ಯದ ಜನರ ಕುರಿತಾಗಿ ಎದ್ದಿರುವ ಕಳಕಳಿಯನ್ನು ತಳ್ಳಿಹಾಕುವಂತಿಲ್ಲ' ಎಂದು ತಿಳಿಸಿದರು.

'ಆರ್ಥಿಕ ಲಾಭ ಪಡೆಯುವ ಉದ್ದೇಶದಿಂದ ಸಿನಿಮಾವು ದುರುದ್ದೇಶಪೂರ್ವಕ ಅಂಶಗಳನ್ನು ಹೊಂದಿದೆ. ಸಿನಿಮಾಕ್ಕೆ ನೀಡಿದ ಪ್ರಮಾಣಪತ್ರ ತಡೆ ನೀಡಬೇಕು' ಎಂದು ಕಣ್ಣವಾಂನ ಶ್ರೀದೇವ್ ನಂಬೂದರಿ ಅರ್ಜಿ ಸಲ್ಲಿಸಿದ್ದರು.

ಕಲಬೆರಕೆ ಹಾಲು: ಸಾವಿನ ಸಂಖ್ಯೆ 6ಕ್ಕೆ

ಪ್ರಜಾವಾಣಿ ವಾರ್ತೆ

ರಾಜಮಹೇಂದ್ರವರಂ: ಆಂಧ್ರ ಪ್ರದೇಶದ ಪೂರ್ವ ಗೋದಾವರಿ ಜಿಲ್ಲೆಯ ರಾಜಮಹೇಂದ್ರವರಂನಲ್ಲಿ ಕಲಬೆರಕೆ ಹಾಲು ಸೇವಿಸಿ ಮತ್ತೆ ಇಬ್ಬರು ಮೃತಪಟ್ಟಿದ್ದು, ಸಾವಿನ ಸಂಖ್ಯೆ ಆರಕ್ಕೆ ಏರಿದೆ.


ಮೂತ್ರಪಿಂಡ ವೈಫಲ್ಯದಿಂದ ಆರು ವರ್ಷದ ಬಾಲಕ ಹಾಗೂ 58 ವರ್ಷದ ಮಹಿಳೆ ಮೃತಪಟ್ಟಿದ್ದು, ಇನ್ನೂ ಏಳು ಜನರ ಆರೋಗ್ಯ ಸ್ಥಿತಿ ಗಂಭೀರವಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಕಲಬೆರಕೆ ಹಾಲಿನ ಅಪಾಯದ ಬಗ್ಗೆ 106 ಕುಟುಂಬಗಳಿಗೆ ಸಲಹೆ ನೀಡಲಾಗಿದೆ. 315 ಜನರಿಂದ ರಕ್ತದ ಮಾದರಿ ಸಂಗ್ರಹಿಸಲಾಗಿದೆ. ಮೂವರು ಮಕ್ಕಳು ಸೇರಿದಂತೆ 15 ಮಂದಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸರ್ಕಾರಿ, ವಿಧಿವಿಜ್ಞಾನ ಹಾಗೂ ಖಾಸಗಿ ಪ್ರಯೋಗಾಲಯಗಳಲ್ಲಿ 10 ಆಹಾರದ ಮಾದರಿ ಪರೀಕ್ಷಿಸಲಾಗುತ್ತಿದ್ದು, 48ರಿಂದ 72 ಗಂಟೆಗಳಲ್ಲಿ ವರದಿ ಬರಲಿದೆ

ಕಮ್ಯುನಿಸ್ಟ್ ನಾಯಕ, ಶತಾಯುಷಿ ಆರ್. ನಲ್ಲಕಣ್ಣ್ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಚೆನ್ನೈ: ಸ್ವಾತಂತ್ರ್ಯ ಹೋರಾಟಗಾರ, ಕಮ್ಯುನಿಸ್ಟ್ ಚಳವಳಿಯ ನೇತಾರ, ಜನನಾಯಕ, ಶತಾಯುಷಿ ಆರ್. ನಲ್ಲಕಣ್ಣ್ (101) ಬುಧವಾರ ಮಧ್ಯಾಹ್ನ ನಿಧನರಾದರು.



ನಲ್ಲಕಣ್ಣ್

ಸರಳತೆಯ ಪ್ರತೀಕವಾಗಿದ್ದ ಅವರು, ಎಂಟು ದಶಕಗಳಿಗೂ ಹೆಚ್ಚು ಕಾಲ ಜನಪರ ಹೋರಾಟದಲ್ಲಿ ಸಕ್ರಿಯರಾಗಿದ್ದರು. ಆರ್‌ಎನ್‌ಕೆ ಎಂದೇ ಕರೆಯಲಾಗುತ್ತಿದ್ದ ನಲ್ಲಕಣ್ಣ್ ಅವರು ತಮಗೆ ಸಂದ ಪ್ರಶಸ್ತಿಗಳ ಜತೆ ನೀಡಿದ್ದ ಹಣವನ್ನು ಸಿಪಿಐಗೆ ಹಾಗೂ ರೈತ ಸಂಘಟನೆಗಳಿಗೆ ನೀಡಿದ್ದರು.

ನಲ್ಲಕಣ್ಣ್ ಅವರಿಗೆ 80 ವರ್ಷ ತುಂಬಿದಾಗ, ಸಿಪಿಐ ₹1 ಕೋಟಿ ದೇಣಿಗೆ ಸಂಗ್ರಹಿಸಿ ನೀಡಿತು. ಆ ಹಣವನ್ನು ಪಕ್ಷಕ್ಕೆ ವಾಪಸ್ ನೀಡಿದ್ದರು. ಡಿಎಂಕೆ ನೇತೃತ್ವದ ಸರ್ಕಾರವು 2022ರಲ್ಲಿ ನೀಡಿದ್ದ ತಗೈಸಲ್ ತಮಿಳರ್ ಪ್ರಶಸ್ತಿ ಜೊತೆಗಿನ ₹10 ಲಕ್ಷ ನಗದನ್ನು ಸಹ ಮರಳಿಸಿದ್ದರು.

ನಲ್ಲಕಣ್ಣ್ ಅವರ ಆಶಯದಂತೆ ರಾಜೀವ್ ಗಾಂಧಿ ಸರ್ಕಾರಿ ಜನರಲ್ ಆಸ್ಪತ್ರೆಗೆ ಗುರುವಾರ ದೇಹದಾನ ಮಾಡಲಾಗುವುದು. ತೂತುಕುಡಿ ಜಿಲ್ಲೆಯ ಶ್ರೀವೈಕುಂಡಂನಲ್ಲಿ 1925ರಲ್ಲಿ ಜನಿಸಿದ್ದ ನಲ್ಲಕಣ್ಣ್, ವಿದ್ಯಾರ್ಥಿ ಇದ್ದಾಗಲೇ ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಂಡಿದ್ದರು. ತಮ್ಮ 18ನೇ ವಯಸ್ಸಿನಲ್ಲೇ ಸಿಪಿಐಗೆ ಸೇರಿದ್ದರು. 1964ರ ಚೀನಾ ಯುದ್ಧದ ನಂತರ ದೇಶದಲ್ಲಿ ಕಮ್ಯುನಿಸ್ಟ್ ಚಳವಳಿ ವಿಭಜನೆ ಆದಾಗಲೂ ಸಿಪಿಐನೊಂದಿಗೆ ಉಳಿದಿದ್ದರು.

ದೇಶಕ್ಕೆ ಸ್ವಾತಂತ್ರ್ಯ ದೊರೆತ ಬಳಿಕ ಕಮ್ಯುನಿಸ್ಟ್ ಪಕ್ಷಗಳ ಮೇಲಿನ ನಿಷೇಧದ ನಂತರ, ಆಗಿನ ಜವಾಹರಲಾಲ್ ನೆಹರೂ ಸರ್ಕಾರವನ್ನು ಉರುಳಿಸಲು ಆಪ್ತರೊಂದಿಗೆ ಸಂಚು ರೂಪಿಸಿದ ಆರೋಪದ ಮೇಲೆ 1949ರಲ್ಲಿ ಬಂಧನಕ್ಕೊಳಗಾದ ನಲ್ಲಕಣ್ಣ್ ಅವರು ಏಳು ವರ್ಷ ಸೆರೆವಾಸ ಅನುಭವಿಸಿದ್ದರು. ಜೈಲು ಅಧಿಕಾರಿಗಳಿಂದ ಚಿತ್ರಹಿಂಸೆಯನ್ನು ಅನುಭವಿಸಿದ್ದಾಗಿಯೂ ಹೇಳಿಕೊಂಡಿದ್ದರು.

ದ್ರಾವಿಡ ಚಳವಳಿ ನಾಯಕರೊಂದಿಗೆ, ಅದರಲ್ಲೂ ವಿಶೇಷವಾಗಿ ಎಂ. ಕರುಣಾನಿಧಿ ಜೊತೆ ನಂಟು ಹೊಂದಿದ್ದ ನಲ್ಲಕಣ್ಣ್ ಅವರು 1999ರ ಲೋಕಸಭಾ ಚುನಾವಣೆಗೆ ಕೊಯಮತ್ತೂರು ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಅವರು ಸ್ಪರ್ಧಿಸಿದ್ದು ಇದೊಂದೇ ಚುನಾವಣೆ. ಈ ಚುನಾವಣೆಯಲ್ಲಿ ಈಗಿನ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಎದುರು ಪರಾಭವಗೊಂಡಿದ್ದರು.

ನಿರ್ದಿಷ್ಟ ಸಮುದಾಯದ ಗುರಿ ಸಲ್ಲ: 'ಸುಪ್ರೀಂ'

ನವದೆಹಲಿ (ಪಿಟಿಐ): ಅತ್ಯುನ್ನತ ಸಾಂವಿಧಾನಿಕ ಹುದ್ದೆಯನ್ನು ಹೊಂದಿರುವವರು ನಿರ್ದಿಷ್ಟ ಸಮುದಾಯವನ್ನು ಧರ್ಮ, ಭಾಷೆ, ಜಾತಿ ಅಥವಾ ಪ್ರದೇಶದ ಆಧಾರದಲ್ಲಿ ಗುರಿ ಮಾಡಬಾರದು. ಸಾಮಾಜಿಕ ಏಕತೆ ಮತ್ತು ಸಾಮರಸ್ಯಕ್ಕೆ ಭ್ರಾತೃತ್ವ ಅತ್ಯಂತ ಮುಖ್ಯ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿತು.

ಕ್ರೈಂ ಥ್ರಿಲ್ಲರ್ ಕಥಾಹಂದರವಿರುವ 'ಘೂಸ್‌ಖೋರ್ ಪಂಡತ್' ಸಿನಿಮಾವನ್ನು ನೆಟ್‌ಫ್ಲಿಕ್ಸ್‌ನಲ್ಲಿ ಬಿಡುಗಡೆ ಮಾಡುವುದನ್ನು ಪ್ರಶ್ನಿಸಿ ಸಲ್ಲಿಸಿದ್ದ ಪ್ರತ್ಯೇಕ ಅರ್ಜಿಯನ್ನು ನ್ಯಾಯಮೂರ್ತಿ ಉಜ್ಜಲ್ ಭುಯಾನ್ ಅವರು ವಿಚಾರಣೆ ನಡೆಸಿದರು. ಈ ಸಂದರ್ಭದಲ್ಲಿ ಅವರು ಮೇಲಿನಂತೆ ಪ್ರತಿಪಾದಿಸಿದರು.

ಸರ್ಕಾರ ಮತ್ತು ಇತರ ಸಂಘಸಂಸ್ಥೆಗಳೂ ಸೇರಿ ಯಾರೊಬ್ಬರೂ ಭಾಷಣ, ವ್ಯಂಗ್ಯಚಿತ್ರ ಅಥವಾ ದೃಶ್ಯ ಕಲೆಯ ಮೂಲಕ ಯಾವುದೇ ಸಮುದಾಯವನ್ನು ಅವಹೇಳನ ಮಾಡಬಾರದು. ಇಂಥ ವರ್ತನೆ ಸಂವಿಧಾನಾತ್ಮಕವಾಗಿ ಸ್ವೀಕಾರಾರ್ಹವಲ್ಲ ಎಂದು ಹೇಳಿದರು.

ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮಾ ಅವರ 'ಮಿಯಾ' ಹೇಳಿಕೆ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿದ್ದ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದ ಬೆನ್ನಲ್ಲೇ, ನ್ಯಾಯಮೂರ್ತಿ ಉಜ್ಜಲ್ ಭುಯಾನ್ ಅವರು ಈ ರೀತಿ ಪ್ರತಿಪಾದಿಸಿದರು.

ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ಭುಯಾನ್ ಅವರು ಇದ್ದ ಪೀಠ, ಫೆ.19ರಂದು ನಿರ್ದೇಶಕ ನೀರಜ್ ಪಾಂಡೆ ಅವರ ಹೇಳಿಕೆ ದಾಖಲಿಸಿಕೊಂಡು ಸಿನಿಮಾ ಬಿಡುಗಡೆಗೆ ತಡೆ ಕೋರಿದ್ದ ಅರ್ಜಿಯನ್ನು ಇತ್ಯರ್ಥಗೊಳಿಸಿದೆ.

'ಯಾದವ್ ಜಿ ಕೀ ಲವ್ ಸ್ಟೋರಿ' ವಿರುದ್ಧದ ಅರ್ಜಿ ತಿರಸ್ಕೃತ

'ಯಾದವ್ ಜಿ ಕೀ ಲವ್ ಸ್ಟೋರಿ' ಸಿನಿಮಾವನ್ನು ನಿಷೇಧಿಸುವಂತೆ ಅಥವಾ ಹೆಸರು ಬದಲಾಯಿಸುವಂತೆ ನಿರ್ದೇಶನ ನೀಡಲು ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಸಿನಿಮಾದ ಹೆಸರು ಯಾದವ್ ಸಮುದಾಯವನ್ನು ಕೆಟ್ಟದಾಗಿ ಬಿಂಬಿಸುತ್ತಿಲ್ಲ ಎಂದು ನ್ಯಾಯಾಲಯ ಹೇಳಿದೆ.

ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ಉಜ್ಜಲ್ ಭುಯಾನ್ ಅವರನ್ನು ಒಳಗೊಂಡ ನ್ಯಾಯಪೀಠವು ವಿಶ್ವ ಯಾದವ ಪರಿಷತ್ ಮುಖ್ಯಸ್ಥರು ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿದೆ.

'ಎಸ್‌ಐಆರ್: ತೇರ್ಗಡೆ ಪ್ರಮಾಣಪತ್ರ ಪರಿಗಣಿಸಿ'

ನವದೆಹಲಿ (ಪಿಟಿಐ): 'ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ವೇಳೆ ಗುರುತಿನ ಚೀಟಿಯಾಗಿ 10ನೇ ತರಗತಿ ಪರೀಕ್ಷೆಯ ಪ್ರವೇಶ ಪತ್ರ ಹಾಗೂ ತೇರ್ಗಡೆ ಪ್ರಮಾಣಪತ್ರವನ್ನು ಪೂರಕ ದಾಖಲೆಯಾಗಿ ಸಲ್ಲಿಸಬಹುದು' ಎಂದು ಸುಪ್ರೀಂಕೋರ್ಟ್ ತಿಳಿಸಿದೆ.

ಈ ವಿಚಾರದ ಕುರಿತಂತೆ ಹಿರಿಯ ವಕೀಲ ಡಿ.ಎಸ್. ನಾಯ್ಡು ಅವರು ಪ್ರಸ್ತಾಪಿಸುತ್ತಿದ್ದಂತಯೇ, ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಹಾಗೂ ವಿಪುಲ್ ಪಂಚೋಲಿ ನೇತೃತ್ವದ ನ್ಯಾಯಪೀಠವು ಈ ಆದೇಶ ಹೊರಡಿಸಿದೆ.

ಪರೀಕ್ಷಾ ಪ್ರವೇಶ ಪತ್ರವನ್ನು ಸ್ವತಂತ್ರ ಗುರುತಿನ ಚೀಟಿಯಾಗಿ ಮಾನ್ಯ ಮಾಡಲು ಅವಕಾಶ ನೀಡಲಾಗುತ್ತದೆಯೇ ಎಂಬುದರ ಕುರಿತು ವಕೀಲರು ತಮ್ಮ ಕಳವಳ ವ್ಯಕ್ತಪಡಿಸಿದರು. ಇದಕ್ಕೆ ಉತ್ತರಿಸಿದ ನ್ಯಾಯಪೀಠ, ಪ್ರವೇಶ ಪತ್ರವನ್ನು ಪೂರಕ ದಾಖಲೆಯಾಗಿ ಪರಿಗಣಿಸಬೇಕು ಎಂದು ಈಗಾಗಲೇ ನಿರ್ದೇಶನ ನೀಡಲಾಗಿದೆ ಎಂದು ಸ್ಪಷ್ಟಪಡಿಸಿತು.

ಅನಿಲ್ ಅಂಬಾನಿ ನಿವಾಸ ಜಪ್ತಿ ಮಾಡಿದ ಇ.ಡಿ

ನವದೆಹಲಿ (ಪಿಟಿಐ): ರಿಲಯನ್ಸ್ ಸಮೂಹದ ಮುಖ್ಯಸ್ಥ ಅನಿಲ್ ಅಂಬಾನಿ ಅವರ ಒಡೆತನದ ₹3,716 ಕೋಟಿ ಮೌಲ್ಯದ ಐಷಾರಾಮಿ ನಿವಾಸವನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಜಪ್ತಿ ಮಾಡಿದ್ದಾರೆ ಎಂದು ಮೂಲಗಳು ಬುಧವಾರ ತಿಳಿಸಿವೆ.

ಅನಿಲ್ ಅಂಬಾನಿ ಅವರ ಸಮೂಹ ಸಂಸ್ಥೆಗಳ ಪೈಕಿ ಒಂದಾಗಿರುವ ರಿಲಯನ್ಸ್ ಕಮ್ಯುನಿಕೇಷನ್ಸ್ (ಆರ್‌ಕಾಂ) ವಿರುದ್ಧದ ಬ್ಯಾಂಕ್ ಸಾಲದ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹಣ ಅಕ್ರಮ ವರ್ಗಾವಣೆ (ತಡೆ) ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಇ.ಡಿ ಈ ಕ್ರಮ ಕೈಗೊಂಡಿದೆ.

ಮುಂಬೈನ ಪಲಿ ಹಿಲ್ ಪ್ರದೇಶದಲ್ಲಿರುವ 17 ಅಂತಸ್ತಿನ ನಿವಾಸವನ್ನು ಜಪ್ತಿ ಮಾಡಲಾಗಿದೆ ಎಂದೂ ತಿಳಿದುಬಂದಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈವರೆಗೆ ಜಪ್ತಿ ಮಾಡಲಾದ ಆಸ್ತಿಯ ಮೌಲ್ಯ ₹15,700 ಕೋಟಿಗೆ ತಲುಪಿದೆ ಎಂದೂ ಹೇಳಲಾಗಿದೆ.

ಅಂತರರಾಜ್ಯ ದಂಧೆ ಬಯಲು; ಮಹಾರಾಷ್ಟ್ರದಲ್ಲಿ ನಾಲ್ವರ ಬಂಧನ

ಅಂಡಾಣು ಮಾರಾಟ; ಬೆಂಗಳೂರಿಗೂ ನಂಟು

ಠಾಣೆ (ಪಿಟಿಐ): ಮಹಿಳೆಯರಿಗೆ ಹಣದ ಆಮಿಷವೊಡ್ಡಿ ಅಂಡಾಣು ದಂಧೆ ನಡೆಸುತ್ತಿದ್ದ ಪ್ರಕರಣವನ್ನು ಮಹಾರಾಷ್ಟ್ರ ಪೊಲೀಸರು ಭೇದಿಸಿದ್ದು, ತನಿಖೆಯಲ್ಲಿ ಬೆಂಗಳೂರು, ತೆಲಂಗಾಣದೊಂದಿಗೆ ನಂಟು ಹೊಂದಿರುವುದನ್ನು ಪತ್ತೆ ಮಾಡಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಮಹಿಳೆಯರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಂಡಾಣು ಮಾರಾಟ ದಂಧೆಯಲ್ಲಿ 40ಕ್ಕೂ ಅಧಿಕ ಮಹಿಳೆಯರನ್ನು ಶೋಷಣೆಗೆ ಒಳಪಡಿಸಲಾಗಿದೆ ಎಂದು ತಿಳಿಸಿದ್ದಾರೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ಕನೇ ಆರೋಪಿ ಸೋನಲ್ ಗರೇವಾಲ್ ಅವರನ್ನು ಸೋಮವಾರ ರಾತ್ರಿ ಬಂಧಿಸಲಾಗಿದೆ' ಎಂದು ಡಿಸಿಪಿ (ವಲಯ-4) ಸಚಿನ್ ಗೋರೆ ಮಾಹಿತಿ ನೀಡಿದ್ದಾರೆ.

'ಯಾವುದೇ ವೈದ್ಯಕೀಯ ಪದವಿ ಪಡೆಯದಿದ್ದರೂ ಕೂಡ ಸೋನಲ್ ಅಕ್ರಮವಾಗಿ ಸೋನೋಗ್ರಾಫಿ (ಹೊಟ್ಟೆಯ ಸ್ಕ್ಯಾನಿಂಗ್)ಗೆ ಸಹಾಯ ಮಾಡುತ್ತಿದ್ದಳು. ಅಂಡೋತ್ಪತ್ತಿ ಉತ್ತೇಜಿಸುವ ಉಪಕರಣಗಳನ್ನು ಮನೆಯಲ್ಲಿ ಸಂಗ್ರಹಿಸಿಟ್ಟಿದ್ದಳು. ಪಂಚನಾಮೆ ನಡೆಸಿ, ಮೂರು ಸ್ಥಳಗಳಿಂದ ₹9.50 ಲಕ್ಷದಿಂದ ₹10 ಲಕ್ಷ ಮೌಲ್ಯದ ಇಂಜೆಕ್ಷನ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಈ ಕೃತ್ಯದಲ್ಲಿ ಭಾಗಿಯಾದ ಮತ್ತಷ್ಟು ವ್ಯಕ್ತಿಗಳನ್ನು ಹಾಗೂ ಕೇಂದ್ರಗಳನ್ನು ಪತ್ತೆಹಚ್ಚಲು ನಾಲ್ಕು ತಂಡಗಳನ್ನು ರಚಿಸಲಾಗಿದೆ' ಎಂದು ತಿಳಿಸಿದ್ದಾರೆ.

ಪ್ರಕರಣ ಬೆಳಕಿಗೆ ಬಂದಿದ್ದು ಹೇಗೆ..?

ಅಂಡಾಣು ಮಾರಾಟ ಮಾಡಿದರೂ ಕೂಡ ನೀಡಿದ ವಾಗ್ದಾನದಂತೆ ಹಣ ನೀಡಿಲ್ಲ ಎಂದು ಮಹಿಳೆಯೊಬ್ಬರು ನೀಡಿದ ದೂರಿನ ಬಳಿಕ ಪ್ರಕರಣ ಬೆಳಕಿಗೆ ಬಂದಿದೆ. ಪ್ರಮುಖ ಸೂತ್ರಧಾರಿ ಸುಲಕ್ಷಣ ಗಡೇಕರ್ (44) ಅವರ ಮನೆ ಮೇಲೆ ಪೊಲೀಸರು ದಾಳಿ ನಡೆಸಿದ ವೇಳೆ ಹಾರ್ಮೋನಲ್ ಇಂಜೆಕ್ಷನ್‌ಗಳು ಪತ್ತೆಯಾಗಿವೆ. ಇದಾದ ಬಳಿಕ ಅಶ್ವಿನಿ ಛಬುಸ್ಕವಾರ್ (29) ಮಂಜುಷಾ ವಾಖಂಡೆ (46) ಅವರನ್ನು ಬಂಧಿಸಲಾಗಿದೆ.

ಪ್ರಕರಣವು ಅಂತರ ರಾಜ್ಯಗಳ ನಡುವೆ ಬೆಸೆದಿದೆ ಎಂದು ತನಿಖಾಧಿಕಾರಿಗಳು ಶಂಕೆ ವ್ಯಕ್ತಪಡಿಸಿದ್ದಾರೆ.

ಬಂಧಿತರ ಮೊಬೈಲ್‌ನಿಂದ ಸಂಗ್ರಹಿಸಿದ ದತ್ತಾಂಶಗಳ ಪ್ರಕಾರ, ಅಂಡಾಣು ನೀಡಲು ಮುಂದೆ ಬರುವ ಮಹಿಳೆಯರಿಗೆ ₹25 ಸಾವಿರದಿಂದ ₹30 ಸಾವಿರ ನೀಡಲಾಗುವುದು ಎಂದು ಆಮಿಷ ಒಡ್ಡಲಾಗಿತ್ತು. ಗಡೇಕರ್ ನಿವಾಸದಲ್ಲಿ ಹಾರ್ಮೋನಲ್ ಇಂಜೆಕ್ಷನ್ ನೀಡಿದ ಬಳಿಕ ಅವರನ್ನು ಬೆಂಗಳೂರು, ತೆಲಂಗಾಣ, ನಾಗ್ಪುರ, ಪುಣೆ ಹಾಗೂ ನಾಸಿಕ್‌ಗೆ ಕರೆದೊಯ್ದು ಅಂಡಾಣು ಪಡೆಯಲಾಗುತ್ತಿತ್ತು.



> **ವಿಸ್ತೃತ ತನಿಖೆಗೆ ಸೂಚನೆ ನೀಡಲಾಗಿದ್ದು, ಅಂಡಾಣುವನ್ನು ವಾಣಿಜ್ಯ ಉದ್ದೇಶದಿಂದ ಮಾರಾಟ ಮಾಡಿದ್ದರೆ, ವೈದ್ಯರು, ಏಜೆಂಟ್‌ಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು**
> **ಪ್ರಕಾಶ್ ಅಬಿಟ್ಕರ್,**
> ಆರೋಗ್ಯ ಸಚಿವ, ಮಹಾರಾಷ್ಟ್ರ

ಆಘಾತಕಾರಿ ಅಂಶ ಬಯಲು

'ಸಾಮಾನ್ಯವಾಗಿ ಆರೋಗ್ಯವಂತ ಮಹಿಳೆಯರಿಂದ ಜೀವಿತಾವಧಿಯಲ್ಲಿ ಒಂದು ಸಲ ಮಾತ್ರ ಅಂಡಾಣು ತೆಗೆಯಲು ಸಂತಾನೋತ್ಪತ್ತಿ ತಂತ್ರಜ್ಞಾನ (ನಿಯಂತ್ರಣ) ಕಾಯ್ದೆ -2021ರ ಅಡಿಯಲ್ಲಿ ಅವಕಾಶವಿದೆ. ಆದರೆ, ಆರೋಪಿಗಳು ಮಹಿಳೆಯರಿಂದ 33 ಸಲ ಅಂಡಾಣು ತೆಗೆದಿದ್ದಾರೆ. ಇದೇ ರೀತಿ 40ಕ್ಕೂ ಅಧಿಕ ಮಹಿಳೆಯರನ್ನು ಶೋಷಣೆಗೆ ಒಳಪಡಿಸಿದ್ದಾರೆ ಎಂದು ಪ್ರಾಥಮಿಕ ತನಿಖೆಯಲ್ಲಿ ಕಂಡುಬಂದಿದೆ.

ವೈದ್ಯರ ಸಲಹಾ ಚೀಟಿ ಇಲ್ಲದೇ, ಸೋನೋಗ್ರಾಫಿ ನಡೆಸಿದ ಉಲ್ಲಾಸನಗರ ಹಾಗೂ ಠಾಣೆಯ ಎರಡು ಆಸ್ಪತ್ರೆಗಳ ಮೇಲೆ ನಿಗಾ ವಹಿಸಿದ್ದು, ಆಸ್ಪತ್ರೆಯ ವೈದ್ಯಕೀಯ ದಾಖಲೆಗಳನ್ನು ಸಂಪೂರ್ಣ ಪರಿಶೀಲನೆಗೆ ಒಳಪಡಿಸಲಾಗಿದೆ.

ಸೂರ್ಯ ಪಡೆಗೆ 'ಮಾಡು ಇಲ್ಲವೇ ಮಡಿ' ಪಂದ್ಯ



ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅಭ್ಯಾಸ

ಚೆನ್ನೈ (ಪಿಟಿಐ): ಸತತ ಎರಡನೇ ಟಿ20 ವಿಶ್ವಕಪ್ ಮೇಲೆ ಕಣ್ಣಿಟ್ಟಿರುವ ಭಾರತ ತಂಡವು ಈಗ ತೀವ್ರ ಒತ್ತಡದಲ್ಲಿದೆ. ಸೂಪರ್ ಎಂಟರ ಹಂತದ ಮೊದಲ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಎದುರು ಸೋತಿದ್ದು ಮತ್ತು ಅಗ್ರಕ್ರಮಾಂಕದ ಬ್ಯಾಟರ್‌ಗಳ ಅಸ್ಥಿರತೆ ತಂಡದ ಚಿಂತೆಗೆ ಕಾರಣವಾಗಿವೆ.

ಸೂಪರ್ ಎಂಟರ ಹಂತದಲ್ಲಿ ಇನ್ನುಳಿದ ಎರಡೂ ಪಂದ್ಯಗಳನ್ನು ಗೆದ್ದರೆ ಸೆಮಿಫೈನಲ್ ಪ್ರವೇಶಿಸುವ ಅವಕಾಶವು ಆತಿಥೇಯ ತಂಡಕ್ಕೆ ಜೀವಂತವಾಗುಳಿಯಲಿದೆ. ಎರಡರಲ್ಲಿ ಒಂದು ಸೋತರೂ ನಿರ್ಗಮನ ಖಚಿತ. ಆದ್ದರಿಂದ ಗುರುವಾರ ಇಲ್ಲಿ ಜಿಂಬಾಬ್ವೆ ವಿರುದ್ಧ ಮತ್ತು ಮಾರ್ಚ್ 1ರಂದು ವೆಸ್ಟ್ ಇಂಡೀಸ್ ವಿರುದ್ಧ ನಿಗದಿಯಾಗಿರುವ ಪಂದ್ಯಗಳಲ್ಲಿ ಗೆಲ್ಲಬೇಕಿದೆ.

ಜಿಂಬಾಬ್ವೆ ತಂಡವನ್ನು ಹಗುರವಾಗಿ ತೆಗೆದುಕೊಳ್ಳುವಂತಿಲ್ಲ. ಡಿ ಗುಂಪಿನಲ್ಲಿ ತಂಡವು ಆಸ್ಟ್ರೇಲಿಯಾದಂಥ ಬಲಿಷ್ಠ ತಂಡದ ವಿರುದ್ಧ ಜಯಿಸಿತ್ತು. ಆದ್ದರಿಂದ ಭಾರತದ ಹಾದಿ ಸುಲಭವಲ್ಲ. ಅದಕ್ಕಾಗಿ ಬ್ಯಾಟಿಂಗ್ ವಿಭಾಗದಲ್ಲಿ ಸುಧಾರಣೆಗಳು ಅತ್ಯಗತ್ಯ. ದಕ್ಷಿಣ ಆಫ್ರಿಕಾ ಎದುರು 76 ರನ್‌ಗಳ ಅಂತರದಿಂದ ಸೋತಿದ್ದು ಬ್ಯಾಟಿಂಗ್ ಲೋಪಗಳಿಂದಾಗಿಯೇ ಎಂಬುದು ಸ್ಪಷ್ಟ.

ಆರಂಭಿಕ ಜೋಡಿ ಇಶಾನ್ ಕಿಶನ್ ಮತ್ತು ಅಭಿಷೇಕ್ ಶರ್ಮಾ ದೊಡ್ಡ ಇನಿಂಗ್ಸ್ ಆಡಲಿಲ್ಲ. ಮೂರನೇ ಕ್ರಮಾಂಕದ ಆಟಗಾರ ತಿಲಕ್ ವರ್ಮಾ ಅವರು ಈ ಹಂತದಲ್ಲಾದರೂ ಸಾಮರ್ಥ್ಯ ತೋರಬೇಕಿದೆ. ಇಲ್ಲದಿದ್ದರೆ ಇಶಾನ್ ಅವರು ಗುಂಪು ಹಂತದಲ್ಲಿ ಆಡಿದ ಅಮೋಘ ಇನಿಂಗ್ಸ್‌ಗಳು ವ್ಯರ್ಥವಾಗಲಿವೆ.

ನಾಯಕ ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ ಮತ್ತು ಶಿವಂ ದುಬೆ ಅವರು ಮಧ್ಯಮ ಕ್ರಮಾಂಕದಲ್ಲಿ ಮುಕ್ತವಾಗಿ ಬ್ಯಾಟ್ ಬೀಸಲು ಅಗ್ರಬ್ಯಾಟರ್‌ಗಳಿಂದ ಉತ್ತಮ ಆರಂಭ ಸಿಗಬೇಕಿದೆ. ಆಗ ದೊಡ್ಡ ಮೊತ್ತ ಗಳಿಸಲು ಅಥವಾ ಚೇಸ್ ಮಾಡಲು ಹೆಚ್ಚು ಅನುಕೂಲ. ಕೌಟುಂಬಿಕ ತುರ್ತು ಕಾರಣಗಳಿಂದಾಗಿ ರಿಂಕು ಸಿಂಗ್ ಅವರು ಈ ಪಂದ್ಯದಲ್ಲಿ ಆಡುತ್ತಿಲ್ಲ.

ಈಗ ಮತ್ತೆ ಕೇರಳದ ಅನುಭವಿ ಬ್ಯಾಟರ್ ಸಂಜು ಸ್ಯಾಮ್ಸನ್ ಅವರಿಗೆ ಅವಕಾಶ ನೀಡುವತ್ತ ತಂಡದ 'ಚಿಂತಕರ ಚಾವಡಿ'ಯಲ್ಲಿ ಚರ್ಚೆ ನಡೆಯುತ್ತಿದೆ. ಈ ವಿಶ್ವಕಪ್‌ಗೆ ಮೊದಲು ತಮಗೆ ಸಿಕ್ಕ ಅವಕಾಶಗಳಲ್ಲಿ ಸಂಜು ನಿರೀಕ್ಷೆ ಹುಸಿಗೊಳಿಸಿದ್ದರು. ಬದಲಾದ ಸನ್ನಿವೇಶದಲ್ಲಿ ಅವರಿಗೆ ಇನ್ನೊಂದು ಅವಕಾಶ ನೀಡುವ ಸಾಧ್ಯತೆ ಇದೆ.

ಬೌಲರ್‌ಗಳು ಜೊತೆಯಾಟಗಳಿಗೆ ತಡೆಯೊಡ್ಡುವತ್ತ ಯಶಸ್ಸು ಸಾಧಿಸಬೇಕು. ಜಸ್‌ಪ್ರೀತ್ ಬೂಮ್ರಾ, ಅರ್ಷದೀಪ್ ಸಿಂಗ್, ಸ್ಪಿನ್ನರ್ ಕುಲದೀಪ್ ಯಾದವ್, ವರುಣ್ ಚಕ್ರವರ್ತಿ, ಹಾರ್ದಿಕ್ ಹಾಗೂ ಶಿವಂ ಅವರು ಉತ್ತಮ ಲಯದಲ್ಲಿದ್ದಾರೆ. ಅಲ್ಲದೇ ಈ ಪಂದ್ಯದಲ್ಲಿ ವಾಷಿಂಗ್ಟನ್ ಸುಂದರ್ ಅವರ ಬದಲು ಅಕ್ಷರ್ ಪಟೇಲ್ ಸ್ಥಾನ ಪಡೆಯುವ ನಿರೀಕ್ಷೆ ಇದೆ.

ಉಪನಾಯಕ ಅಕ್ಷರ್ ಅವರನ್ನು ಕಳೆದ ಪಂದ್ಯದಲ್ಲಿ ಆಡಿಸಿರಲಿಲ್ಲ. ಚೆಪಾಕ್‌ನಲ್ಲಿ ಅವರು ಕಣಕ್ಕಿಳಿಯುವ ಸಾಧ್ಯತೆ ಇದೆ.

ಜಿಂಬಾಬ್ವೆಯ ಪ್ರಮುಖ ಬ್ಯಾಟರ್‌ಗಳಾದ ಬ್ರಯನ್ ಬೆನೆಟ್, ತಡಿವಾನಶೇ ಮರುಮನಿ, ರಿಯಾನ್ ಬರ್ಲ್ ಮತ್ತು ಆಲ್‌ರೌಂಡರ್ ಸಿಕಂದರ್ ರಝಾ ಅವರನ್ನು ನಿಯಂತ್ರಿಸುವುದು ಆತಿಥೇಯ ಬೌಲರ್‌ಗಳಿಗೆ ಪ್ರಮುಖ ಸವಾಲಾಗಲಿದೆ. ಜಿಂಬಾಬ್ವೆ ಬೌಲಿಂಗ್ ಪಡೆಯಲ್ಲಿರುವ ಬ್ಲೆಸಿಂಗ್ ಮುಝುರಾಬಾನಿ, ಬ್ರಾಡ್ ಇವಾನ್ಸ್ ಹಾಗೂ ಡಿಯಾನ್ ಮೈಯರ್ಸ್ ಅವರು ಪರಿಣಾಮಕಾರಿ ದಾಳಿ ಮಾಡುವ ಸಾಮರ್ಥ್ಯ ಹೊಂದಿದ್ದಾರೆ.

ಇಂದಿನ ಪಂದ್ಯ

ವೆಸ್ಟ್ ಇಂಡೀಸ್ V/s ದಕ್ಷಿಣ ಆಫ್ರಿಕಾ
ತಾಣ: ಅಹಮದಾಬಾದ್, ಆರಂಭ: ಮಧ್ಯಾಹ್ನ 3

ಭಾರತ V/s ಜಿಂಬಾಬ್ವೆ
ತಾಣ: ಚೆನ್ನೈ, ಆರಂಭ: ರಾತ್ರಿ 7

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ತಂಡಗಳು: ಭಾರತ: ಸೂರ್ಯಕುಮಾರ್ ಯಾದವ್ (ನಾಯಕ), ಅಭಿಷೇಕ್ ಶರ್ಮಾ, ತಿಲಕ್ ವರ್ಮಾ, ಸಂಜು ಸ್ಯಾಮ್ಸನ್, ಶಿವಂ ದುಬೆ, ಇಶಾನ್ ಕಿಶನ್, ಹಾರ್ದಿಕ್ ಪಾಂಡ್ಯ, ಅರ್ಷದೀಪ್ ಸಿಂಗ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್, ವರುಣ್ ಚಕ್ರವರ್ತಿ, ಕುಲದೀಪ್ ಯಾದವ್, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್.

ಜಿಂಬಾಬ್ವೆ: ಸಿಕಂದರ್ ರಝಾ (ನಾಯಕ), ಬ್ರಯನ್ ಬೆನೆಟ್, ರಿಯಾನ್ ಬರ್ಲ್, ಗ್ರೆಮ್ ಕ್ರಿಮರ್, ಬ್ರಾಡ್ಲಿ ಇವಾನ್ಸ್, ಕ್ಲೈವ್ ಮದಾಂದೆ, ಟಿನೊಟೆಂದಾ ಮಪೊಸಾ, ಟ್ಯಾಡಿವನಾಶೆ ಮರುಮಣಿ, ವೆಲ್ಲಿಂಗ್ಟನ್ ಮಸಕಜಾ, ಟೋನಿ ಮುನಿಯೊಂಗಾ, ತಶಿಂಗಾ ಮುಸೆಕಿವಾ, ಬ್ಲೆಸಿಂಗ್ ಮುಝುರಬಾನಿ, ಡಿಯಾನ್ ಮೈಯರ್ಸ್, ರಿಚರ್ಡ್ ಎನ್‌ಗರಾವಾ, ಬೆನ್ ಕರನ್.



ಜಿಂಬಾಬ್ವೆ ತಂಡದ ನಾಯಕ ಸಿಕಂದರ್ ರಝಾ

ರಚಿನ್ ಆಲ್‌ರೌಂಡ್ ಆಟ • ಮಿಚೆಲ್ ಸ್ಯಾಂಟ್ನರ್ ಮಿಂಚು

ಸೆಮಿಯತ್ತ ಹೆಜ್ಜೆಯಿಟ್ಟ ಕಿವೀಸ್

ಕೊಲಂಬೊ (ಪಿಟಿಐ): ವೇಗದ ಬೌಲರ್ ಮ್ಯಾಟ್ ಹೆನ್ರಿ (3ಕ್ಕೆ2) ಆರಂಭದಲ್ಲಿ ಶ್ರೀಲಂಕಾಕ್ಕೆ ಪೆಟ್ಟುಕೊಟ್ಟರೆ, ಎಡಗೈ ಸ್ಪಿನ್ನರ್ ರಚಿನ್ ರವೀಂದ್ರ (27ಕ್ಕೆ4) ಅವರು ಆತಿಥೇಯರ ಕುಸಿತಕ್ಕೆ ಕಾರಣರಾದರು. ಇದರಿಂದ ನ್ಯೂಜಿಲೆಂಡ್ ತಂಡ ಟಿ20 ವಿಶ್ವಕಪ್‌ನ ಸೂಪರ್ ಎಂಟರ ಪಂದ್ಯದಲ್ಲಿ ಬುಧವಾರ 61 ರನ್‌ಗಳ ಸುಲಭ ಜಯಗಳಿಸಿ ಸೆಮಿಫೈನಲ್‌ನತ್ತ ಹೆಜ್ಜೆಯಿಟ್ಟಿತು.

ಆತಿಥೇಯ ಶ್ರೀಲಂಕಾಕ್ಕೆ ಇನ್ನೊಂದು ಪಂದ್ಯ ಉಳಿದಿದ್ದರೂ, ಸತತ ಎರಡನೇ ಸೋಲಿನಿಂದಾಗಿ ನಾಲ್ಕರ ಘಟ್ಟದ ರೇಸ್‌ನಿಂದ ಹೊರಬಿತ್ತು. ನ್ಯೂಜಿಲೆಂಡ್ 3 ಪಾಯಿಂಟ್ಸ್ ಗಳಿಸಿದ್ದು, ಇಂಗ್ಲೆಂಡ್ ವಿರುದ್ಧ ಕೊನೆಯ ಪಂದ್ಯ ಆಡಲಿದೆ. ಎರಡು ಪಂದ್ಯ ಗೆದ್ದಿರುವ ಇಂಗ್ಲೆಂಡ್ ಈಗಾಗಲೇ ಸೆಮಿಫೈನಲ್ ತಲುಪಿದೆ.

ಪ್ರೇಮದಾಸ ಕ್ರೀಡಾಂಗಣದಲ್ಲಿ ಗೆಲುವಿಗೆ 169 ರನ್‌ಗಳ ಸವಾಲಿನ ಗುರಿ ಎದುರಿಸಿದ್ದ ಶ್ರೀಲಂಕಾ ತಂಡ ಉತ್ತಮ ಆರಂಭವನ್ನೇ ಪಡೆಯಲಿಲ್ಲ. ಮ್ಯಾಟ್ ಹೆನ್ರಿ (2–1–3–2), ಇನಿಂಗ್ಸ್‌ನ ಮೊದಲ ಎಸೆತದಲ್ಲೇ ಪಥುಮ್ ನಿಸಾಂಕ ವಿಕೆಟ್ ಪಡೆದರು. ಎರಡನೇ ಓವರಿನಲ್ಲಿ ಚರಿತ್ ಅಸಲಂಕಾ (5) ಅವರ ವಿಕೆಟ್ ಸಹ ಪಡೆದರು. ಹೀಗಾಗಿ ಲಂಕಾ ತೆವಳುತ್ತಾ ಸಾಗಿತು. ಪವರ್‌ಪ್ಲೇ ಅವಧಿಯಲ್ಲಿ 2 ವಿಕೆಟ್‌ಗೆ 20 ರನ್ ಗಳಿಸಿದ್ದ ಆತಿಥೇಯರು ಯಾವ ಹಂತದಲ್ಲೂ ಹೋರಾಟ ತೋರಲಿಲ್ಲ.

ಇದಕ್ಕೆ ಮೊದಲು, ಮಿಚೆಲ್ ಸ್ಯಾಂಟ್ನರ್ (47; 26ಎ, 4x2, 6x4) ಮತ್ತು ಕೋಲ್ ಮೆಕ್‌ಕೊಂಚಿ (ಅಜೇಯ 31, 23ಎ, 4x3, 6x2) ಅವರ ಅಮೋಘ ಪ್ರತಿ ಹೋರಾಟದಿಂದಾಗಿ ನ್ಯೂಜಿಲೆಂಡ್ ತಂಡ 7 ವಿಕೆಟ್‌ಗೆ 168 ರನ್‌ಗಳ ಸ್ಪರ್ಧಾತ್ಮಕ ಮೊತ್ತ ಗಳಿಸಿತ್ತು.

ಒಂದು ಹಂತದಲ್ಲಿ 2 ವಿಕೆಟ್‌ಗೆ 75 ರನ್ ಗಳಿಸಿದ್ದ ನ್ಯೂಜಿಲೆಂಡ್ ತಂಡವು, ಆಫ್ ಸ್ಪಿನ್ನರ್ ಮಹೀಷ ತೀಕ್ಷಣ (30ಕ್ಕೆ4) ದಾಳಿಗೆ ಸಿಲುಕಿ ಕುಸಿತ ಕಂಡಿತು; 84 ರನ್‌ಗಳಾಗುವಷ್ಟರಲ್ಲಿ 6 ವಿಕೆಟ್ ಕಳೆದುಕೊಂಡಿತು. ತೀಕ್ಷಣ (30ಕ್ಕೆ3) ಅವರು ಸತತ ಎಸೆತಗಳಲ್ಲಿ ರಚಿನ್ ರವೀಂದ್ರ (32) ಮತ್ತು ಮಾರ್ಕ್ ಚಾಪ್‌ಮನ್ ವಿಕೆಟ್‌ಗಳನ್ನು ಪಡೆದರು. ಎಡಗೈ ಸ್ಪಿನ್ನರ್ ದುನಿತ್ ವೆಲ್ಲಾಳಗೆ ಅವರು ಡೇರಿಲ್ ಮಿಚೆಲ್ (3) ವಿಕೆಟ್ ಪಡೆದು ಪ್ರೇಕ್ಷಕರಲ್ಲಿ ಸಂಭ್ರಮ ಮೂಡಿಸಿದ್ದರು.

ಆದರೆ ಅನುಭವಿ ಸ್ಯಾಂಟ್ನರ್ ಜೊತೆಗೂಡಿದ ಮೆಕ್‌ಕೊಂಚಿ ಅವರು ಏಳನೇ ವಿಕೆಟ್‌ಗೆ ಕೇವಲ 47 ಎಸೆತಗಳಲ್ಲಿ ಅಮೂಲ್ಯ 87 ರನ್ ಸೇರಿಸಿದ್ದರಿಂದ ನ್ಯೂಜಿಲೆಂಡ್ ಮೇಲುಗೈ ಪಡೆಯಿತು. ಕೊನೆಯ 24 ಎಸೆತಗಳಲ್ಲಿ 70 ರನ್‌ಗಳು ಹರಿದುಬಂದವು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 20 ಓವರುಗಳಲ್ಲಿ 7 ವಿಕೆಟ್‌ಗೆ 168 (ಫಿನ್ ಅಲೆನ್ 23, ರಚಿನ್ ರವೀಂದ್ರ 32, ಮಿಚೆಲ್ ಸ್ಯಾಂಟ್ನರ್ 47, ಕೋಲ್ ಮೆಕ್‌ಕೊಂಚಿ 31; ಮಹೀಷ ತೀಕ್ಷಣ 30ಕ್ಕೆ3, ದುಷ್ಮಂತ ಚಮೀರ 38ಕ್ಕೆ3); ಶ್ರೀಲಂಕಾ: 20 ಓವರುಗಳಲ್ಲಿ 8 ವಿಕೆಟ್‌ಗೆ 107 (ಕಮಿಂದು ಮೆಂಡಿಸ್ 31, ದುನಿತ್ ವೆಲ್ಲಾಳಗೆ 29; ಮ್ಯಾಟ್ ಹೆನ್ರಿ 3ಕ್ಕೆ2, ರಚಿನ್ ರವೀಂದ್ರ 27ಕ್ಕೆ4).

ಪಂದ್ಯದ ಆಟಗಾರ: ರಚಿನ್ ರವೀಂದ್ರ.



ನ್ಯೂಜಿಲೆಂಡ್ ತಂಡದ ಮಿಚೆಲ್ ಸ್ಯಾಂಟ್ನರ್ (ಎಡ) ಹಾಗೂ ಕೋಲ್ ಮೆಕ್‌ಕೊಂಚಿ ಜೊತೆಯಾಟ ಎಎಫ್‌ಪಿ ಚಿತ್ರ

'ಸೂಪರ್ 8' ಹಂತದ ಅಂಕಪಟ್ಟಿ (ಎರಡನೇ ಗುಂಪು)

ತಂಡ	ಪಂದ್ಯ	ಜಯ	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಇಂಗ್ಲೆಂಡ್	2	2	0	0	4	1.491
ನ್ಯೂಜಿಲೆಂಡ್	2	1	0	1	3	3.050
ಪಾಕಿಸ್ತಾನ	2	0	1	1	1	-0.461
ಶ್ರೀಲಂಕಾ	2	0	2	0	0	-2.800

ಕಲಬುರಗಿ ಐಟಿಎಫ್ ಟೆನಿಸ್ ಮಾರ್ಚ್ 1ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭರವಸೆಯ ಆಟಗಾರ್ತಿ ವೈಷ್ಣವಿ ಅಡ್ಕರ್ ಅವರು ಕಲಬುರಗಿಯಲ್ಲಿ ಮಾರ್ಚ್ 1ರಿಂದ 8ರ ವರೆಗೆ ನಡೆಯಲಿರುವ ಐಟಿಎಫ್ ಡಬ್ಲ್ಯು35 ಟೆನಿಸ್ ಟೂರ್ನಿಯಲ್ಲಿ ಭಾರತದ ಸವಾಲು ಮುನ್ನಡೆಸಲಿದ್ದಾರೆ.

ಪುಣೆಯ 21 ವರ್ಷ ವಯಸ್ಸಿನ ವೈಷ್ಣವಿ ಅವರು ಬೆಂಗಳೂರಿನಲ್ಲಿ ಭಾನುವಾರ ಮುಕ್ತಾಯಗೊಂಡ ಐಟಿಎಫ್ ಡಬ್ಲ್ಯು100 ಟೂರ್ನಿಯಲ್ಲಿ ರನ್ನರ್ಸ್‌ಅಪ್ ಆಗಿದ್ದರು. ಆ ಮೂಲಕ, 2009ರಲ್ಲಿ ಡಬ್ಲ್ಯು100 ದರ್ಜೆಯ ಟೆನಿಸ್ ಟೂರ್ನಿಯಲ್ಲಿ ಫೈನಲ್ ತಲುಪಿದ್ದ ದಿಗ್ಗಜ ಆಟಗಾರ್ತಿ ಸಾನಿಯಾ ಮಿರ್ಜಾ ಅವರ ಸಾಲಿಗೆ ಸೇರ್ಪಡೆಯಾಗಿದ್ದರು.

ಅನುಭವಿ ಆಟಗಾರ್ತಿ ಶ್ರೀವಲ್ಲಿ ರಶ್ಮಿಕಾ ಭಮಿಡಿಪಾಟಿ, ಅಂಕಿತಾ ರೈನಾ, ಆಕಾಂಕ್ಷಾ ದಿಲೀಪ್ ನಿಟ್ಟುರೆ, ಶ್ರುತಿ ಅಹ್ಲಾವತ್ ಹಾಗೂ ಸೋನಾಲಿ ಪಾಟೀಲ್ ಅವರು ಸಿಂಗಲ್ಸ್ ಮುಖ್ಯ ಸುತ್ತಿನಲ್ಲಿರುವ ಭಾರತದ ಇತರ ಆಟಗಾರ್ತಿಯರು.

ವಿಶ್ವ ಕ್ರಮಾಂಕದಲ್ಲಿ 443ನೇ ಸ್ಥಾನದಲ್ಲಿರುವ, ಥಾಯ್ಲೆಂಡ್‌ನ ಅಚಿಸಾ ಚಾಂಟಾ ಹಾಗೂ ನೆದರ್ಲೆಂಡ್ಸ್‌ನ ಜಾಸ್ಮಿನ್ ಗಿಂಬ್ರೆರೆ (453) ಕ್ರಮವಾಗಿ ಮೊದಲ ಎರಡು ಶ್ರೇಯಾಂಕ ಪಡೆದಿದ್ದಾರೆ. ಶ್ರೀವಲ್ಲಿ ಮೂರನೇ ಶ್ರೇಯಾಂಕ ಪಡೆದಿದ್ದಾರೆ.



ಭಾರತದ ವೈಷ್ಣವಿ ಅಡ್ಕರ್

ರಣಜಿ ಫೈನಲ್‌ಗೆ ಕಾವೇರಿಸಿದ ಡೋಗ್ರಾ ಡಿಚ್ಚಿ

ದೊಡ್ಡ ಮೊತ್ತ ಪೇರಿಸಿದ ಜಮ್ಮು–ಕಾಶ್ಮೀರ ಬ್ಯಾಟರ್‌ಗಳು • ಕರ್ನಾಟಕದ ಮುಂದೆ ಕಠಿಣ ಹಾದಿ

• ಗಿರೀಶ ದೊಡ್ಡಮನಿ

ಹುಬ್ಬಳ್ಳಿ: ಬುಧವಾರ ಬೆಳಿಗ್ಗೆ ಸೂರ್ಯನ ತಾಪ ಏರುತ್ತಿದ್ದ ಹೊತ್ತಿನಲ್ಲಿ ಕರ್ನಾಟಕ ತಂಡದ ಕ್ಷೇತ್ರರಕ್ಷಕನಿಗೆ ಡಿಚ್ಚಿ ಹೊಡೆದ ಜಮ್ಮು–ಕಾಶ್ಮೀರ ತಂಡದ ನಾಯಕ ಪಾರಸ್ ಡೋಗ್ರಾ ಬಿಸಿ ಚರ್ಚೆಗೆ ಗ್ರಾಸವಾದರು. ಸಂಜೆ ಮಳೆ–ಮಂದಬೆಳಕಿನಿಂದ ಆಟ ಸ್ಥಗಿತವಾದ ನಂತರ ಪಾರಸ್ ತಮ್ಮ ಕೃತ್ಯಕ್ಕೆ ದಂಡ ತೆತ್ತರು.

ಆದರೂ ಪ್ರವಾಸಿ ತಂಡದಲ್ಲಿ ಸಂತಸ ಮತ್ತು ಆತ್ಮವಿಶ್ವಾಸಗಳು ಮನೆಮಾಡಿದ್ದವು. ಏಕೆಂದರೆ ಇಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಫೈನಲ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಕರ್ನಾಟಕದ ಎದುರು ಕಾಶ್ಮೀರ ತಂಡವು 156 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 527 ರನ್ ಗಳಿಸಿದೆ. ಇದರಲ್ಲಿ ಡೋಗ್ರಾ (70; 166ಎಸೆತ, 4X8) ಅರ್ಧಶತಕವೂ ಸೇರಿದೆ. ಪ್ರವಾಸಿ ತಂಡದ ಒಟ್ಟು ಐವರು ಬ್ಯಾಟರ್‌ಗಳು ಅರ್ಧಶತಕ ಗಳಿಸಿದರು. ಶುಭಂ ಪುಂದಿರ ಮಂಗಳವಾರ ಶತಕ ದಾಖಲಿಸಿದ್ದರು.

ಇದೆಲ್ಲದರ ನಡುವೆ ಡೋಗ್ರಾ ಅವರ ಇನಿಂಗ್ಸ್ ಹಲವು ನಾಟಕೀಯ ಘಟನೆಗಳಿಗೆ ಕಾರಣವಾಯಿತು. ಸಾಮಾಜಿಕ ಜಾಲತಾಣಗಳಲ್ಲಿ ಕಿಚ್ಚು ಹಚ್ಚಿತು. ಊಟದ ವಿರಾಮಕ್ಕೂ ಮುನ್ನ ಪ್ರಸಿದ್ಧ ಕೃಷ್ಣ (101ನೇ ಓವರ್) ಹಾಕಿದ ಎಸೆತದಲ್ಲಿ ಬೌಂಡರಿ ಗಳಿಸಿದರು. ಆ ಸಂದರ್ಭದಲ್ಲಿ ಸಿಲ್ಲಿ ಪಾಯಿಂಟ್‌ನಲ್ಲಿದ್ದ ಬದಲೀ ಫೀಲ್ಡರ್ ಕೆ.ವಿ. ಅನೀಶ್ ಬಳಿ ತೆರಳಿ ಮಾತಿನ ಚಕಮಕಿ ನಡೆಸಿದರು. ಅನೀಶ್ ಹೆಲ್ಮೆಟ್‌ಗೆ ಡೋಗ್ರಾ ಡಿಚ್ಚಿ ಹೊಡೆದರು. ಮಯಂಕ್ ಅಗರವಾಲ್ ಓಡಿ ಬಂದು ಅನೀಶ್ ಬೆಂಬಲಕ್ಕೆ ನಿಂತರು. ಪರಿಸ್ಥಿತಿ ಕೈಮೀರದಂತೆ ಅಂಪೈರ್‌ಗಳು ನೋಡಿಕೊಂಡರು. ಕರ್ನಾಟಕದ ನಾಯಕ ದೇವದತ್ತ ಪಡಿಕ್ಕಲ್ ಅಂಪೈರ್ ಬಳಿ ದೂರಿದರು.

ಮಂಗಳವಾರ ಕ್ರೀಸ್‌ಗೆ ಬಂದಿದ್ದ ಡೋಗ್ರಾ ಅವರ ಕ್ಯಾಚ್ ಕೈಚೆಲ್ಲಿ ಅನೀಶ್ ಒಂದು ಜೀವದಾನ ಕೂಡ ನೀಡಿದ್ದರು. ವೈಶಾಖ ಎಸೆತದಲ್ಲಿ ಬಲಗೈ ಹೆಬ್ಬೆರಳಿಗೆ ಪೆಟ್ಟಾಗಿದ್ದರಿಂದ ಡೋಗ್ರಾ ನಿವೃತ್ತರಾಗಿ ಪೆವಿಲಿಯನ್‌ಗೆ ಮರಳಿದ್ದರು. ಆಗ 9 ರನ್ ಗಳಿಸಿದ್ದರು.

ಎರಡನೇ ದಿನದಾಟದಲ್ಲಿ ಶುಭಂ ಮತ್ತು ಅಬ್ದುಲ್ ಸಮದ್ ಅವರು ಔಟಾದ ನಂತರ ಡೋಗ್ರಾ ಕ್ರೀಸ್‌ಗೆ ಬಂದರು. ಕನ್ಹಯ್ಯಾ ವಾಧ್ವಾನ್ (70; 109ಎ) ಅವರೊಂದಿಗೆ 110 ರನ್ ಸೇರಿಸಿದರು.

ಭೋಜನ ವಿರಾಮದ ನಂತರದ ಆಟದಲ್ಲಿ ವಿದ್ಯಾಧರ್ ಪಾಟೀಲ ಎಸೆತವೊಂದು ಡೋಗ್ರಾ ಹೆಲ್ಮೆಟ್ ತಂತಿಗೆ ತಾಗಿ ಹೋಗಿ ಸ್ಟಂಪ್ ಮುಂದೆ ಪುಟಿಯಿತು. ಅದು ಸ್ಟಿಕ್‌ಗೆ ಬಡಿಯದಂತೆ ಡೋಗ್ರಾ ಕಾಲಿನಿಂದ ತಡೆದರು. ಇದಾಗಿ 12 ಓವರ್‌ಗಳ ನಂತರ ಶ್ರೇಯಸ್ ಬೌಲಿಂಗ್‌ನಲ್ಲಿಯೂ ಅವರ ಬ್ಯಾಟ್‌ಗೆ ಬಡಿದ ಚೆಂಡು ಸ್ಟಂಪ್‌ನತ್ತ ಧಾವಿಸಿತು. ಅದನ್ನೂ ತಡೆಯಲು ಅಡ್ಡಗಾಲು ಹಾಕಿದ ಡೋಗ್ರಾ ಪ್ರಯತ್ನ ವಿಫಲವಾಯಿತು.

ಕರ್ನಾಟಕ ಬೌಲರ್‌ಗಳ ಹರಸಾಹಸ: ಒಂಬತ್ತನೇ ಬಾರಿ ರಣಜಿ ಟ್ರೋಫಿ ಜಯದ ಮೇಲೆ ಕಣ್ಣಿಟ್ಟಿರುವ ಕರ್ನಾಟಕದ ಬೌಲರ್‌ಗಳಿಗೆ ಹುಬ್ಬಳ್ಳಿ ಕ್ರೀಡಾಂಗಣದ ಪಿಚ್ ಕಠಿಣ ಪರೀಕ್ಷೆಯೊಡ್ಡಿದೆ. ಸತತ ಎರಡನೇ ದಿನವೂ ಬ್ಯಾಟರ್‌ಗಳಿಗೇ ಮಣೆ ಹಾಕಿತು.

ಭಾರತ ತಂಡದ ಆಟಗಾರ ಪ್ರಸಿದ್ಧ ಕೃಷ್ಣ ಶಾರ್ಟ್ ಪಿಚ್ ಎಸೆತಗಳು, ವಿದ್ಯಾಧರ್ ಮತ್ತು ವೈಶಾಖ ಅವರ ನಿಖರ ದಾಳಿ ಹೆಚ್ಚು ಪರಿಣಾಮ ಬೀರಲಿಲ್ಲ. ಊಟಕ್ಕೂ ಮುನ್ನ ಶುಭಂ ವಿಕೆಟ್ ಪಡೆಯುವಲ್ಲಿ ವಿದ್ಯಾಧರ್ ಹಾಗೂ ಸಮದ್ ವಿಕೆಟ್ ಉರುಳಿಸುವಲ್ಲಿ ಪ್ರಸಿದ್ಧ ಯಶಸ್ವಿಯಾದರು.

ಆದರೆ ಎರಡನೇ ಅವಧಿಯಲ್ಲಿ ಪ್ರವಾಸಿ ಬಳಗದ ಖಾತೆಗೆ 98 ರನ್‌ಗಳು ಹರಿದುಬಂದವು. ಕೊನೆಯ ಅವಧಿಯಲ್ಲಿ ಕನ್ಹಯ್ಯಾ ವಿಕೆಟ್ ಪಡೆದ ಸ್ಪಿನ್ನರ್ ಶಿಖರ್ ಶೆಟ್ಟಿ ನಿಟ್ಟುಸಿರುಬಿಟ್ಟರು. ಆದರೆ ಅರ್ಧಶತಕ ಗಳಿಸಿರುವ ಸಾಹಿಲ್ ಲೂತ್ರಾ (ಬ್ಯಾಟಿಂಗ್ 57) ಮತ್ತು ಅಬೀದ್ ಮುಷ್ತಾಕ್ (ಬ್ಯಾಟಿಂಗ್ 20) ಕ್ರೀಸ್‌ನಲ್ಲಿದ್ದಾರೆ. ಮಂದ ಬೆಳಕು ಮತ್ತು ಮಳೆಯ ಕಾರಣ 4.20ರ ವೇಳೆಗೆ ದಿನದಾಟ ಸ್ಥಗಿತವಾಯಿತು.



ಜಮ್ಮು ಮತ್ತು ಕಾಶ್ಮೀರ ತಂಡದ ನಾಯಕ ಪಾರಸ್ ಡೋಗ್ರಾ ಅವರು ಕರ್ನಾಟಕದ ಕೆ.ವಿ.ಅನೀಶ್ ಅವರಿಗೆ ಡಿಚ್ಚಿ ಹೊಡೆದು ಮಾತಿನ ಚಕಮಕಿಗೆ ಮುಂದಾದಾಗ ಮಯಂಕ್ ಅಗರವಾಲ್ ಮಧ್ಯಪ್ರವೇಶಿಸಿದರು ಚಿತ್ರ: ಗೋವಿಂದರಾಜ ಜವಳಿ

ಪಾರಸ್ ಡೋಗ್ರಾಗೆ ದಂಡ

ರಣಜಿ ಟ್ರೋಫಿ ಫೈನಲ್‌ನಲ್ಲಿ ಕರ್ನಾಟಕದ ಕೆ.ವಿ. ಅನೀಶ್ ಅವರ ತಲೆಗೆ ಡಿಚ್ಚಿ ಹೊಡೆದ ಜಮ್ಮು–ಕಾಶ್ಮೀರ ತಂಡದ ನಾಯಕ ಪಾರಸ್ ಡೋಗ್ರಾ ಅವರಿಗೆ ದಂಡ ವಿಧಿಸಲಾಗಿದೆ.

ಪಂದ್ಯದ ಸಂಭಾವನೆಯ ಶೇ 50ರಷ್ಟು ಮೊತ್ತವನ್ನು ಅವರು ದಂಡರೂಪದಲ್ಲಿ ನೀಡಬೇಕು. ಈ ಕುರಿತು ರೆಫರಿ ವಿ.ನಾರಾಯಣನ್ ಕುಟ್ಟಿ ಅವರು ಪಂದ್ಯವು ಪೂರ್ಣಗೊಂಡ ನಂತರ ಅಧಿಕೃತ ಹೇಳಿಕೆ ಬಿಡುಗಡೆ ಮಾಡುವ ಸಾಧ್ಯತೆ ಇದೆ.

41 ವರ್ಷದ ಡೋಗ್ರಾ ಅವರ ನಡವಳಿಕೆ ಕ್ರಿಕೆಟ್ ನಿಯಮದ ಉಲ್ಲಂಘನೆ ಎನ್ನಲಾಗಿದೆ.

'ಆಟದಲ್ಲಿ ಕಾವೇರಿದ ವಾತಾವರಣದಲ್ಲಿ ಇವೆಲ್ಲವೂ ಸಾಮಾನ್ಯ ಸಂಗತಿಗಳು. ಅದು ಅಷ್ಟಕ್ಕೆ ಮುಗಿದ ವಿಷಯ' ಎಂದು ದಿನದಾಟದ ನಂತರ ಡೋಗ್ರಾ ಸುದ್ದಿಗಾರರಿಗೆ ಹೇಳಿದರು. ಡೋಗ್ರಾ ನಡವಳಿಕೆಯು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಟೀಕೆಗೆ ಒಳಗಾಗಿದೆ.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್:
ಜಮ್ಮು ಮತ್ತು ಕಾಶ್ಮೀರ: 6 ವಿಕೆಟ್‌ಗೆ 527 (156 ಓವರ್‌ಗಳಲ್ಲಿ)
(ಮಂಗಳವಾರ: 2 ವಿಕೆಟ್‌ಗೆ 284)
ಶುಭಂ ಸಿ ಸಬ್ (ಅನೀಶ್) ಬಿ ವಿದ್ಯಾಧರ್ 121
ಪಾರಸ್ ಬಿ ಶ್ರೇಯಸ್ 70
ಸಮದ್ ಸಿ ಕೃತಿಕ್ ಬಿ ಪ್ರಸಿದ್ಧ 61
ಕನ್ಹಯ್ಯ ಸಿ ರಾಹುಲ್ ಬಿ ಶಿಖರ್ 70
ಸಾಹಿಲ್ ಬ್ಯಾಟಿಂಗ್ 57
ಅಬಿದ್ ಬ್ಯಾಟಿಂಗ್ 20
ಇತರೆ: 34 (ಬೈ 14, ಲೆಗ್‌ಬೈ 16, ವೈಡ್ 4)
ವಿಕೆಟ್ ಪತನ: 3–303 (ಶುಭಂ ಪುಂದಿರ, 97.2), 4–307 (ಅಬ್ದುಲ್ ಸಮದ್, 98.1), 5–417 (ಕನ್ಹಯ್ಯ ವಾಧ್ವಾನ್, 130.1), 6–471 (ಪಾರಸ್ ಡೋಗ್ರಾ, 142.4).
ಬೌಲಿಂಗ್: ವಿದ್ಯಾಧರ್ ಪಾಟೀಲ 29–2–104–1, ವೈಶಾಖ ವಿಜಯಕುಮಾರ್ 31–10–60–0, ಪ್ರಸಿದ್ಧ ಕೃಷ್ಣ 29–7–90–3, ಶ್ರೇಯಸ್ ಗೋಪಾಲ್ 33–2–130–1, ಶಿಖರ್ ಶೆಟ್ಟಿ 32–1–112–1, ಕರುಣ್ ನಾಯರ್ 2–1–1–0.

ವಿಂಡೀಸ್ ಬೀಸಾಟಕ್ಕೆ ವೇಗದ ಸವಾಲು

ಅಹಮದಾಬಾದ್ (ಪಿಟಿಐ): ಬೀಸಾಟವಾಡುವ ವೆಸ್ಟ್ ಇಂಡೀಸ್ ತಂಡದ ಸಾಮರ್ಥ್ಯಕ್ಕೆ ಗುರುವಾರ ದಕ್ಷಿಣ ಆಫ್ರಿಕಾ ತಂಡದಿಂದ ಸತ್ವಪರೀಕ್ಷೆ ಎದುರಾಗಲಿದೆ. ಟಿ20 ವಿಶ್ವಕಪ್ ಸೂಪರ್ ಎಂಟರ ಹಂತದಲ್ಲಿ ಅಜೇಯವಾಗಿರುವ ಈ ಎರಡು ತಂಡಗಳು ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಸೆಮಿಫೈನಲ್ ಸ್ಥಾನಕ್ಕಾಗಿ ಹಣಾಹಣಿ ನಡೆಸಲಿವೆ.

ಫೇವರೀಟ್ ತಂಡವಾಗಿರುವ ಭಾರತ ವಿರುದ್ಧ ಇದೇ ಕ್ರೀಡಾಂಗಣದಲ್ಲಿ 76 ರನ್‌ಗಳ ಅಧಿಕಾರಯುತ ಗೆಲುವು ದಾಖಲಿಸಿರುವ ಏಡನ್ ಮರ್ಕರಂ ಪಡೆ ಈ ಪಂದ್ಯವನ್ನು ಆಡಲು ಇಳಿಯುತ್ತಿದೆ. ವೆಸ್ಟ್ ಇಂಡೀಸ್ ತಂಡ, ಮುಂಬೈನಲ್ಲಿ ನಡೆದ ಸೂಪರ್ ಎಂಟರ ಇನ್ನೊಂದು ಪಂದ್ಯದಲ್ಲಿ ಬ್ಯಾಟಿಂಗ್ ಪರಾಕ್ರಮ ಪ್ರದರ್ಶಿಸಿ ಜಿಂಬಾಬ್ವೆ ವಿರುದ್ಧ 107 ರನ್‌ಗಳ ದೊಡ್ಡ ಗೆಲುವು ಸಾಧಿಸಿದೆ.

'ಪವರ್‌ಹಿಟ್ಟರ್'ಗಳ ಪಡೆಯನ್ನೇ ಹೊಂದಿರುವ ವೆಸ್ಟ್ ಇಂಡೀಸ್ ತಂಡ ಕೆಲವೇ ಓವರುಗಳ ಅಂತರದಲ್ಲಿ ಪಂದ್ಯದ ದಿಕ್ಕನ್ನು ಬದಲಾಯಿಸುವ ಸಾಮರ್ಥ್ಯ ಹೊಂದಿದೆ. ಆದರೆ ಸಮತೋಲನ ಹೊಂದಿರುವ ದಕ್ಷಿಣ ಆಫ್ರಿಕಾದ ದಾಳಿಯನ್ನು ಅದು ಹೇಗೆ ನಿಭಾಯಿಸಲಿದೆ ಎಂಬುದು ಕುತೂಹಲಕ್ಕೆ ಕಾರಣವಾಗಿದೆ. ಮಾರ್ಕೊ ಯಾನ್ಸೆನ್, ಕೇಶವ ಮಹಾರಾಜ್, ಕಗಿಸೊ ರಬಾಡ ಮತ್ತು ಲುಂಗಿ ಎನ್‌ಗಿಡಿ ಅವರನ್ನು ಹೊಂದಿರುವ ಹರಿಣಪಡೆಯು ಬೌಲಿಂಗ್ ವೈವಿಧ್ಯ ಹೊಂದಿದೆ.

ದಕ್ಷಿಣ ಆಫ್ರಿಕಾದ ಬ್ಯಾಟಿಂಗ್ ಸಹ ಉತ್ತಮವಾಗಿದೆ. ಅನುಭವಿ ಡೇವಿಡ್ ಮಿಲ್ಲರ್ ಆಪತ್ಬಾಂಧವನ ಪಾತ್ರವನ್ನು ನಿಭಾಯಿಸುತ್ತಿದ್ದಾರೆ. ಭಾರತ ವಿರುದ್ಧವೂ ಅವರು ನಿರ್ಣಾಯಕ ಆಟ ಆಡಿದ್ದರು.

ಮಧ್ಯಾಹ್ನದ ಪಂದ್ಯ: ಈ ಹಿಂದೆ ಅಹಮದಾಬಾದಿನಲ್ಲಿ ಪಂದ್ಯಗಳು ರಾತ್ರಿ ನಡೆದಿದ್ದವು. ಈ ಪಂದ್ಯ ಮಧ್ಯಾಹ್ನ ನಿಗದಿಯಾಗಿರುವ ಕಾರಣ ಇಬ್ಬನಿಯ ಪಾತ್ರ ಎದುರಾಗದು. ದಕ್ಷಿಣ ಆಫ್ರಿಕಾ ತನ್ನ ಹೆಚ್ಚಿನ ಪಂದ್ಯಗಳನ್ನು ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಆಡಿರುವುದು ಆ ತಂಡಕ್ಕೆ ಸ್ವಲ್ಪ ಅನುಕೂಲವಾಗಬಹುದು.

ಭಾರತದ ಮೇಲೂ ಪರಿಣಾಮ: ವೆಸ್ಟ್ ಇಂಡೀಸ್ ಈ ಪಂದ್ಯ ಗೆದ್ದರೆ ಭಾರತಕ್ಕೆ ಅದು ತಲೆನೋವು ತರಲಿದೆ. ಮಾತ್ರವಲ್ಲ, ವೆಸ್ಟ್ ಇಂಡೀಸ್ ತಂಡದ ಸೆಮಿಫೈನಲ್ ಹಾದಿ ತೆರೆಯಲಿದೆ. ಆ ಮೂಲಕ ದಕ್ಷಿಣ ಆಫ್ರಿಕಾ ಸೆಮಿಫೈನಲ್ ಸ್ಥಾನ ಖಚಿತಪಡಿಸಿಕೊಳ್ಳಲು ಜಿಂಬಾಬ್ವೆ ವಿರುದ್ಧ ಪಂದ್ಯದವರೆಗೆ ಕಾಯಬೇಕಾಗುತ್ತದೆ. ಈ ಸನ್ನಿವೇಶದಲ್ಲಿ ಭಾರತ ನಾಲ್ಕರ ಘಟ್ಟ ತಲುಪಬೇಕಾದರೆ, ವೆಸ್ಟ್ ಇಂಡೀಸ್ ಮತ್ತು ಜಿಂಬಾಬ್ವೆ ತಂಡಗಳನ್ನು ದೊಡ್ಡ ಅಂತರದಲ್ಲಿ ಸೋಲಿಸಲೇಬೇಕಾಗುತ್ತದೆ. ಒಟ್ಟಾರೆ ಲೆಕ್ಕಾಚಾರ ಗುರುವಾರದ ಪಂದ್ಯಗಳ ಬಳಿಕ ನಿರ್ಣಾಯಕ ಸ್ವರೂಪ ಪಡೆಯಲಿದೆ.



ಶಿಮ್ರಾನ್ ಹೆಟ್ಮೆಯರ್

ಚಳಿಗಾಲದ ಕೂಟ: ಟೀಮ್ ಪ್ರಶಸ್ತಿ ಉಳಿಸಿಕೊಂಡ ಸೇನೆ

ಸ್ವರ್ಣ ಜಯಿಸಿದ ರಾಜ್ಯದ ಭವಾನಿ

ಶ್ರೀನಗರ (ಪಿಟಿಐ): ಕರ್ನಾಟಕದ ಅನುಭವಿ ಸ್ಕೀಯಿಂಗ್ ಪಟು ಭವಾನಿ ತೆಕ್ಕಡ ನಂಜುಂಡ ಅವರು, ಗುಲ್ಮಾರ್ಗ್‌ನಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ಚಳಿಗಾಲದ ಕ್ರೀಡಾಕೂಟದ ನಾರ್ಡಿಕ್ ಮಹಿಳಾ ಸ್ಪ್ರಿಂಟ್ 1.5 ಕಿ.ಮೀ. ವಿಭಾಗದಲ್ಲಿ ಬುಧವಾರ ಸ್ವರ್ಣ ಗೆದ್ದುಕೊಂಡರು. ಕೂಟದಲ್ಲಿ ಭವಾನಿ ಅವರಿಗೆ ಇದು ಮೂರನೇ ಪದಕ.

ಕೊಡಗಿನ ಭವಾನಿ ಅವರು 15 ಕಿ.ಮೀ. ಹಾಗೂ 10 ಕಿ.ಮೀ. ರಿಲೇ ಸ್ಪರ್ಧೆಗಳಲ್ಲಿ ಕಂಚು ಜಯಿಸಿದ್ದರು. ಈ ಕೂಟದ ಎಲ್ಲ ಆರೂ ಆವೃತ್ತಿಗಳಲ್ಲಿ ಭಾಗವಹಿಸಿರುವ ಅವರು ಕಳೆದ ಆವೃತ್ತಿಯಲ್ಲಿ ಹ್ಯಾಟ್ರಿಕ್ ಚಿನ್ನ ಗೆದ್ದು ಗಮನ ಸೆಳೆದಿದ್ದರು.

'ಈ ಚಿನ್ನದ ಪದಕವನ್ನು ತಂದೆ–ತಾಯಿಗೆ ಅರ್ಪಿಸುವೆ. ಚಳಿಗಾಲದ ಕೂಟಗಳಲ್ಲಿ ನಾನು ಸತತವಾಗಿ ಭಾಗವಹಿಸುತ್ತಿದ್ದರೂ ನನ್ನ ಪೋಷಕರು ಈವರೆಗೆ ಇಲ್ಲಿನ ಹಿಮಗುಡ್ಡಗಳನ್ನು ನೋಡಿಲ್ಲ. ಅವರು ಮುಂದೊಂದು ದಿನ ಗುಲ್ಮಾರ್ಗ್‌ಗೆ ಬಂದು ಹಿಮವನ್ನೂ, ನಾನು ಪದಕ ಗೆಲ್ಲುವುದನ್ನೂ ನೋಡುತ್ತಾರೆಂಬ ಭರವಸೆ ಇದೆ' ಎಂದರು.

ಕ್ರಾಸ್ ಕಂಟ್ರಿ ಸ್ಕೀಯಿಂಗ್ ವಿಶ್ವಕಪ್‌ನಲ್ಲಿ ಭಾಗವಹಿಸಿದ ದೇಶದ ಮೊದಲ ಮಹಿಳಾ ಅಥ್ಲೀಟ್ ಎಂಬ ಗೌರವವೂ ಇವರದ್ದು.

ಸೇನೆಗೆ ಪ್ರಶಸ್ತಿ: ಭಾರತೀಯ ಸೇನಾಪಡೆಯ ತಂಡವು ಬುಧವಾರ ಮುಕ್ತಾಯಗೊಂಡ ಈ ಕ್ರೀಡಾಕೂಟದ ಟೀಮ್ ಚಾಂಪಿಯನ್‌ಷಿಪ್‌ಅನ್ನು ತನ್ನಲ್ಲೇ ಉಳಿಸಿಕೊಂಡಿತು.

ಸೇನಾಪಡೆಯ ಅಥ್ಲೀಟ್‌ಗಳು 9 ಚಿನ್ನ ಸೇರಿ ಒಟ್ಟು 23 ಪದಕಗಳನ್ನು ಬಾಚಿಕೊಂಡರು. ಹಿಮಾಚಲ ಪ್ರದೇಶ (14 ಪದಕ; 6 ಚಿನ್ನ, 7 ಬೆಳ್ಳಿ, 1 ಕಂಚು) ಹಾಗೂ ಹರಿಯಾಣ (7 ಪದಕ; 4 ಸ್ವರ್ಣ, 2 ರಜತ ಹಾಗೂ 1 ಕಂಚು) ತಂಡಗಳು ಪದಕ ಪಟ್ಟಿಯಲ್ಲಿ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದುಕೊಂಡವು.

ಕೂಟದ ಸಮಾರೋಪ ಸಮಾರಂಭವು ಗುಲ್ಮಾರ್ಗ್‌ನ ಗಾಲ್ಫ್ ಕೋರ್ಸ್‌ನಲ್ಲಿ ಗುರುವಾರ ನಡೆಯಲಿದೆ. ಈ ಕೂಟದ ಮೊದಲ ಲೆಗ್ ಜನವರಿ 20ರಿಂದ 26ರ ವರೆಗೆ ಲಡಾಖ್‌ನಲ್ಲಿ ನಡೆದಿತ್ತು.



ಕರ್ನಾಟಕದ ಭವಾನಿ ತೆಕ್ಕಡ

ಕಿರಣ್, ತರುಣ್ ನಿರ್ಗಮನ

ಮುಲ್ಹೇಮ್ ಆನ್ ಡೆರ್ ರುಹುವಾ (ಜರ್ಮನಿ) (ಪಿಟಿಐ): ಭಾರತದ ಶಟ್ಲರ್‌ಗಳು ಇಲ್ಲಿ ನಡೆಯುತ್ತಿರುವ ಜರ್ಮನ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬುಧವಾರ ಮೊದಲ ಸುತ್ತಿನ ಪಂದ್ಯಗಳಲ್ಲೇ ಹೊರಬಿದ್ದು ನಿರಾಸೆ ಅನುಭವಿಸಿದರು.

ಅನುಭವಿ ಆಟಗಾರ ಕಿರಣ್ ಜಾರ್ಜ್ ಅವರು ಪುರುಷರ ಸಿಂಗಲ್ಸ್‌ನ 32ರ ಸುತ್ತಿನ ಪಂದ್ಯದಲ್ಲಿ 10-21, 20-22ರಿಂದ ಅಗ್ರ ಶ್ರೇಯಾಂಕದ ಆಟಗಾರ ಕ್ರಿಸ್ಟೊ ಪೊಪೊವ್ (ಫ್ರಾನ್ಸ್) ವಿರುದ್ಧ ಸೋತರು. ತರುಣ್ ಮನ್ನೆಪಲ್ಲಿ ಅವರು 18–21, 18–21ರಿಂದ ತೈವಾನ್‌ನ ವಾಂಗ್ ಟ್ಜು ವೀಯಿ ಅವರಿಗೆ ಮಣಿದರು.

ಮಹಿಳೆಯರ ಸಿಂಗಲ್ಸ್ ಪಂದ್ಯದಲ್ಲಿ ಮಾಳವಿಕಾ ಬನ್ಸೋಡ್ ಅವರು 21–19, 9–21, 19–21ರಿಂದ ಅಮೆರಿಕದ ಬೀವೆನ್ ಝಾಂಗ್ ಎದುರು ಪರಾಭವಗೊಂಡರು. ಅಗ್ರ ಶ್ರೇಯಾಂಕದ ವಾಂಗ್ ಝಿ ಯಿ (ಚೀನಾ) ಅವರು 21–9, 21–14ರಿಂದ ತಸ್ನೀಮ್ ಮೀರ್ ಅವರನ್ನು ಹಿಮ್ಮೆಟ್ಟಿಸಿದರು.

ಕೊನೆಗೂ ಗೆಲುವು ಸಾಧಿಸಿದ ಭಾರತ

ಹೋಬಾರ್ಟ್ (ಪಿಟಿಐ): ಎಫ್‌ಐಎಚ್ ಪ್ರೊ ಲೀಗ್ ಖುತುವಿನಲ್ಲಿ ಭಾರತ ತಂಡದ ಸೋಲಿನ ಸರಪಳಿ ಕೊನೆಗೂ ಮುರಿಯಿತು. ಹಾರ್ದಿಕ್ ಸಿಂಗ್ ನೇತೃತ್ವದ ತಂಡ ಬುಧವಾರ ನಡೆದ ಪಂದ್ಯದಲ್ಲಿ ಆತಿಥೇಯ ಆಸ್ಟ್ರೇಲಿಯಾ ತಂಡವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ 3–1 ಗೋಲುಗಳಿಂದ ಸೋಲಿಸಿತು. ನಿಗದಿ ಅವಧಿಯ ಆಟ 1–1 ಸಮಬಲಗೊಂಡಿತ್ತು.

ಆಸ್ಟ್ರೇಲಿಯಾ ವಿಶ್ವಕ್ರಮಾಂಕದಲ್ಲಿ ಮೂರನೇ ಸ್ಥಾನದಲ್ಲಿದ್ದು, ಈ ಗೆಲುವು ಭಾರತಕ್ಕೆ ಆತ್ಮವಿಶ್ವಾಸ ಗಳಿಸಲು ನೆರವಾಗಲಿದೆ. ಭಾರತ ಈ ಖುತುವಿನಲ್ಲಿ ಈ ಮೊದಲು ಆಡಿದ ಎಲ್ಲಾ ಏಳು ಪಂದ್ಯಗಳನ್ನು ಸೋತಿತ್ತು.

ಬುಧವಾರ ನಡೆದ ಪಂದ್ಯದ ಮೊದಲ ಮೂರು ಕ್ವಾರ್ಟರ್‌ಗಳಲ್ಲಿ ಎರಡೂ ತಂಡಗಳಿಂದ ಉತ್ತಮ ಪೈಪೋಟಿ ಕಂಡುಬಂದಿತು. ಆದರೆ ಈ ಅವಧಿ ಗೋಲುರಹಿತವಾಯಿತು. 49ನೇ ನಿಮಿಷ ಜೆರೆಮಿ ಹೇವಾರ್ಡ್ ಅವರು ಪೆನಾಲ್ಟಿ ಕಾರ್ನರ್‌ಅನ್ನು ಗೋಲಾಗಿ ಪರಿವರ್ತಿಸಿ ಆಸ್ಟ್ರೇಲಿಯಾ ತಂಡಕ್ಕೆ ಮುನ್ನಡೆ ಒದಗಿಸಿದರು. ಆದರೆ ಆತಿಥೇಯ ತಂಡದ ಸಂತಸ ಕ್ಷಣಿಕವಾಯಿತು. ಎರಡೇ ನಿಮಿಷಗಳ ನಂತರ ಶಿಲಾನಂದ ಲಾಕ್ರಾ ಫೀಲ್ಡ್ ಗೋಲಿನ ಮೂಲಕ ಭಾರತ ತಂಡ ಸಮಬಲ ಸಾಧಿಸಲು ನೆರವಾದರು.

ಶೂಟೌಟ್‌ನಲ್ಲಿ ಲಾಕ್ರಾ, ಮಣಿಂದರ್ ಸಿಂಗ್ ಹಾಗೂ ವಿಷ್ಣುಕಾಂತ್ ಸಿಂಗ್ ಅವರು ಚೆಂಡನ್ನು ಗುರಿತಲುಪಿಸಿದರು. ಆಸ್ಟ್ರೇಲಿಯಾ ಪರ ಹೇವಾರ್ಡ್ ಮಾತ್ರ ಚೆಂಡನ್ನು ಗುರಿಮುಟ್ಟಿಸುವಲ್ಲಿ ಯಶಸ್ವಿಯಾದರು. ಕನ್ನಡಿಗ ಗೋಲ್‌ಕೀಪರ್ ಎಚ್. ಶಶಿಕುಮಾರ್ ಮೋಹಿತ್ ಮಹತ್ವದ ಸೇವ್‌ಗಳೊಂದಿಗೆ ಮಿಂಚಿದರು.

ಭಾರತ ತಂಡವು, ಒಂಬತ್ತು ತಂಡಗಳ ಪ್ರೊ ಲೀಗ್‌ನಲ್ಲಿ ಎಂಟು ಪಂದ್ಯಗಳನ್ನು ಆಡಿದ್ದು, ನಾಲ್ಕು ಪಾಯಿಂಟ್ಸ್ ಗಳಿಸಿ ಎಂಟನೇ ಸ್ಥಾನದಲ್ಲಿದೆ.



ಭಾರತ ಮತ್ತು ಆಸ್ಟ್ರೇಲಿಯಾ ತಂಡದ ಆಟಗಾರರು ಚೆಂಡಿನ ಮೇಲೆ ನಿಯಂತ್ರಣಕ್ಕೆ ಮುಂದಾದರು 'ಎಕ್ಸ್' ಚಿತ್ರ